ಸೋಮವಾರ, ಜುಲೈ 24, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 204 | ಪುಟ 12
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ಕಲಿಯುವವರ ಕೈಹಿಡಿಯುವ 'ಚಪ್ಪಣಿ'

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭರ್ಜರಿ ಮಳೆ • ಅಪಾಯದ ಮಟ್ಟ ಮೀರಿದ ನದಿಗಳು

ಜಲಾಶಯಗಳ ಒಳಹರಿವು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾನುವಾರ ಬಿರುಸಿನ ಮಳೆಯಾಗಿದ್ದು, ಬಹುತೇಕ ಜಲಾಶಯಗಳಲ್ಲಿ ಒಳಹರಿವಿನ ಮಟ್ಟ ಏರಿಕೆಯಾಗಿದೆ.

ಹಲವು ಜಿಲ್ಲೆಗಳಲ್ಲಿ ಮನೆ ಮತ್ತು ರಸ್ತೆಗಳಿಗೆ ನೀರು ನುಗ್ಗಿದ್ದರಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಕೆಲ ಜಿಲ್ಲೆಗಳಲ್ಲಿ ಜಮೀನು ಜಲಾವೃತವಾಗಿದ್ದು, ಬೆಳೆ ನಷ್ಟವಾಗಿದೆ. ಮಳೆಯಿಂದಾಗಿ ಉತ್ತರಕನ್ನಡ, ಹಾವೇರಿ, ಧಾರವಾಡ, ಉಡುಪಿ, ಕೊಡಗು ಜಿಲ್ಲೆಗಳಲ್ಲಿ ಹಾಗೂ ಹಾಸನ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಶಾಲಾ-ಕಾಲೇಜುಗಳಿಗೆ ಸೋಮವಾರ ಜಿಲ್ಲಾಡಳಿತ ರಜೆ ಘೋಷಿಸಿದೆ.

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ಹಾಗೂ ಖಾನಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಡ್ಡೆಕೇರಿ, ಚಿಕ್ಕನಕೋಡ, ಹಡಿನಬಾಳ ಸೇರಿದಂತೆ 8ಕ್ಕೂ ಹೆಚ್ಚು ಗ್ರಾಮಗಳ 250ಕ್ಕಿಂತ ಹೆಚ್ಚು ಮನೆಗಳು ಜಲದಿಗ್ಬಂಧನಕ್ಕೆ ಒಳಗಾಗಿವೆ.

ನೀರಿನ ಮಟ್ಟ ಏರಿಕೆ: ಉತ್ತರ ಕನ್ನಡ ಜಿಲ್ಲೆಯಲ್ಲಿ ಸೂಪಾ, ಕದ್ರಾ, ಕೊಡಸಳ್ಳಿ ಜಲಾಶಯಗಳಲ್ಲಿ ಒಳ ಹರಿವಿನ ಪ್ರಮಾಣ ಗಣನೀಯ ಏರಿಕೆ ಕಂಡಿದೆ. ಹುಬ್ಬಳ್ಳಿಯ ತೋಳನಕೆರೆ ಭರ್ತಿಯಾಗಿ ಕೋಡಿ ಹರಿದಿದೆ. ಉಣಕಲ್ ಕೆರೆಯೂ ಮೂರು ದಿನಗಳಿಂದ ತುಂಬಿ ಹರಿಯುತ್ತಿದೆ.

ಜೊಯಿಡಾ ಭಾಗದ ಕೊಡಸಳ್ಳಿ ಜಲಾಶಯದಿಂದ 28 ಸಾವಿರ ಕ್ಯುಸೆಕ್, ಕದ್ರಾ ಜಲಾಶಯದಿಂದ 71 ಸಾವಿರ ಕ್ಯುಸೆಕ್ ನೀರನ್ನು ಕಾಳಿನದಿಗೆ ಹರಿಸಲಾಗಿದೆ.

ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವೆಡೆ ಉತ್ತಮ ಮಳೆಯಾಗಿದ್ದು, ಅರಸೀಕೆರೆ ಹೋಬಳಿಯ ಚೆಕ್‌ಡ್ಯಾಂಗಳು ಮತ್ತು ಗೋಕಟ್ಟೆಗಳು ತುಂಬಿವೆ. ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 59,500 ಕ್ಯುಸೆಕ್‌ಗೆ ಏರಿಕೆಯಾಗಿದ್ದು, ಒಂದೇ ದಿನದಲ್ಲಿ 5 ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹ ಹೆಚ್ಚಳವಾಗಿದೆ.

ಬೆಳಗಾವಿ ಜಿಲ್ಲೆಯ ರಕ್ಕಸಕೊಪ್ಪ ಜಲಾಶಯದಲ್ಲಿ 2,470.20 ಅಡಿಗಳಷ್ಟು ನೀರು ಸಂಗ್ರಹವಾಗಿದೆ. 'ಜಲಾಶಯ ಭರ್ತಿಗೆ ಇನ್ನು ನಾಲ್ಕು ಅಡಿ ಮಾತ್ರ ಬಾಕಿ ಇದೆ.

ಕೊಡಗು ಜಿಲ್ಲೆಯಲ್ಲಿ ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಪ್ರವಾಹ ಭೀತಿ ಎದುರಾಗಿದೆ. ಶಿವಮೊಗ್ಗ ಜಿಲ್ಲೆಯ ಗಾಜನೂರಿನ ತುಂಗಾ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಜಲಾಶಯಕ್ಕೆ 46,600 ಒಳಹರಿವು ಇದ್ದು, ಜಲಾಶಯದ 22 ಕ್ರಸ್ಟ್ ಗೇಟ್‌ಗಳ ಪೈಕಿ 21 ಗೇಟ್‌ಗಳ ಮೂಲಕ 50,000 ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ.

ಶೃಂಗೇರಿಯಲ್ಲಿ ತುಂಗಾ ನದಿ ಅಪಾಯ ಮಟ್ಟ ಮೀರಿ ಹರಿಯುತ್ತಿದೆ.

5ನೇ ಪುಟ ನೋಡಿ



ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ಶನಿವಾರ ರಾತ್ರಿಯಿಂದಲೇ ಧಾರಾಕಾರವಾಗಿ ಮಳೆಯಾಗುತ್ತಿದ್ದು, ತುಂಗಾನದಿ ಉಕ್ಕಿ ಹರಿಯುತ್ತಿದೆ. ನದಿ ದಂಡೆಯಲ್ಲೇ ಇರುವ ಶಾರದಾಪೀಠದ ಗುರುಗಳ ಸಂಧ್ಯಾವಂದನೆ ಮಂಟಪವು ಭಾನುವಾರ ಚಾವಣಿ ಮಾತ್ರ ಕಾಣಿಸುವಷ್ಟು ಮುಳುಗಿದೆ

ಇನ್ನೂ ನಾಲ್ಕು ದಿನ ಮಳೆ ಅಬ್ಬರ

ಬೆಂಗಳೂರು: ರಾಜ್ಯದ ಮಲೆನಾಡು, ಕರಾವಳಿ ಹಾಗೂ ಉತ್ತರ ಒಳನಾಡಿನ ಬಹುತೇಕ ಭಾಗದಲ್ಲಿ ಸೋಮವಾರದಿಂದ ನಾಲ್ಕು ದಿನಗಳ ಕಾಲ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಕರಾವಳಿ ವ್ಯಾಪ್ತಿಯ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಜುಲೈ 24 ರಂದು ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಅಂದೇ ಬೆಳಗಾವಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಕೋಲಾರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಜುಲೈ 25ಕ್ಕೆ ಬೀದರ್, ಕಲಬುರಗಿ, ಯಾದಗರಿ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಬಳ್ಳಾರಿ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಮಳೆಯ ಪ್ರಮಾಣ
(ಸೆಂಟಿ ಮೀಟರ್‌ಗಳಲ್ಲಿ)

ಕ್ಯಾಸಲ್‌ರಾಕ್ (ಉತ್ತರಕನ್ನಡ)	28
ಆಗುಂಬೆ (ಶಿವಮೊಗ್ಗ)	27
ಬಳಂಜ (ದಕ್ಷಿಣ ಕನ್ನಡ)	25.9
ಕಾರ್ಕಳ (ಉಡುಪಿ)	23.1
ನಿಲ್ಕುಂದ (ಉತ್ತರಕನ್ನಡ)	21
ಮಾಣಿ (ಶಿವಮೊಗ್ಗ)	21
ಬೆಂಗೂರು, ಕುಂಜಿಲ (ಕೊಡಗು)	20
ಕಾಪು (ಉಡುಪಿ)	18.1
ಮದೆ (ಕೊಡಗು)	17

*ಶನಿವಾರ ಬೆಳಿಗ್ಗೆ 8.30 ರಿಂದ ಭಾನುವಾರ ಬೆಳಿಗ್ಗೆ 8.30ರವರೆಗಿನ ಮಾಹಿತಿ

ಗುಜರಾತ್, ಮಹಾರಾಷ್ಟ್ರದಲ್ಲೂ ಭಾರಿ ಮಳೆ



ಅಹಮದಾಬಾದ್/ನವದೆಹಲಿ (ಪಿಟಿಐ): ಗುಜರಾತ್, ಮಹಾರಾಷ್ಟ್ರ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ. ದೆಹಲಿಯಲ್ಲಿ ಯಮುನಾ ನದಿ ಅಪಾಯ ಮಟ್ಟವನ್ನು ಮೀರಿದೆ. ಜುಲೈ 24ರಂದು ಗುಜರಾತ್‌ನ ವಿವಿಧೆಡೆ ಭಾರಿ ಮಳೆ ಸುರಿಯುವ ಸಾಧ್ಯತೆ ಇರುವುದರಿಂದ 'ಆರೆಂಜ್' ಅಲರ್ಟ್ ಘೋಷಿಸಲಾಗಿದೆ.

ಭಾರಿ ಮಳೆಯ ಪರಿಣಾಮ ಪ್ರವಾಹ ಪರಿಸ್ಥಿತಿ ತಲೆದೋರಿದ್ದ ಗುಜರಾತ್‌ನ ಜುನಾಗಢದಲ್ಲಿ ಭಾನುವಾರ ನೆರೆ ನೀರು ಕಡಿಮೆಯಾಗಿದ್ದು, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಹಪೀಡಿತ ಪ್ರದೇಶದಿಂದ ಮೂರು ಸಾವಿರ ಮಂದಿಯನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ ಎಂದೂ ಹೇಳಿದ್ದಾರೆ.

9ನೇ ಪುಟ ನೋಡಿ

ಸಾತ್ವಿಕ್–ಚಿರಾಗ್ ಜೋಡಿಗೆ ಕೊರಿಯಾ ಓಪನ್ ಕಿರೀಟ



ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ಜೋಡಿಯು ಭಾನುವಾರ ಕೊರಿಯಾ ಓಪನ್ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ಪ್ರಶಸ್ತಿ ಜಯಿಸಿತು.

ಫೈನಲ್ ಸ್ಕೋರ್			
ಸಾತ್ವಿಕ್–ಚಿರಾಗ್ (ಭಾರತ)	17	21	21
ಫಜರ್ ಅಲ್ಫಿಯಾನ್–ರಿಯಾನ್ ಆರ್ಡಿಯಂಟೊ (ಇಂಡೋನೇಷ್ಯಾ)	21	13	14

10 ಕ್ರೀಡಾ ಪುಟ

ಈ ವರ್ಷದಲ್ಲಿ ನಾಲ್ಕು ಪ್ರಶಸ್ತಿ
- ಸ್ವಿಸ್ ಓಪನ್ (ಮಾರ್ಚ್; ಬಾಸೆಲ್)
- ಏಷ್ಯನ್ ಚಾಂಪಿಯನ್‌ಷಿಪ್ (ಏಪ್ರಿಲ್; ದುಬೈ)
- ಇಂಡೊನೇಷ್ಯಾ ಓಪನ್ (ಜೂನ್; ಜಕಾರ್ತ)
- ಕೊರಿಯಾ ಓಪನ್ (ಜುಲೈ; ಯೋಸು)

ಪ್ರಚಾರಕ್ಕಾಗಿ ಕೇಂದ್ರದಿಂದ ₹3,064 ಕೋಟಿ ಖರ್ಚು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ತನ್ನ ಕಾರ್ಯಕ್ರಮಗಳು ಮತ್ತು ಯೋಜನೆಗಳ ಪ್ರಚಾರಕ್ಕಾಗಿ 2018–19ನೇ ಸಾಲಿನಿಂದ 2023ರ ಜುಲೈ 13ಕ್ಕೆ ಅನ್ವಯಿಸಿ ₹3,064 ಕೋಟಿ ವ್ಯಯಿಸಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಈಚೆಗೆ ರಾಜ್ಯಸಭೆಗೆ ತಿಳಿಸಿದೆ.

ಒಟ್ಟು ವೆಚ್ಚದಲ್ಲಿ ಮುದ್ರಣ ಮಾಧ್ಯಮಗಳ ಜಾಹೀರಾತುಗಳಿಗೆ ಹೆಚ್ಚು ವ್ಯಯಿಸಲಾಗಿದೆ. ಮುದ್ರಣ ಮಾಧ್ಯಮಕ್ಕೆ ₹1,338 ಕೋಟಿ, ವಿದ್ಯುನ್ಮಾನ ಮಾಧ್ಯಮಕ್ಕೆ ₹1,273 ಕೋಟಿ ಮತ್ತು ಬಹಿರಂಗ ಪ್ರಚಾರಕ್ಕೆ ₹452 ಕೋಟಿ ಖರ್ಚಾಗಿದೆ.

ದತ್ತಾಂಶದ ಪ್ರಕಾರ, 2018–19ನೇ ಸಾಲಿನಲ್ಲಿ ಜಾಹೀರಾತು ಮತ್ತು ಪ್ರಚಾರದ ಒಟ್ಟು ವೆಚ್ಚವು ₹1,179 ಕೋಟಿ ಇತ್ತು. ನಂತರದ ವರ್ಷಗಳಲ್ಲಿ ಈ ವೆಚ್ಚದಲ್ಲಿ ಗಣನೀಯ ಇಳಿಕೆ ಕಂಡುಬಂದಿದ್ದು, 2019–20ನೇ ಸಾಲಿನಲ್ಲಿ ₹708 ಕೋಟಿ, 2020–21ನೇ ಸಾಲಿನಲ್ಲಿ ₹409 ಕೋಟಿ ಮತ್ತು 2021–22ನೇ ಸಾಲಿನಲ್ಲಿ ₹315 ಕೋಟಿ ವ್ಯಯಿಸಲಾಗಿದೆ. 2022–23ನೇ ಸಾಲಿನಲ್ಲಿ ಪುನಃ ಏರಿಕೆ ಕಂಡುಬಂದಿದ್ದು, ₹408 ಕೋಟಿ ಖರ್ಚು ಮಾಡಲಾಗಿದೆ.



ಈ ವರ್ಷ ಏಪ್ರಿಲ್ ಮತ್ತು ಜುಲೈ 13ರ ಒಳಗೆ ಜಾಹೀರಾತಿಗಳ ಮೇಲೆ ಸರ್ಕಾರವು ₹43 ಕೋಟಿ ಖರ್ಚು ಮಾಡಿದೆ ಎಂದು ಹೇಳಲಾಗಿದೆ.

2018–19 ಮತ್ತು 2019–20ನೇ ಸಾಲಿನಲ್ಲಿ ವಿದ್ಯುನ್ಮಾನ ಮಾಧ್ಯಮಗಳ ಜಾಹೀರಾತುಗಳಿಗೆ ಸರ್ಕಾರ ಹೆಚ್ಚು ಹಣ ಖರ್ಚು ಮಾಡಿತ್ತು. ಬಳಿಕ ಮೂರು ಆರ್ಥಿಕ ವರ್ಷಗಳಲ್ಲಿ ವಿದ್ಯುನ್ಮಾನ ಮಾಧ್ಯಮಗಳ ಜಾಹೀರಾತುಗಳ ವೆಚ್ಚದ ಪಾಲಿನಲ್ಲಿ ಇಳಿಕೆ ಕಂಡುಬಂದಿತು ಎಂದು ಸರ್ಕಾರ ನೀಡಿರುವ ದತ್ತಾಂಶವನ್ನು ವಿಶ್ಲೇಷಿಸಿದ ವೇಳೆ ತಿಳಿದುಬಂದಿದೆ.

2018–19 ಸಾಲಿನಲ್ಲಿ ಬಹಿರಂಗ ಪ್ರಚಾರಕ್ಕೆ ಸರ್ಕಾರವು ₹235 ಕೋಟಿ ವ್ಯಯಿಸಿತ್ತು. 2022–23ನೇ ಸಾಲಿನಲ್ಲಿ ಈ ಮೊತ್ತವು ₹32 ಕೋಟಿಗೆ ಇಳಿದಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಈವರೆಗೆ ಬಹಿರಂಗ ಪ್ರಚಾರಕ್ಕೆ ಸರ್ಕಾರದಿಂದ ₹8.70 ಕೋಟಿ ಖರ್ಚಾಗಿದೆ.

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದ ಅಭೀರ್ ರಂಜನ್ ಬಿಸ್ವಾಸ್ ಅವರು ದತ್ತಾಂಶ ಸಂಗ್ರಹಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದ್ದರು. ಲಿಖಿತ ಉತ್ತರ ನೀಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, ಕೇಂದ್ರೀಯ ಸಂವಹನ ಬ್ಯೂರೊ (ಸಿಬಿಸಿ) ಹಲವು ಬಗೆಯ ಮಾಧ್ಯಮಗಳ ಮೂಲಕ ಕೈಗೊಂಡ ಪ್ರಚಾರ ಕಾರ್ಯಗಳ ಕುರಿತು ಸ್ವತಂತ್ರ ಸಂಸ್ಥೆಯೊಂದು ನಡೆಸಿದ 'ಅಖಿಲ ಭಾರತ ಸಮೀಕ್ಷೆ/ ಪರಿಣಾಮ ಮೌಲೀಕರಣ ಅಧ್ಯಯನ'ದಿಂದ ಈ ಮಾಹಿತಿ ದೊರಕಿದೆ ಎಂದರು.

ಹೆಚ್ಚುವರಿ ₹ 5 ಕೋಟಿ ಪ್ರಸ್ತಾವ ತಿರಸ್ಕೃತ

ಸಾಹಿತ್ಯ ಸಮ್ಮೇಳನ: ₹ 20 ಕೋಟಿಯಲ್ಲೇ ವೆಚ್ಚ ಭರಿಸಿ – ಆರ್ಥಿಕ ಇಲಾಖೆ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹಾವೇರಿಯಲ್ಲಿ ಜ. 6ರಿಂದ 8ರ ವರೆಗೆ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವೆಚ್ಚವಾಗಿರುವ ಹೆಚ್ಚುವರಿ ₹ 5 ಕೋಟಿ ನೀಡಲು ರಾಜ್ಯ ಸರ್ಕಾರ ನಿರಾಕರಿಸಿದೆ.

ಸಮ್ಮೇಳನದ ವೆಚ್ಚಕ್ಕೆ ರಾಜ್ಯ ಸರ್ಕಾರ ಈಗಾಗಲೇ ₹ 20 ಕೋಟಿ ಅನುದಾನ ನೀಡಿದೆ. ಆ ಮೊತ್ತದಲ್ಲಿಯೇ ಸಮ್ಮೇಳನಕ್ಕೆ ಆಗಿರುವ ಎಲ್ಲ ವೆಚ್ಚವನ್ನು ಭರಿಸಬೇಕು. ಹೆಚ್ಚುವರಿ ಅನುದಾನ ನೀಡಲು ಸಾಧ್ಯವಿಲ್ಲ ಎಂದು ಆರ್ಥಿಕ ಇಲಾಖೆ ಸ್ಪಷ್ಟವಾಗಿ ತಿಳಿಸಿದೆ.

ಹೆಚ್ಚುವರಿ ಅನುದಾನ ಕೋರಿಕೆಯ ಪ್ರಸ್ತಾವವನ್ನು ತಿರಸ್ಕೃತಗೊಂಡಿರುವ ಕುರಿತು ಹಾವೇರಿ ಜಿಲ್ಲಾಡಳಿತಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪತ್ರದ ಮುಖೇನ ಮಾಹಿತಿ ನೀಡಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಹಿತಿ ಬಂದಿರುವುದನ್ನು 'ಪ್ರಜಾವಾಣಿ'ಗೆ ಖಚಿತಪಡಿಸಿದ ಹಾವೇರಿ ಜಿಲ್ಲಾಧಿಕಾರಿ ರಘುನಂದನ ಮೂರ್ತಿ, ಹೆಚ್ಚುವರಿ ವೆಚ್ಚವಾಗಿರುವ ಅನುದಾನ ಬಿಡುಗಡೆ ಮಾಡುವಂತೆ ಇಲಾಖೆಗೆ ಮತ್ತೊಮ್ಮೆ ಎಲ್ಲ ವಿವರಗಳ ಸಹಿತ ಪತ್ರ ಬರೆಯಲಾಗುವುದು ಎಂದರು.

'ಸರ್ಕಾರ ನೀಡಿದ್ದ ₹ 20 ಕೋಟಿ ಅನುದಾನದ ಒಳಗೇ ಸಮ್ಮೇಳನದ ಖರ್ಚು ವೆಚ್ಚವನ್ನು ಭರಿಸಲು ಆರಂಭದಲ್ಲಿಯೇ ಅಂದಾಜಿಸಲಾಗಿತ್ತು. ಆದರೆ, ಸಮ್ಮೇಳನ ನಡೆದ ಮೂರೂ ದಿನ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದ ಕಾರಣ ಊಟದ ವೆಚ್ಚ ನಿರೀಕ್ಷೆಗೂ ಮೀರಿದೆ. ಹೀಗಾಗಿ, ಹೆಚ್ಚುವರಿಯಾಗಿ ಹಣ ವೆಚ್ಚವಾಗಿದೆ' ಎಂದು ತಿಳಿಸಿದರು.

'ಈ ಹಿಂದಿನ ಸಮ್ಮೇಳನಗಳಿಗೆ ಮೊದಲ ಮತ್ತು ಕೊನೆಯ ದಿನ ತಲಾ ಒಂದೊಂದು ಲಕ್ಷ, ಎರಡನೇ ದಿನ 50 ಸಾವಿರದಿಂದ 60 ಸಾವಿರ, ಹೀಗೆ ಸುಮಾರು 2.50 ಲಕ್ಷ ಜನರು ಬರುತ್ತಿದ್ದರು. ಆ ಅಂದಾಜಿನಲ್ಲಿ ವೆಚ್ಚ ಲೆಕ್ಕ ಹಾಕಿದ್ದೆವು. ಆದರೆ, ಈ ಸಮ್ಮೇಳನಕ್ಕೆ ಪ್ರತಿ ದಿನ ತಲಾ 2 ಲಕ್ಷ ಜನ ಬಂದಿದ್ದರು. ಸಮ್ಮೇಳನಗಳ ಇತಿಹಾಸದಲ್ಲಿಯೇ ಇಷ್ಟೊಂದು ಸಂಖ್ಯೆಯಲ್ಲಿ ಜನರು ಬಂದಿರಲಿಲ್ಲ. ಹೆಚ್ಚು ಜನರು ಬರುತ್ತಿರುವ ಬಗ್ಗೆ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಶಿವರಾಮ ಹೆಬ್ಬಾರ್ ಅವರ ಗಮನಕ್ಕೆ ತರಲಾಗಿತ್ತು. ಆಗ ಅವರು, ಭೋಜನ ವ್ಯವಸ್ಥೆಯಲ್ಲಿ ಯಾವುದೂ ಕಡಿಮೆ ಆಗದಂತೆ ನೋಡಿಕೊಳ್ಳಬೇಕು. ಹೆಚ್ಚುವರಿ ಅನುದಾನ ನೀಡುವಂತೆ ಆ ಮೇಲೆ ಕೇಳಬಹುದು ಎಂದಿದ್ದರು. ಮುಖ್ಯವಾಗಿ ಊಟದ ಬಿಲ್ ಜಾಸ್ತಿಯಾಗಿದೆ' ಎಂದೂ ವಿವರಿಸಿದರು.

'ಸಮ್ಮೇಳನಕ್ಕೆ 20 ಸಾವಿರ ಜನರು ನೋಂದಣಿ ಮಾಡಿಕೊಳ್ಳಬಹುದು ಎನ್ನುವುದು ಸಾಹಿತ್ಯ ಪರಿಷತ್ ನಿರೀಕ್ಷೆಯಾಗಿತ್ತು. ಆ ಮೂಲಕ, ನೋಂದಣಿಯಿಂದ ₹ 1 ಕೋಟಿ ಸಂಗ್ರಹವಾಗುವ ನಿರೀಕ್ಷೆ ಇತ್ತು. ಆದರೆ, 10 ಸಾವಿರ ಮಂದಿಯಷ್ಟೆ ನೋಂದಣಿ ಮಾಡಿಕೊಂಡಿದ್ದಾರೆ. ಹೀಗಾಗಿ ₹ 50 ಲಕ್ಷ ಕಡಿಮೆ ಆಯಿತು' ಎಂದು ಹೇಳಿದರು.

ಭೋಜನ ವ್ಯವಸ್ಥೆಗೆ ₹ 8 ಕೋಟಿ ವೆಚ್ಚ!

'ಭೋಜನ ವ್ಯವಸ್ಥೆಗೆ ₹ 4 ಕೋಟಿ ವೆಚ್ಚ ಅಂದಾಜಿಸಿದ್ದೆವು. ಅದು ₹ 8 ಕೋಟಿ ಆಗಿದೆ. ಅಲ್ಲದೆ, ಈ ಹಿಂದೆ ಸಮ್ಮೇಳನಗಳಿಗೆ ಅನುದಾನ ಹೊರತುಪಡಿಸಿ, ಆಯಾ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ಗೆ ಸರ್ಕಾರದಿಂದ ಪ್ರತ್ಯೇಕವಾಗಿ ಹಣ ಕೊಡಲಾಗಿತ್ತು. ಆದರೆ, ಈ ಬಾರಿ ಹಣ ನೀಡದೇ ಇರುವುದರಿಂದ ಕೊನೆಕ್ಷಣದಲ್ಲಿ ಸರ್ಕಾರ ಸಮ್ಮೇಳನಕ್ಕೆ ಕೊಟ್ಟ ₹ 20 ಕೋಟಿಯಲ್ಲಿ ₹ 2 ಕೋಟಿಯನ್ನು ಜಿಲ್ಲಾ ಕಸಾಪಕ್ಕೆ ಕೊಡುವಂತೆ ಸೂಚನೆ ಬಂದಿತ್ತು. ಹೀಗಾಗಿ, ಕನ್ನಡ ಸಾಹಿತ್ಯ ಪರಿಷತ್‌ಗೆ ₹ 2 ಕೋಟಿ ನೀಡಲಾಗಿದೆ. ಸಮ್ಮೇಳನ ಮುಗಿದ ನಂತರ ಇನ್ನೂ ₹ 60 ಲಕ್ಷ ಹೆಚ್ಚುವರಿಯಾಗಿ ಬೇಕೆಂದು ಕನ್ನಡ ಸಾಹಿತ್ಯ ಪರಿಷತ್ ಕೋರಿದೆ. ಹೆಚ್ಚುವರಿಯಾಗಿ ಕೇಳಿದ ₹ 5 ಕೋಟಿಯಲ್ಲಿ ಅನುದಾನದಲ್ಲಿ ಈ ₹ 60 ಲಕ್ಷ ಕೂಡಾ ಸೇರಿದೆ' ಎಂದು ರಘುನಂದನ ಮೂರ್ತಿ ತಿಳಿಸಿದರು.

> ಹೆಚ್ಚುವರಿ ₹ 5 ಕೋಟಿಗೆ ಸಲ್ಲಿಸಿದ್ದ ಪ್ರಸ್ತಾವದ ಕಡತ ವಾಪಸಾಗಿರುವ ಮಾಹಿತಿ ಬಂದಿದೆ. ಈ ಬಗ್ಗೆ ಮತ್ತೊಮ್ಮೆ ವಿವರವಾದ ಪ್ರಸ್ತಾವ ಸಲ್ಲಿಸಲಾಗುವುದು
>
> **ರಘುನಂದನ ಮೂರ್ತಿ,** ಜಿಲ್ಲಾಧಿಕಾರಿ, ಹಾವೇರಿ

ಸುಳ್ಳು ಸುದ್ದಿ ಎಂಬ ಪೆಡಂಭೂತ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಹಿಂಸಾಚಾರವು ತನ್ನ ಕಬಂಧಬಾಹು ವಿಸ್ತರಿಸುತ್ತಿರುವ ಹಿಂದೆ ಸುಳ್ಳು ಸುದ್ದಿಗಳು ಹಾಗೂ ಪ್ರಚೋದನಕಾರಿ ಸುದ್ದಿಗಳ ಪಾಲು ದೊಡ್ಡದಿದೆ ಎಂದು ಸಂಘರ್ಷ ಪೀಡಿತ ನೆಲದಲ್ಲಿ ಶಾಂತಿ ಪುನರ್ ಸ್ಥಾಪನೆಗೆ ಶ್ರಮಿಸುತ್ತಿರುವ ರಕ್ಷಣಾ ಪಡೆಯ ಅಧಿಕಾರಿಗಳು ಹೇಳಿದ್ದಾರೆ. 9

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಜಿಲ್ಲಾ ಯುವ ಅಧಿಕಾರಿ ನೇಮಕಾತಿ ಪ್ರಕ್ರಿಯೆಗಾಗಿ ಕಾಯುತ್ತಿರುವ ರಾಜ್ಯ

ನೆಹರೂ ಯುವಕೇಂದ್ರ: ಯೋಜನೆಗಳ 'ಭಾರ'

• ವಿಕ್ರಂ ಕಾಂತಿಕೆರೆ

ಮಂಗಳೂರು: ಯುವಜನರ ಸಶಕ್ತೀಕರಣದ ಮೂಲಕ ದೇಶದ ಅಭಿವೃದ್ಧಿಯ ಆಶಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ನೆಹರೂ ಯುವ ಕೇಂದ್ರ ಸಂಘಟನೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೊರತೆಯಿಂದಾಗಿ ಯೋಜನೆಗಳೇ 'ಭಾರ'ವಾಗಿ ಪರಿಣಮಿಸಿವೆ. ಕಟ್ಟಡ ಸೇರಿದಂತೆ ಮೂಲಸೌಲಭ್ಯಗಳು ಇಲ್ಲದಿರುವುದು ಕೂಡ ಸಂಘಟನೆಯ ಕಾರ್ಯಚಟುವಟಿಕೆ ಮೇಲೆ ಪರಿಣಾಮ ಬೀರಿದೆ.

ಕೇಂದ್ರ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯದ ಅಧೀನದ ಸಂಘಟನೆ, ಯುವಜನರಿಗಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಯಲ್ಲಿ ವಿವಿಧ ಇಲಾಖೆಗಳ ಯೋಜನೆಗಳಲ್ಲೂ ಪಾಲ್ಗೊಳ್ಳುತ್ತದೆ. ಕ್ರೀಡಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಸಂಘಟನೆಯ ಭಾಗವಾಗಿ ಟ್ರೆಕ್ಕಿಂಗ್, ಯುವ ಸಪ್ತಾಹ, ಯುವ ಉತ್ಸವ, ಗ್ರಾಮೀಣ ಯುವಜನರಿಗೆ ಸ್ವಾವಲಂಬನೆ ತರಬೇತಿ ಮುಂತಾದವುಗಳನ್ನು ಆಯೋಜಿಸುತ್ತಿದೆ. ಪ್ರಕೃತಿ ವಿಕೋಪದ ಸಂದರ್ಭದಲ್ಲಿ ನೆರವು ನೀಡುವುದು, ಕೋವಿಡ್‌ನಂಥ ಮಹಾಮಾರಿ ಬಂದಾಗ ಜಾಗೃತಿ ಮೂಡಿಸುವುದು, ಸಂವಿಧಾನದ ಅರಿವು ನೀಡುವುದು, ಪೋಷಣ್ ಅಭಿಯಾನದ ಅನುಷ್ಠಾನ, ಮಳೆ ನೀರು ಸಂಗ್ರಹ, ಯೋಗ ದಿನಾಚರಣೆ ಮುಂತಾದವು ಕೂಡ ಇದರಲ್ಲಿ ಸೇರುತ್ತವೆ.



ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ನೆಹರೂ ಯುವ ಕೇಂದ್ರದ ಕಚೇರಿ

ಇಷ್ಟೆಲ್ಲ ಕಾರ್ಯಕ್ರಮಗಳನ್ನು ಆಯೋಜಿಸಲು ಕಾರ್ಯಕರ್ತರ ಜೊತೆಯಲ್ಲಿ ಪ್ರತಿ ಕಚೇರಿಗೆ ಯುವ ಅಧಿಕಾರಿ, ಲೆಕ್ಕಪತ್ರ ಮತ್ತು ಕಾರ್ಯಕ್ರಮ ಮೇಲುಸ್ತುವಾರಿ (ಎಪಿಎಸ್) ಮತ್ತು ಕಚೇರಿ ಸಹಾಯಕರು (ಎಎ) ಇರಬೇಕು. ಪ್ರತಿ ಬ್ಲಾಕ್‌ಗೆ ತಲಾ ಇಬ್ಬರಂತೆ ರಾಷ್ಟ್ರೀಯ ಯುವ ಸ್ವಯಂಸೇವಕರು ಇರಬೇಕು. ಆದರೆ ಬಹುತೇಕ ಕಚೇರಿಗಳಲ್ಲಿ ಇಷ್ಟು ಉದ್ಯೋಗಿಗಳು ಇಲ್ಲ ಎಂಬ ದೂರು ಇದೆ. ಕರ್ನಾಟಕದ 31 ಜಿಲ್ಲೆಗಳ ಪೈಕಿ 14ರಲ್ಲಿ ಮಾತ್ರ ಯುವ ಅಧಿಕಾರಿ ಇದ್ದಾರೆ. ಹೀಗಾಗಿ ಕೆಲವರಿಗೆ ಮೂರು ಅಥವಾ ನಾಲ್ಕು ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಅಧಿಕಾರಿ ಯಶವಂತ ಯಾದವ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿಯೂ ಆಗಿದ್ದಾರೆ. ಸ್ವಂತ ಕಟ್ಟಡ ಇಲ್ಲದ ಸಂಘಟನೆಯ ಮಂಗಳೂರು ಕಚೇರಿಗೆ ಆಡಳಿತಾಧಿಕಾರಿ ಜಗದೀಶ್ ಒಬ್ಬರೇ ಎಲ್ಲವೂ ಆಗಿದ್ದಾರೆ.

1972ರಲ್ಲಿ ಆರಂಭಗೊಂಡ ನೆಹರೂ ಯುವ ಕೇಂದ್ರ 1987ರಲ್ಲಿ ನೆಹರೂ ಯುವ ಕೇಂದ್ರ ಸಂಘಟನ್ (ಎನ್‌ವೈಕೆಎಸ್) ಎಂಬ ಸ್ವಾಯತ್ತ ಸಂಸ್ಥೆಯಾಯಿತು. ಎನ್‌ವೈಕೆಎಸ್‌ನ ಎಲ್ಲ ಉದ್ಯೋಗಿಗಳ ನೇಮಕ ಮತ್ತು ವೇತನ ನೀಡಿಕೆ, ಕೇಂದ್ರ ಸರ್ಕಾರದ ಮೂಲಕವೇ ನಡೆಯುತ್ತದೆ. ಪ್ರತಿ ರಾಜ್ಯ ಘಟಕಕ್ಕೆ ಕ್ರೀಡಾ ಸಚಿವರು ಅಧ್ಯಕ್ಷರಾಗಿರುತ್ತಾರೆ.

5ನೇ ಪುಟ ನೋಡಿ

ಅಂಕಿ ಅಂಶ

6 ಸಂಘಟನೆಯ ಪ್ರಾದೇಶಿಕ ಕಚೇರಿಗಳು

29 ಸಂಘಟನೆಯ ರಾಜ್ಯ ಕಚೇರಿಗಳು

623 ನೆಹರೂ ಯುವಕೇಂದ್ರಗಳು

12,000 ಸ್ವಯಂಸೇವಕರು

1.69 ಲಕ್ಷ ಯೂತ್ ಕ್ಲಬ್‌ಗಳು

(ಆಧಾರ: ಕೇಂದ್ರದ ವೆಬ್‌ಸೈಟ್)

ನಗರದಲ್ಲಿ ಸಾಧಾರಣ ಮಳೆ

ಬೆಂಗಳೂರು: ನಗರದ ಅಲ್ಲಲ್ಲಿ ಭಾನುವಾರ ಸಾಧಾರಣ ಮಳೆಯಾಗಿದೆ.

ಪೀಣ್ಯ ಕೈಗಾರಿಕಾ ಪ್ರದೇಶ, ಯಶವಂತಪುರ, ರಾಜರಾಜೇಶ್ವರಿ ನಗರ, ಮಲ್ಲೇಶ್ವರ, ಆರ್.ಟಿ.ನಗರ, ಹೆಬ್ಬಾಳ, ಯಲಹಂಕ, ಜಾಲಹಳ್ಳಿ, ಎಂಜಿ ರಸ್ತೆ, ಚರ್ಚ್ ಸ್ಟ್ರೀಟ್, ಹಲಸೂರು, ಅಶೋಕ ನಗರದಲ್ಲಿ ಮಳೆಯಾಗಿದೆ. ಇನ್ನೂ ನಾಲ್ಕು ದಿನಗಳ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದೆ. ಹಗುರ ಮಳೆಯಾಗುವ ಬಹಳಷ್ಟು ಸಾಧ್ಯತೆ ಇದೆ. ಕೆಲವೊಮ್ಮೆ ಬಲವಾದ ಮೇಲ್ಮೈಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಕ್ಕಳನ್ನು ದೇಶದ ಆಸ್ತಿಯಾಗಿ ರೂಪಿಸಿ: ಸಿದ್ಧರಾಮಾನಂದಪುರಿ

ಕನಕಶ್ರೀ ಚಾರಿಟಬಲ್ ಟ್ರಸ್ಟ್‌ನಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಎಚ್.ಎಂ. ರೇವಣ್ಣ ಅವರು ವಿದ್ಯಾರ್ಥಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿದರು. ಕನಕಶ್ರೀ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಟಿ.ಬಿ. ಬಳಗಾವಿ, ಸಿದ್ದರಾಮಾನಂದಪುರಿ ಸ್ವಾಮೀಜಿ ಇದ್ದಾರೆ.

ಬೆಂಗಳೂರು: 'ತಂದೆ–ತಾಯಿ ಮಕ್ಕಳನ್ನು ಆಸ್ತಿಗಷ್ಟೇ ವಾರಸುದಾರರನ್ನಾಗಿ ಮಾಡುವ ಬದಲಿಗೆ, ದೇಶದ ಆಸ್ತಿಯನ್ನಾಗಿ ರೂಪಿಸಬೇಕು' ಎಂದು ತಿಂಥಣಿ ಬ್ರಿಡ್ಜ್‌ನಲ್ಲಿರುವ ಕಲಬುರಗಿ ವಿಭಾಗದ ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕನಕಶ್ರೀ ಚಾರಿಟಬಲ್ ಟ್ರಸ್ಟ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2022-23ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ಕುರುಬ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿ, ಮಾತನಾಡಿದರು.

'ಪೋಷಕರು ಮಕ್ಕಳ ಬೆಳವಣಿಗೆಗೆ ಸಹಾಯ ಮಾಡಬೇಕೇ ಹೊರತು, ಜೀವನ ಪರ್ಯಂತ ಅವರಿಗೆ ಆಸರೆಯಾಗಿ ಇರಬಾರದು. ಮಕ್ಕಳು ತಮ್ಮ ಕಾಲಿನ ಮೇಲೆ ತಾವೇ ನಿಲ್ಲುವಂತೆ ಮಾಡಬೇಕು. ಆಗ ಅವರು ಸಮಾಜದಲ್ಲಿ ಸತ್ಪ್ರಜೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಅಸ್ತ್ರವಾಗಿಸಿಕೊಂಡಾಗ ಮಾತ್ರ ಅವಕಾಶಗಳು ದೊರೆಯುತ್ತವೆ' ಎಂದು ಹೇಳಿದರು.

ಮಾಜಿ ಸಚಿವ ಎಚ್.ಎಂ. ರೇವಣ್ಣ, 'ಮನುಷ್ಯ ಸಮಾಜಮುಖಿಯಾಗಿ ಇದ್ದಾಗ ಮಾತ್ರ ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯಲು ಸಾಧ್ಯ. ವಿದ್ಯಾರ್ಥಿಗಳು ಹೆಚ್ಚಿನ ಅಧ್ಯಯನ ಮಾಡಿ, ಉನ್ನತ ಸ್ಥಾನ ಪಡೆದುಕೊಳ್ಳಬೇಕು' ಎಂದು ತಿಳಿಸಿದರು.

ಆಂಧ್ರಪ್ರದೇಶದ ಅನಂತಪುರ ಲೋಕಸಭಾ ಸದಸ್ಯ ಗೋರಂಟ್ಲ ಮಾಧವ, 'ವಿದ್ಯೆ ಎನ್ನುವುದು ಒಂದು ಉತ್ತಮ ಆಯುಧ. ಹೀಗಾಗಿ, ವಿದ್ಯಾವಂತರನ್ನು ಇಡೀ ಪ್ರಪಂಚ ಗೌರವಿಸುತ್ತದೆ' ಎಂದು ಹೇಳಿದರು.

ಬೆಂಗಳೂರು ಕಂದಾಯ ವಿಭಾಗದ ಒಂಬತ್ತು ಜಿಲ್ಲೆಗಳ 200 ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಪದಕವನ್ನು ನೀಡಿ ಪುರಸ್ಕರಿಸಲಾಯಿತು.

ಕನಕಶ್ರೀ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಟಿ.ಬಿ. ಬಳಗಾವಿ, ಅಕ್ಕಮಹಾದೇವಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಸಚಿವೆ ಪ್ರೊ. ಆರ್. ಸುನಂದಮ್ಮ, ನಿವೃತ್ತ ಐಆರ್‌ಎಸ್ ಅಧಿಕಾರಿ ಜೆ.ಪಿ. ಪ್ರಕಾಶ್, ಇನ್‌ಸೈಟ್ ಐಎಎಸ್ ಅಕಾಡೆಮಿ ನಿರ್ದೇಶಕ ವಿನಯ್ ಕುಮಾರ್ ಇದ್ದರು.

ನಗರದಲ್ಲಿ ಇಂದು

ಪತ್ರಿಕಾ ದಿನಾಚರಣೆ ಅಂಗವಾಗಿ 'ಪತ್ರಕರ್ತರ ಸಾಮಾಜಿಕ ಜವಾಬ್ದಾರಿ' ವಿಚಾರಸಂಕಿರಣ:



ಸಿದ್ದರಾಮಯ್ಯ

ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಪಿ. ರಾಮಯ್ಯ, ಪ್ರಧಾನ ಭಾಷಣಕಾರರು: ಆರ್. ಪೂರ್ಣಿಮಾ, ಡಿ. ಉಮಾಪತಿ, ರವಿ ಹೆಗಡೆ, ಉಪಸ್ಥಿತಿ: ಹೇಮಂತ್ ಎಂ. ನಿಂಬಾಳ್ಕರ್, ದಯಾನಂದ್ ಎಸ್.ಪಿ., ಆಯೋಜನೆ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

'ಚಮ್ಮಾರನ ಚಾಲೂಕಿ ಹೆಂಡತಿ' ನಾಟಕ ಪ್ರದರ್ಶನ: ಅನುವಾದ: ಕೆ.ಎನ್. ವಿಜಯಲಕ್ಷ್ಮಿ, ನಿರ್ದೇಶನ: ಪ್ರದೀಪ್ ತಿಪಟೂರು, ಉದ್ಘಾಟನೆ: ಚಂದ್ರಶೇಖರ್, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸ ನಾಯಕ, ಪ್ರಶಸ್ತಿ ಪತ್ರ ವಿತರಣೆ: ಜಯಶಂಕರ್ ಆರ್., ಉಪಸ್ಥಿತಿ: ಹಿದಾಯತ್ ಅಹಮದ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಮಧ್ಯಾಹ್ನ 12.30

ಓದುಗರ ಗಮನಕ್ಕೆ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರ ಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ದಯಾನಂದಸಾಗರ್ 103ನೇ ಜಯಂತಿ ಅಂಗವಾಗಿ ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ: ಉದ್ಘಾಟನೆ: ತಲಕಾಡು ಶಿವಶಂಕರೇಗೌಡ, ಅಧ್ಯಕ್ಷತೆ: ಬೈರತಿ ಸುರೇಶ, ಪ್ರಶಸ್ತಿ ಪ್ರದಾನ: ಮಹೇಶ ಜೋಶಿ, ಉಪಸ್ಥಿತಿ: ಜಯರಾಮ್ ರಾಯಪುರ, ಅತಿಥಿಗಳು: ವಿಶ್ವನಾಥ್ ಹಿರೇಮಠ, ಗಾಳಿಸ್ವಾಮಿ, ತಲಕಾಡು ಚಿಕ್ಕರಂಗೇಗೌಡ ಎಂ.ಎ., ಲಕ್ಷ್ಮೀ ವಜ್ರಮುನಿ, ಆಯೋಜನೆ: ರಂಗಶ್ರೀ ಕಲಾಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

'ಸಂಗೀತ ಸಾಗರ–2023' 'ಆದರ್ಶ ದಂಪತಿ' ಹಾಗೂ ಹಿರಿಯರಿಗೆ 'ಸಮಾಜರತ್ನ ಪ್ರಶಸ್ತಿ' ಪ್ರದಾನ: ಅಧ್ಯಕ್ಷತೆ: ಎಸ್. ಸಿದ್ಧರಾಜು, ಅತಿಥಿಗಳು: ಟಿ.ಜಿ. ರವಿ, ಹರೀಶ್ ಎಂ.ಟಿ., ಆಯೋಜನೆ: ಕರುನಾಡು ಸಾಂಸ್ಕೃತಿಕ ಸಂಸ್ಥೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಜೆ 5.30ರಿಂದ

ಅಂತರ ವಿಭಾಗ ನಾಟಕ ಸ್ಪರ್ಧೆ–2023: 'ಜೀವಂತ ಸಾಕ್ಷಿ' ನಾಟಕ ಪ್ರದರ್ಶನ: ರಚನೆ: ಪದ್ಮ ಎಂ. ನರಸಿಂಹಮೂರ್ತಿ, ನಿರ್ದೇಶನ: ಮೋಹನ್ ಕುಮಾರ್ ಎ.ಎಸ್., ಅತಿಥಿ: ಲೋಕೇಶ್ ಕುಮಾರ್ ವರ್ಮ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಪ್ರವಚನ ವಾಹಿನಿ: 'ಶ್ರೀಮದ್ ಭಾಗವತದ ವೈಜ್ಞಾನಿಕ ಮತ್ತು ವಿಸ್ಮಯ ಪ್ರಸಂಗಗಳು' ಕುರಿತ ಉಪನ್ಯಾಸ: ವರದರಾಜ ಐಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸುದ್ದಿ 2 ನಿಮಿಷ

ಹೋಟೆಲ್ ತಿಂಡಿ–ತಿನಿಸುಗಳ ಬೆಲೆ ಶೇ 10 ರಷ್ಟು ಹೆಚ್ಚಳ: ಆ.1ರಿಂದ ಜಾರಿ

ಬೆಂಗಳೂರು: 'ವಿದ್ಯುತ್ ದರ ಸೇರಿ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಳವಾಗಿದ್ದು, ಹೋಟೆಲ್‌ಗಳ ತಿಂಡಿ–ತಿನಿಸುಗಳ ಬೆಲೆಯಲ್ಲಿ ಶೇ 10ರಷ್ಟು ಹೆಚ್ಚಿಸುವುದು ಅನಿವಾರ್ಯವಾಗಲಿದೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ತಿಳಿಸಿದೆ.

'ಈಗಾಗಲೇ ಅಕ್ಕಿ, ತರಕಾರಿ ಸೇರಿ ದಿನನಿತ್ಯದ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದು, ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಒಂದು ಕೆ.ಜಿ. ಕಾಫಿ ಪುಡಿಗೆ ₹80ರಿಂದ ₹100 ಹೆಚ್ಚಳವಾಗಿದೆ. ಆ. 1ರಿಂದ ಹಾಲಿನ ದರವು ಹೆಚ್ಚಾಗಿದೆ. ಇದರಿಂದ, ಕಾಫಿ ಮತ್ತು ಚಹಾ ಬೆಲೆ ₹2 ರಿಂದ ₹3 ಹೆಚ್ಚಳವಾಗಲಿದೆ. ತಿಂಡಿ–ತಿನಿಸುಗಳ ದರದಲ್ಲಿ ₹5 ಹಾಗೂ ಊಟಕ್ಕೆ ₹10 ಹೆಚ್ಚಳವಾಗಲಿದೆ. ಈ ಬಗ್ಗೆ ಮಂಗಳವಾರ ನಡೆಯಲಿರುವ ಸಂಘದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಸಂಘದ ಗೌರವ ಕಾರ್ಯದರ್ಶಿ ವಿರೇಂದ್ರ ಕಾಮತ್ ಮಾಹಿತಿ ನೀಡಿದರು.

'ಈಗಾಗಲೇ ಕೆಲ ಹೋಟೆಲ್‌ಗಳಲ್ಲಿ ದರಗಳನ್ನು ಹೆಚ್ಚಿಸಲಾಗಿದೆ. ಅಧಿಕೃತವಾಗಿ ಆಗಸ್ಟ್ 1ರಂದು ಎಲ್ಲ ತಿಂಡಿ–ತಿನಿಸುಗಳ ದರಗಳಲ್ಲಿ ಹೆಚ್ಚಳವಾಗಲಿದೆ' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಹೇಳಿದರು.



ವೈಜ್ಞಾನಿಕ, ತಾಂತ್ರಿಕ ಪ್ರಗತಿಗೆ ಬದ್ಧತೆ ಇರಲಿ: ಜಗ್ಗಿ ವಾಸುದೇವ್

ಬೆಂಗಳೂರು: ಕೊಯಮತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ವಿದೇಶದ ವಿಜ್ಞಾನಿಗಳು, ಶಿಕ್ಷಣ ತಜ್ಞರು ಹಾಗೂ ನೀತಿ ನಿರೂಪಕರನ್ನು ಒಳಗೊಂಡ 'ಜಿ–20ಯ ಎಸ್–20' ಶೃಂಗ ಸಭೆಯ 100ಕ್ಕೂ ಹೆಚ್ಚು ಪ್ರತಿನಿಧಿಗಳು ಜಗ್ಗಿ ವಾಸುದೇವ್ ಅವರೊಂದಿಗೆ ಸಂವಾದ ನಡೆಸಿದರು.

ಸಂವಾದಲ್ಲಿ ಮಾತನಾಡಿದ ಜಗ್ಗಿ ವಾಸುದೇವ್, 'ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯೆಡೆಗೆ ನಮ್ಮ ಬದ್ಧತೆ ಇರಲಿ. ಪ್ರಪಂಚವನ್ನು ಪ್ರಜ್ಞಾವಂತ ದಿಕ್ಕಿನ ಕಡೆಗೆ ಕೊಂಡೊಯ್ಯಬೇಕು' ಎಂದು ಆಶಿಸಿದರು.

ಪ್ರಧಾನಿ ಆರ್ಥಿಕ ಸಲಹಾ ಮಂಡಳಿ ಸದಸ್ಯ ಸಂಜೀವ್ ಸನ್ಯಾಲ್, 'ವಿಜ್ಞಾನಕ್ಕಷ್ಟೇ ಸೀಮಿತವಾಗದೇ ಮತ್ತಷ್ಟು ವಿಷಯಗಳ ಬಗ್ಗೆ ಆಳ ಅಧ್ಯಯನ ನಡೆಸಬೇಕಿದೆ' ಎಂದರು.

ಸೌದಿ ಅರೇಬಿಯಾದ ಕಿಂಗ್ ಅಬ್ದುಲ್ ಅಜೀಜ್ ಸಿಟಿ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ ಅಧ್ಯಕ್ಷ ಡಾ.ಮುನೀರ್ ಡೆಸೋಕಿ ಮಾತನಾಡಿ, 'ಈಶಾ ಕೇಂದ್ರದಂತಹ ಸ್ಥಳದಲ್ಲಿ ಗಂಭೀರ ವಿಷಯಗಳು, ಸವಾಲು ಎದುರಿಸುವ ಕುರಿತು ಚರ್ಚಿಸಲಾಗಿದೆ' ಎಂದು ಹೇಳಿದರು.

ಎಸ್–20 ಸಹ ಅಧ್ಯಕ್ಷ ಪ್ರೊ.ಅಶುತೋಷ್ ಶರ್ಮ, ಈ ಸ್ಥಳವು ಭಾರತದ ಬಗ್ಗೆ ಹೊಸ ಅನಿಸಿಕೆಗಳ ಛಾಪು ಮೂಡಿಸಲು ಸಹಕಾರಿ ಆಗಲಿದೆ ಎಂದರು.

ವಿದೇಶಾಂಗ ಸಚಿವಾಲಯದ ಜಂಟಿ ಕಾರ್ಯದರ್ಶಿ ನಾಗರಾಜ ನಾಯ್ಡು ಕಾಕನೂರ್, ವಿಜ್ಞಾನ ಪ್ರಪಂಚವನ್ನು ಅರ್ಥೈಸಿಕೊಳ್ಳುವ ಗುರಿ ಹೊಂದಿದ್ದರೆ, ಅಧ್ಯಾತ್ಮವು ಸತ್ಯ ಅರ್ಥ ಮಾಡಿಕೊಳ್ಳುವುದಾಗಿದೆ ಎಂದರು.

ಬೈಯಪ್ಪನಹಳ್ಳಿ–ಕೆ.ಆರ್‌.ಪುರ, ಕೆಂಗೇರಿ–ಚಲ್ಲಘಟ್ಟದ ನಡುವೆ ಆಗಸ್ಟ್‌ಗೆ ವಾಣಿಜ್ಯ ಸಂಚಾರ

ವಿಸ್ತರಿತ ಮಾರ್ಗದಲ್ಲಿ ಮೆಟ್ರೊ ಸಂಚಾರಕ್ಕೆ ಸಿದ್ಧತೆ

• ಆದಿತ್ಯ ಕೆ.ಎ.


ನೇರಳೆ ಮಾರ್ಗದಲ್ಲಿ ಮೆಟ್ರೊ (ಸಂಗ್ರಹ ಚಿತ್ರ)

ಬೆಂಗಳೂರು: ನೇರಳೆ ಮಾರ್ಗದಲ್ಲಿನ ವಿಸ್ತರಿತ ಕಾಮಗಾರಿ ಮುಕ್ತಾಯ ಹಂತ ತಲುಪಿದ್ದು, ಆಗಸ್ಟ್ ಅಂತ್ಯಕ್ಕೆ ಎರಡೂ ಕಡೆ ನಮ್ಮ ಮೆಟ್ರೊ ರೈಲಿನ ವಾಣಿಜ್ಯ ಸಂಚಾರ ಆರಂಭವಾಗುವ ನಿರೀಕ್ಷೆಯಿದೆ.

ವಿಸ್ತರಿತ ಮಾರ್ಗದಲ್ಲಿ 4 ಕಿ.ಮೀ ನಷ್ಟು ಕಾಮಗಾರಿ ಬಾಕಿಯಿತ್ತು. ಇದರಿಂದ ಮೆಟ್ರೊ ಅವಲಂಬಿತರು ತೊಂದರೆಗೆ ಸಿಲುಕಿದ್ದರು. ಬೈಯಪ್ಪನ-ಹಳ್ಳಿ–ಕೆ.ಆರ್.ಪುರ ನಡುವೆ 2.5 ಕಿ.ಮೀ ಹಾಗೂ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು ಮೆಟ್ರೊ ಸಂಚಾರಕ್ಕೆ ಬಿಎಂಆರ್‌ಸಿಎಲ್ ಅಧಿಕಾರಿಗಳು ಸಿದ್ಧತೆ ಆರಂಭಿಸಿದ್ದಾರೆ. ರೈಲ್ವೆ ಸುರಕ್ಷಿತ ಆಯುಕ್ತರ ಭೇಟಿಯ ನಿರೀಕ್ಷೆಯಲ್ಲಿ ಅಧಿ-ಕಾರಿಗಳಿದ್ದಾರೆ.

ಪ್ರಜಾವಾಣಿ ವಿಶೇಷ

ಬೈಯಪ್ಪನಹಳ್ಳಿ– ಕೆ.ಆರ್.ಪುರ ಮಾರ್ಗದಲ್ಲಿ ಸಿಗ್ನಲ್ ಅಳವಡಿಕೆ ಸೇರಿದಂತೆ ಕೊನೆಯಹಂತದ ಕಾಮಗಾರಿಗಳು ಚುರುಕು ಪಡೆದಿವೆ. ನೇರಳೆ ಮಾರ್ಗದ ಬೈಯಪ್ಪನಹಳ್ಳಿ–ಎಸ್‌ವಿ ರಸ್ತೆ ಹಾಗೂ ಕೃಷ್ಣರಾಜಪುರ– ವೈಟ್‌ಫೀಲ್ಡ್ (ಕಾಡುಗೋಡಿ) ನಿಲ್ದಾಣಗಳ ನಡುವೆ ಕೆಲವು ದಿನಗಳಿಂದ ಬೆಳಿಗ್ಗೆ 5ರಿಂದ 7ರ ವರೆಗೆ ಮೆಟ್ರೊ ರೈಲುಗಳ ಸೇವೆ ಸ್ಥಗಿತಗೊಳಿಸಿ ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾರ್ಗದ ಪರಿಶೀಲನೆ ನಡೆಸುತ್ತಿದ್ದಾರೆ. ಆಗಸ್ಟ್ 9ರ ತನಕವೂ ಮಾರ್ಗದ ಪರಿಶೀಲನೆ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾರ್ಚ್‌ನಲ್ಲಿ ಕೆ.ಆರ್.ಪುರ–ವೈಟ್‌ಫೀಲ್ಡ್ (13.71 ಕಿ.ಮೀ) ನಡುವೆ ಮೆಟ್ರೊ ವಾಣಿಜ್ಯ ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದರು. ಇದರಿಂದ ವೈಟ್‌ಫೀಲ್ಡ್ ಸುತ್ತಮುತ್ತ ಸಂಚಾರ ದಟ್ಟಣೆ ತಗ್ಗಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಬೈಯಪ್ಪನ-ಹಳ್ಳಿ– ಕೆ.ಆರ್.ಪುರದ ನಡುವೆ ಮೆಟ್ರೊ ಸಂಚರಿಸದ ಕಾರಣಕ್ಕೆ ಅವಲಂಬಿತರು ತೊಂದರೆಗೆ ಸಿಲುಕಿದ್ದರು. ನೇರಳೆ ಹಾಗೂ ಹಸಿರು ಮಾರ್ಗದಿಂದ ಬೈಯ-ಪ್ಪನಹಳ್ಳಿಗೆ ಬಂದವರು ವೈಟ್‌ಫೀ-ಲ್ಡ್‌ನತ್ತ ತೆರಳುವುದಕ್ಕೆ ಆಟೊ, ಕ್ಯಾಬ್, ಬಿಎಂಟಿಸಿ ಬಸ್ ಅವಲಂಬಿಸಬೇ-ಕಿತ್ತು. ಕೆ.ಆರ್.ಪುರ– ವೈಟ್‌ಫೀಲ್ಡ್ ಮಾರ್ಗದಲ್ಲಿ ನಿರೀಕ್ಷಿಸಿದಷ್ಟು ಪ್ರಯಾಣಿಕರು ಓಡಾಟ ನಡೆಸುತ್ತಿರಲಿಲ್ಲ.

ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ನಡುವೆ ಮೆಟ್ರೊ ಸಂಚಾರವು ಮಾರ್ಚ್‌ನಲ್ಲೇ ಆರಂಭವಾಗಬೇಕಿತ್ತು. ಆದರೆ, ವೆಬ್‌ಗರ್ಡರ್ ಅಳವಡಿಕೆ ಕಾಮಗಾರಿ ವಿಳಂಬವಾಗಿದ್ದರಿಂದ ಮಾರ್ಗದ ನಡುವೆ ರೈಲು ಸಂಚಾರ ಇರಲಿಲ್ಲ. ಮೇನಲ್ಲಿ ವೆಬ್ ಗರ್ಡರ್ ಅನ್ನು ಯಶಸ್ವಿಯಾಗಿ ಅಳವಡಿಸಿದ್ದರಿಂದ ಕಾಮಗಾರಿ ಚುರುಕು ಪಡೆದಿತ್ತು.

ಇದೇ ಮಾರ್ಗದಲ್ಲಿ ಕೆಂಗೇರಿ–ಚಲ್ಲಘಟ್ಟದ ನಡುವೆ 1.9 ಕಿ.ಮೀ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿವೆ. ಆ ಮಾರ್ಗದಲ್ಲೂ ಅಂತಿಮ ಹಂತದ ಕಾಮಗಾರಿಯಷ್ಟೇ ಬಾಕಿಯಿವೆ. ಸಿಗ್ನಲ್ ಕಾಮಗಾರಿಗಳು ನಡೆಯುತ್ತಿವೆ ಎಂದು ಅಧಿಕಾರಿಗಳು ಹೇಳಿದರು.

‘ಸದ್ಯ ನೇರಳೆ ಮಾರ್ಗವು ಕೆಂಗೇರಿಯಿಂದ ಬೈಯಪ್ಪನಹಳ್ಳಿ–ಕೆ.ಆರ್.ಪುರದಿಂದ ವೈಟ್‌ಫೀಲ್ಡ್ ತನಕವಿದೆ. ವಿಸ್ತರಿತ ಮಾರ್ಗಕ್ಕೆ ಚಾಲನೆ ಲಭಿಸಿದರೆ ಈ ಮಾರ್ಗದ ಉದ್ದ 42.53 ಕಿ.ಮೀಗೆ ವಿಸ್ತರಣೆಯಾಗಲಿದೆ. ಅಲ್ಲದೇ ಪೂರ್ಣ ಪ್ರಮಾಣದಲ್ಲಿ ವಾಣಿಜ್ಯ ಸಂಚಾರಕ್ಕೆ ಮುಕ್ತವಾದ ಮೊದಲ ಮೆಟ್ರೊ ಮಾರ್ಗ ಎನ್ನುವ ಹೆಗ್ಗಳಿಕೆಗೂ ಪಾತ್ರವಾಗಲಿದೆ. ವೈಟ್‌ಫೀಲ್ಡ್ ಹಾಗೂ ಚಲ್ಲಘಟ್ಟದಿಂದ ಮುಂದಕ್ಕೆ ಮಾರ್ಗ ವಿಸ್ತರಿಸುವ ಯೋಜನೆ ಬಿಎಂಆರ್‌ಸಿಎಲ್ ಮುಂದೆ ಇಲ್ಲ. ಮುಂದೆ ಪರಿಶೀಲಿಸಲಾಗುವುದು’ ಎಂದು ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದ್ದಾರೆ.

ಸದ್ಯದಲ್ಲೇ ಸುರಕ್ಷಿತ ಆಯುಕ್ತರ ಭೇಟಿ

‘ಜುಲೈ 25ರಿಂದ ಎರಡೂ ಮಾರ್ಗದಲ್ಲೂ ಪ್ರಾಯೋಗಿಕ ಸಂಚಾರ ಆರಂಭಿಸಲಾಗುವುದು. ರೈಲ್ವೆ ಸುರಕ್ಷಿತ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಅವರು ಆಗಸ್ಟ್ ಎರಡನೇ ವಾರದಲ್ಲಿ ನಗರಕ್ಕೆ ಭೇಟಿ ನೀಡಲಿದ್ದು, ಆರು ದಿನ ಪರಿಶೀಲಿಸಿ ವರದಿ ಸಲ್ಲಿಸಲಿದ್ದಾರೆ. ಅವರು ಅನುಮತಿ ನೀಡಿದ ಬಳಿಕವಷ್ಟೇ ಮೆಟ್ರೊ ವಾಣಿಜ್ಯ ಸಂಚಾರ ಆರಂಭವಾಗಲಿದೆ’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ತಿಳಿಸಿದರು.


ಅಂಜುಂ ಪರ್ವೇಜ್

- ಎಂ.ಜಿ.ರಸ್ತೆ– ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ (ಒಟ್ಟು 15.50 ಕಿ.ಮೀ) ನಡುವೆ ವಿಸ್ತರಿತ ಮಾರ್ಗಕ್ಕೆ 12 ವರ್ಷಗಳ ಹಿಂದೆಯೇ ವಿಸ್ತೃತ ಯೋಜನಾ ವರದಿ ಸಿದ್ಧವಾಗಿತ್ತು.
- 2017ರಲ್ಲಿ ವಿಸ್ತರಿತ ಮಾರ್ಗದ ಕಾಮಗಾರಿ ಆರಂಭಿಸಲಾಗಿತ್ತು.
- ಬೈಯಪ್ಪನಹಳ್ಳಿ –ವೈಟ್‌ಫೀಲ್ಡ್ ನಡುವೆ ಭೂಸ್ವಾಧೀನ ಹಾಗೂ ಬೆನ್ನಿಗಾನಹಳ್ಳಿ ಬಳಿ ವೆಬ್‌ಗರ್ಡರ್ ಅಳವಡಿಕೆ ವಿಳಂಬದಿಂದ ಕಾಮಗಾರಿಗೆ ತೊಡಕಾಗಿತ್ತು. ಜತೆಗೆ ಲಾಕ್‌ಡೌನ್‌ನಿಂದ ಕಾಮಗಾರಿ ಸ್ಥಗಿತಗೊಂಡಿತ್ತು.

ಮುಖ್ಯಮಂತ್ರಿ ಉದ್ಘಾಟನೆ?

ವಿಧಾನಸಭೆ ಚುನಾವಣೆ ದಿನಾಂಕ ಘೋಷಣೆಗೂ ಮುನ್ನ ವೈಟ್‌ಫೀಲ್ಡ್–ಕೆ.ಆರ್.ಪುರ ನಡುವೆ ಮೆಟ್ರೊ ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದರು. ಈಗ ವಿಸ್ತರಿತ ಮಾರ್ಗವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವ ಸಾಧ್ಯತೆಯಿದೆ. ಬಿಎಂಆರ್‌ಸಿಎಲ್ ಅಧಿಕಾರಿಗಳು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ.

‘ಶಕ್ತಿ, ಅನ್ನಭಾಗ್ಯ ಯೋಜನೆ ಯಶಸ್ಸು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರಿಗೆ ನವಚೇತನ ನೀಡಿ, ಸಬಲೀಕರಣ-ಗೊಳಿಸುವ, ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿ ಯೋಜನೆಗಳಲ್ಲಿ ಪ್ರಥಮವಾಗಿ ಜಾರಿಗೆ ತಂದ ‘ಶಕ್ತಿ’ ಯೋಜನೆಗೆ ಅಭೂತಪೂರ್ವ ಯಶಸ್ಸು ಸಿಕ್ಕಿದೆ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಶಕ್ತಿ ಯೋಜನೆಯಡಿ 47.92 ಲಕ್ಷ ಮಹಿಳೆಯರು ಪ್ರಯಾಣ ಮಾಡಿದ್ದಾರೆ ಮತ್ತು ಅನ್ನಭಾಗ್ಯ ಯೋಜನೆಯಡಿ ₹ 22.8 ಕೋಟಿ ನಗದು ಮೊತ್ತವನ್ನು ಫಲಾನುಭವಿ-ಗಳಿಗೆ ಜಮಾ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

‘ಮಂಡ್ಯ ಜಿಲ್ಲೆಯಲ್ಲಿ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಗೆ ಮಹಿಳೆಯರಿಂದ ಅಭೂತಪೂರ್ವ ಸ್ಪಂದನೆ ದೊರೆತಿದೆ. ಇದುವರೆಗಿನ ಟಿಕೆಟ್ ಮೌಲ್ಯ ಪ್ರಮಾಣ ₹16.27 ಕೋಟಿಯಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ಅದೇ ರೀತಿ, ಮಂಡ್ಯ ಜಿಲ್ಲೆ ಜನತೆಗೆ ಅನ್ನಭಾಗ್ಯ ಯೋಜನೆಯಡಿ 3,99,965 ಕುಟುಂಬಗಳಿಗೆ ₹22.8 ಕೋಟಿ ನೇರ ನಗದು ವರ್ಗಾವಣೆಯಾ-ಗಿದ್ದು, ಬಡ ಮತ್ತು ಮಧ್ಯಮ ವರ್ಗದ ಜನ ಇದರ ನೇರ ಫಲಾನುಭವಿಗಳಗಿ-ದ್ದಾರೆ’ ಎಂದು ತಿಳಿಸಿದ್ದಾರೆ.

‘ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ದೇವಸ್ಥಾನ, ಪ್ರವಾಸಿ ತಾಣಗಳಿಗೂ ಭೇಟಿ ನೀಡುತ್ತಿದ್ದಾರೆ. ಇದರಿಂದ ಅಲ್ಲಿನ ಆದಾಯದಲ್ಲಿ ಸಹ ಗಣನೀಯವಾಗಿ ಏರಿಕೆಯಾಗಿದೆ. ಅಂದರೆ ಇದು ನಿಜಕ್ಕೂ ಸಂತೋಷದಾಯಕ ವಿಚಾರವಾಗಿದೆ. ಸರ್ಕಾರದ ಒಂದು ಯೋಜನೆಯು ಹತ್ತಾರು ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಸಹಾಯ ಮಾಡುತ್ತಿದೆ ಎಂಬುದು ಇದರಿಂದ ತಿಳಿಯುತ್ತದೆ’ ಎಂದು ಅವರು ವಿವರಿಸಿದ್ದಾರೆ.


ನಿವೃತ್ತ ಹಿರಿಯ ಶಿಕ್ಷಕರ ಜೊತೆ ಹಳೆಯ ವಿದ್ಯಾರ್ಥಿಗಳ ಸಮಾಗಮ.

‘28 ವರ್ಷ ಬಳಿಕ ಗುರು–ಶಿಷ್ಯರ ಸಮ್ಮಿಲನ’

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ‘ಪ್ರತಿಯೊಬ್ಬ ಮಾನವನಲ್ಲೂ ಅರಿವೇ ಗುರುವಾಗಬೇಕು. ಹಿರಿಯ ವಿದ್ಯಾರ್ಥಿಗಳು ಶಿಕ್ಷಕರಿಗೆ ನೀಡುವ ಗೌರವ ಮತ್ತು ಗುರು ವಂದನೆ ಪ್ರಶಸ್ತಿಗೂ ಮಿಗಿಲಾದದ್ದು’ ಎಂದು ಶಿವಗಂಗೆ ಮೇಲಣಗವಿಮಠದ ಮಲಯ ಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನರಸೀಪುರದ ಸಮುದಾಯ ಭವನದಲ್ಲಿ, ಹಿರಿಯ ಪ್ರಾಥಮಿಕ ಮತ್ತು ಆತ್ಮಾರಾಮ ಪ್ರೌಢಶಾಲೆಯ 1995-96ನೇ ಸಾಲಿನ ವಿದ್ಯಾರ್ಥಿಗ-ಳಿಂದ ಶನಿವಾರ ನಡೆದ ಗುರುವಂದನಾ ಮತ್ತು ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸುಮಾರು 28 ವರ್ಷದ ನಂತರ, ಗುರು-ಶಿಷ್ಯರ ಭೇಟಿ, ಸ್ನೇಹಿತರ ಸಮಾಗಮ ಹೊಸ ಮನ್ವಂತರವನ್ನು ಹುಟ್ಟುಹಾಕಿದೆ’ ಎಂದರು.

ಬೆಂಗಳೂರು ಮಾಚೋಹಳ್ಳಿ ಶ್ರೀವಿದ್ಯಾ ಕೇಂದ್ರದ ಅಧ್ಯಕ್ಷ ಶ್ಯಾಮ ಸುಂದರ ಶರ್ಮಾ ಮಾತನಾಡಿ ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸ ಕಷ್ಟ ಇತ್ತು. ಇದೀಗ ಸುಲಭವಾಗಿದೆ. ಆದರೆ, ನೈತಿಕ ಮೌಲ್ಯ ಕುಸಿಯುತ್ತಿದೆ ಎಂದರು.

ಹಿರಿಯ ಶಿಕ್ಷಕರನ್ನು ಹಾಗೂ ಕಳೆದ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಲಕ್ಷ್ಮೀ. ಎಚ್, ಲಕ್ಷ್ಮೀ, ದೇವರಾಜರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಪತ್ನಿ ಸೇರಿದಂತೆ 13 ಜನರನ್ನು ಕೊಂದ ಸೈನಿಕ

ಗೋಮಾ (ಕಾಂಗೊ) (ಎಪಿ): ತಾನು ಮನೆಗೆ ಬರುವ ಮುನ್ನವೇ ಮಗನ ಅಂತ್ಯಸಂಸ್ಕಾರ ನೆರವೇರಿಸಿದ ಪತ್ನಿ ಹಾಗೂ ಕುಟುಂಬದ ಇತರ 12 ಸದಸ್ಯರನ್ನು ಸೈನಿಕನೊಬ್ಬ ಗುಂಡು ಹಾರಿಸಿ ಹತ್ಯೆ ಮಾಡಿದ ಘಟನೆ ಈಶಾನ್ಯ ಕಾಂಗೊದಲ್ಲಿ ಭಾನುವಾರ ನಡೆದಿದೆ.

ಘಟನೆಯಲ್ಲಿ ಸೈನಿಕನ ಪತ್ನಿ, ಇಬ್ಬರು ಮಕ್ಕಳು ಹಾಗೂ ಅತ್ತೆ– ಮಾವ ಸಾವಿಗೀಡಾಗಿದ್ದಾರೆ ಎಂದು ಇತುರಿ ಪ್ರಾಂತ್ಯದ ಸೇನಾ ವಕ್ತಾರ ಜ್ಯೂಲೊನೊಂಗೊ ಮಾಹಿತಿ ನೀಡಿದ್ದಾರೆ. ಗುಂಡು ಹಾರಿಸಿದ ಸೈನಿಕನ ಗುರುತು ಇನ್ನೂ ಪತ್ತೆಯಾಗಿಲ್ಲ.

ತನ್ನ ಅನುಪಸ್ಥಿತಿಯಲ್ಲಿ ಅನುಮತಿ ಇಲ್ಲದೇ ಮಗನ ಅಂತ್ಯಸಂಸ್ಕಾರ ನೆರವೇರಿಸಲು ಸೈನಿಕನಿಗೆ ಇಷ್ಟವಿರಲಿಲ್ಲ ಎನ್ನಲಾಗಿದೆ.

ಖರೀದಿಯ ಹೊರೆ ತಪ್ಪಿಸುತ್ತಿರುವ ಬಸ್ ಕಾರ್ಯಾಗಾರಗಳು

505 ಹಳೆ ಬಸ್‌ಗಳಿಗೆ ಹೊಸ ಕಳೆ

• ಬಾಲಕೃಷ್ಣ ಪಿ.ಎಚ್.



ಕೆಎಸ್‌ಆರ್‌ಟಿಸಿ ಕೆಂಗೇರಿ ಕಾರ್ಯಾಗಾರದಲ್ಲಿ ಬಸ್‌ನ ಹೊರಭಾಗಕ್ಕೆ ಲೋಹದ ಹೊಸ ಹಾಳೆ ಅಳವಡಿಸುತ್ತಿರುವ ಮಹಿಳಾ ಮೆಕ್ಯಾನಿಕ್‌ಗಳು

ಬೆಂಗಳೂರು: ಹೊಸ ಬಸ್‌ಗಳ ಖರೀದಿಯ ಹೊರೆಯನ್ನು ಕೆಎಸ್‌ಆರ್‌ಟಿಸಿ ಕಾರ್ಯಾಗಾರಗಳು ಕಡಿಮೆ ಮಾಡುತ್ತಿವೆ. ಹಳೇ ಬಸ್‌ಗಳನ್ನೇ ನವೀಕರಿಸಿ ಹೊಸತಾಗಿ ಪರಿವರ್ತಿಸುತ್ತಿವೆ. 10 ತಿಂಗಳುಗಳಲ್ಲಿ 505 ನವೀಕೃತ ಬಸ್‌ಗಳನ್ನು ನಿರ್ಮಿಸಿವೆ.

ಕೊರೊನಾ ಕಾಲದಲ್ಲಿ ಕೆಎಸ್‌ಆರ್‌ಟಿಸಿಗೆ ಭಾರಿ ಹೊಡೆತ ಬಿದ್ದಿತ್ತು. ಹೊಸ ಬಸ್ ಖರೀದಿ ಮಾಡಿ ಇನ್ನಷ್ಟು ವೆಚ್ಚ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಇಂಥ ಸಂದರ್ಭದಲ್ಲಿ ಹಳೇ ಬಸ್‌ಗಳನ್ನೇ ಸಂಪೂರ್ಣವಾಗಿ ನವೀಕರಿಸಲು ಎಸ್‌ಆರ್‌ಟಿಸಿಯ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ನಿರ್ಧಾರ ಕೈಗೊಂಡಿದ್ದರು. ಅಲ್ಲಿವರೆಗೆ ಕಾರ್ಯಾಗಾರಗಳು ಬಸ್ ರಿಪೇರಿಗಷ್ಟೇ ಸೀಮಿತವಾಗಿದ್ದವು.

'ಹೊಸ ಬಸ್ ಖರೀದಿಗೆ ಕನಿಷ್ಠ ₹ 40 ಲಕ್ಷ ಬೇಕಾಗುತ್ತದೆ. 500 ಬಸ್ ಅಂದರೆ ₹ 200 ಕೋಟಿ ಬೇಕಾಗುತ್ತದೆ. ಅಷ್ಟು ಸಾಲ ಮಾಡಿದ್ರೆ ವರ್ಷಕ್ಕೆ ₹ 18 ಕೋಟಿ ಬಡ್ಡಿ ಕಟ್ಟಬೇಕಿತ್ತು. ಇದೀಗ 500 ಬಸ್‌ಗಳು ಕೇವಲ ₹ 15 ಕೋಟಿಯಲ್ಲಿ ನವೀಕೃತವಾಗಿವೆ' ಎಂದರು.

ಹಳೇ ಬಸ್‌ಗಳ ನವೀಕರಣವು ₹ 3 ಲಕ್ಷದಿಂದ ₹ 4 ಲಕ್ಷದೊಳಗೆ ಆಗುತ್ತದೆ. ಅಂದರೆ ಒಂದು ಬಸ್ ಖರೀದಿ ಮಾಡುವ ವೆಚ್ಚದಲ್ಲಿ 10 ನವೀಕೃತ ಬಸ್‌ಗಳು ತಯಾರಾಗುತ್ತಿವೆ' ಎಂದು ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಎಸ್‌ಆರ್‌ಟಿಸಿಯಲ್ಲಿ ವಿಭಾಗವಾರು 15 ಕಾರ್ಯಾಗಾರಗಳಿವೆ. ಬಸ್‌ಗಳಲ್ಲಿ ದೊಡ್ಡಮಟ್ಟದ ದುರಸ್ತಿ ಇದ್ದಾಗ ಪ್ರಾದೇಶಿಕ ಮಟ್ಟಕ್ಕೆ ಕಳುಹಿಸಲಾಗುತ್ತಿತ್ತು. ಕೆಂಗೇರಿ ಮತ್ತು ಹಾಸನದಲ್ಲಿ ಪ್ರಾದೇಶಿಕ ಕಾರ್ಯಾಗಾರಗಳಿವೆ. ಎಲ್ಲ ಕಡೆಗಳಲ್ಲಿ ನಮ್ಮ ಎಂಜಿನಿಯರ್‌ಗಳು ಬಸ್ ನವೀಕರಿಸಿ, ಅವರ ಪ್ರತಿಭೆಯನ್ನು ತೋರಿಸಿದ್ದಾರೆ. ಜತೆಗೆ ನಿಗಮವನ್ನು ಉಳಿಸಲು ದೊಡ್ಡ ಕೊಡುಗೆ ನೀಡಿದ್ದಾರೆ. ಇರುವ ಎಂಜಿನಿಯರ್‌ಗಳೇ ಕೆಲಸ ಮಾಡಿದ್ದು, ಹೊರಗಿನಿಂದ ಒಬ್ಬರನ್ನೂ ಬಳಸಿಕೊಂಡಿಲ್ಲ' ಎಂದು ಅವರು ಹೆಮ್ಮೆ ಪಟ್ಟುಕೊಂಡರು.

10 ಲಕ್ಷ ಕಿಲೋಮೀಟರ್‌ಗಳಿಗಿಂತ ಹೆಚ್ಚು ಸಂಚರಿಸಿದ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ನವೀಕರಣದಿಂದಾಗಿ ಈ ಬಸ್‌ಗಳು ಮತ್ತೆ ₹ 3 ಲಕ್ಷ ಕಿಲೋಮೀಟರ್ ಓಡಲಿವೆ. ನಾಲ್ಕೈದು ವರ್ಷಗಳ ಸೇವೆ ಸಿಗಲಿದೆ. 10–11 ವರ್ಷಕ್ಕೆ ನಿಲುಗಡೆಗೊಳ್ಳುತ್ತಿದ್ದ ಬಸ್‌ಗಳು ಇದರಿಂದಾಗಿ 15 ವರ್ಷಗಳ ಕಾಲ ಸಂಚರಿಸಲಿವೆ. ಸಾರಿಗೆ ಕಾನೂನಿನ ಪ್ರಕಾರವೇ ವಾಹನಗಳಿಗೆ 15 ವರ್ಷ ಓಡಾಡಲು ಅವಕಾಶ ಇದೆ' ಎಂದು ಮಾಹಿತಿ ನೀಡಿದರು.

> **ಕೆಎಸ್‌ಆರ್‌ಟಿಸಿ ₹ 850 ಕೋಟಿ ಸಾಲದಲ್ಲಿದೆ. ಬಸ್ ಖರೀದಿಯಿಂದ ಮತ್ತಷ್ಟು ಹೊರೆಯಾಗುತ್ತದೆ. ಅದನ್ನು ನವೀಕರಣವು ತಪ್ಪಿಸಿದೆ**
> **ಅನ್ಬುಕುಮಾರ್**
> ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ

'ತುಕ್ಕು ಹಿಡಿದ ಮತ್ತು ಹಾನಿಗೊಳಗಾದ ಎಲ್ಲ ಭಾಗಗಳನ್ನು ಹೊರತೆಗೆಯುತ್ತೇವೆ. ಪೂರ್ತಿ ಬಸ್ ಬಿಚ್ಚಿ ಶುರುವಿಂದ ರಚನೆ ಕಾರ್ಯ ಮಾಡುತ್ತೇವೆ. ಪ್ಯಾನೆಲಿಂಗ್ ಮುಗಿದ ಮೇಲೆ ಬಸ್‌ನ ಹೊರಭಾಗಕ್ಕೆ ಕಬ್ಬಿಣದ ಹೊಸ ಶೀಟ್ ಅಳವಡಿಸಲಾಗುತ್ತದೆ. ಕಿಟಕಿಗಳು, ಅದರ ಗ್ಲಾಸ್, ಸೀಟ್ ಕುಶನ್ ಸಹಿತ ಎಲ್ಲವನ್ನೂ ಬದಲಾಯಿಸುತ್ತೇವೆ' ಎಂದು ಮೆಕ್ಯಾನಿಕಲ್ ಎಂಜಿನಿಯರ್‌ಗಳು ತಿಳಿಸಿದರು.

'ಎಂಜಿನ್ ಹದಗೆಟ್ಟಿದ್ದರೆ ಸರಿಪಡಿಸುವ ತಜ್ಞ ಮೆಕ್ಯಾನಿಕ್‌ಗಳು ನಮ್ಮಲ್ಲಿದ್ದಾರೆ. ಹೊಸ ಬಸ್‌ಗಳಂತೆ ಕಾಣುವಂತೆ ಮಾತ್ರ ಮಾಡುವುದಲ್ಲ. ಇಂಧನ ಬಳಕೆ, ಗುಣಮಟ್ಟ ಕೂಡ ಅದೇ ರೀತಿ ಇರುವಂತೆ ಮಾಡುತ್ತೇವೆ' ಎಂದು ವಿವರಿಸಿದರು.

'ಇನ್ನೂ 500 ಬಸ್‌ಗಳು ನವೀಕರಣಗೊಳ್ಳುತ್ತಿವೆ. ಇದರಿಂದ ಕೆಎಸ್‌ಆರ್‌ಟಿಸಿ ಬಸ್ ಕೊರತೆ ಸಮಸ್ಯೆ ಒಂದಷ್ಟು ಕಡಿಮೆಯಾಗಲಿದೆ.

ನಾಲ್ಕು ಸಾವಿರ ಬಸ್ ಖರೀದಿಗೆ ಸರ್ಕಾರ ನಿರ್ಧಾರ

ಆನೇಕಲ್: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಶಕ್ತಿ' ಯೋಜನೆ ಜಾರಿ ನಂತರ ಪ್ರಯಾಣಿಕರ ಸಂಖ್ಯೆ ಹೆಚ್ಚಾದ ಕಾರಣ ಸಾರಿಗೆ ಇಲಾಖೆ ಶೀಘ್ರ ನಾಲ್ಕು ಸಾವಿರ ಬಸ್ ಖರೀದಿಸಲು ತೀರ್ಮಾನಿಸಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದಲ್ಲಿ ಭಾನುವಾರ ಮಾತನಾಡಿದ ಅವರು, ನಿಗದಿತ ಮಾರ್ಗಗಳಲ್ಲಿ ಸಂಚರಿಸುವ ಬಸ್‌ಗಳ ಮೇಲೆ ಒತ್ತಡ ಹೆಚ್ಚಾಗಿದ್ದು ಇದನ್ನು ನಿವಾರಿಸಲು ಬಸ್ ಖರೀದಿ ಅನಿವಾರ್ಯ. ಇದರೊಂದಿಗೆ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಕೂಡ ಶೀಘ್ರ ಆರಂಭವಾಗಲಿದೆ ಎಂದು ಅವರು ತಿಳಿಸಿದರು.

ಶಿಕ್ಷಣ, ಆರೋಗ್ಯ ಮತ್ತು ಕೃಷಿ ಇಲಾಖೆಗಳಿಗೆ ಸರ್ಕಾರ ಹೆಚ್ಚಿನ ಹಣ ವೆಚ್ಚ ಮಾಡುತ್ತಿದೆ. ಇದರಿಂದ ಲಾಭ ನಿರೀಕ್ಷಿಸುವುದಿಲ್ಲ. ಭವಿಷ್ಯದ ಹಿತದೃಷ್ಟಿಯಿಂದ ಇವುಗಳ ಮೇಲೆ ಹೂಡಿಕೆ ಮಾಡಲಾಗುತ್ತಿದೆ. ಅದೇ ರೀತಿ ಜನರ ಅನುಕೂಲತೆ ದೃಷ್ಟಿಯಿಂದ ಸಾರಿಗೆ ಕ್ಷೇತ್ರದಲ್ಲೂ ಸರ್ಕಾರ ವೆಚ್ಚ ಮಾಡುತ್ತಿದೆ. ಶಕ್ತಿ ಯೋಜನೆ ಜಾರಿ ನಂತರ ಪ್ರಯಾಣಿಕರ ಹೆಚ್ಚಳದಿಂದ ಪ್ರವಾಸೋದ್ಯಮ ಮತ್ತು ದೇವಾಲಯಗಳ ಆದಾಯ ಕೂಡ ಹೆಚ್ಚಾಗಿದೆ ಎಂದು ಅವರು ಸಮರ್ಥಿಸಿಕೊಂಡರು.

ಸುದ್ದಿ 2 ನಿಮಿಷ

ಅಂಗಾಂಗ ದಾನ: ಅಶ್ವಿನಿಗೆ ರಾಯಭಾರಿಯಾಗಲು ಆಹ್ವಾನ

ಬೆಂಗಳೂರು: ರಾಜ್ಯದಲ್ಲಿ ಅಂಗಾಂಗ ದಾನ ಕುರಿತ ಜಾಗೃತಿಗೆ ರಾಯಭಾರಿಯಾಗುವಂತೆ ಅಶ್ವಿನಿ ಪುನೀತ್ ರಾಜಕುಮಾರ್ ಅವರಿಗೆ ಆರೋಗ್ಯ ಇಲಾಖೆ ಆಹ್ವಾನ ನೀಡಿದೆ.

ಇಲಾಖೆಯು ಆ.3ರಂದು ಅಂಗಾಂಗ ದಾನ ದಿನಾಚರಣೆ ಪ್ರಯುಕ್ತ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಂಗಾಂಗ ದಾನ ಮಾಡಿದ ರಾಜ್ಯದ 150 ಕುಟುಂಬಗಳನ್ನ ಸನ್ಮಾನಿಸಲಾಗುತ್ತದೆ. ಈ ಕಾರ್ಯಕ್ರಮಕ್ಕೂ ಅವರನ್ನು ಆಹ್ವಾನಿಸಲಾಗಿದೆ.

ನಟ ಪುನೀತ್ ರಾಜಕುಮಾರ್ ಅವರು ಕಣ್ಣುಗಳ ದಾನದ ಮೂಲಕ ಸಾವಿರಾರು ಜನರಿಗೆ ಪ್ರೇರಣೆಯಾಗಿದ್ದರು. ಹೀಗಾಗಿ, ಅವರ ಪತ್ನಿ ಅಶ್ವಿನಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ರಾಯಭಾರಿ ಆಗುವಂತೆ ಆಹ್ವಾನ ನೀಡಿದ್ದಾರೆ.

ಅಂಗಾಂಗ ದಾನದ ಮೂಲಕ ಒಬ್ಬ ದಾನಿ ತನ್ನ ಸಾವಿನ ಬಳಿಕವೂ 8 ಜನರಿಗೆ, ಅಂಗಾಂಶ ದಾನದ ಮೂಲಕ 50 ಜನರಿಗೆ ನೆರವಾಗಬಹುದಾಗಿದೆ. ರಾಜ್ಯ ಸರ್ಕಾರವು ಮಾನವ ಅಂಗಾಂಗಗಳ ಕೊರತೆಯನ್ನು ನೀಗಿಸಲು ಹಲವು ಕಾರ್ಯಕ್ರಮಗಳನ್ನ ಹಾಕಿಕೊಂಡಿದ್ದು, ನಿಮ್ಹಾನ್ಸ್ ಸೇರಿದಂತೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಮಾನವ ಅಂಗಾಂಗ ಪಡೆಯುವಿಕೆ ಕೇಂದ್ರವನ್ನು ಸ್ಥಾಪಿಸಲಾಗಿದೆ. ಉಚಿತ ಅಂಗಾಂಗ ಕಸಿ ಯೋಜನೆಯಡಿ ಈವರೆಗೆ 73 ರೋಗಿಗಳು ಪ್ರಯೋಜನ ಪಡೆದಿದ್ದಾರೆ ಎಂದು ಇಲಾಖೆ ತಿಳಿಸಿದೆ.



ಎಟಿಎಂನಿಂದ ₹15 ಲಕ್ಷ ದರೋಡೆ

ಬಂಗಾರಪೇಟೆ: ಕೋಲಾರ-ಬಂಗಾರಪೇಟೆ ಮುಖ್ಯರಸ್ತೆಯ ಹಂಚಾಳ ಗೇಟ್ ಬಳಿ ಶನಿವಾರ ರಾತ್ರಿ ಗ್ಯಾಸ್ ಕಟ್ಟರ್ ಬಳಸಿ ಕೆನರಾ ಬ್ಯಾಂಕ್ ಎಟಿಎಂನಲ್ಲಿದ್ದ ₹15 ಲಕ್ಷ ಹಣ ದೋಚಲಾಗಿದೆ.

ಡೆಕ್ಕನ್ ಹೈಡ್ರಾಲಿಕ್ಸ್ ಸಂಸ್ಥೆಗೆ ಸೇರಿದ ವಾಣಿಜ್ಯ ಮಳಿಗೆಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿಲ್ಲ. ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಸಕ ಎಸ್.ಎನ್.ನಾರಾಯಣಸ್ವಾಮಿ ಭೇಟಿ ನೀಡಿ ಪೊಲೀಸರಿಂದ ಮಾಹಿತಿ ಪಡೆದರು. ಆರೋಪಿಗಳನ್ನು ಪತ್ತೆಹಚ್ಚುವಂತೆ ಸೂಚಿಸಿದರು. ಕೆಜಿಎಫ್ ಡಿವೈಎಸ್ಪಿ ರಮೇಶ್, ಇನ್‌ಸ್ಪೆಕ್ಟರ್ ಸಂಜೀವರಾಯಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೆರಳಚ್ಚು ತಂಡ ಹಾಗೂ ಶ್ವಾನದಳ ತಂಡದಿಂದ ಶೋಧ ಕಾರ್ಯ ನಡೆಯುತ್ತಿದೆ. ಬಂಗಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ವಿದ್ಯಾರ್ಥಿ ಆತ್ಮಹತ್ಯೆ: ನ್ಯಾಯಕ್ಕಾಗಿ ಪ್ರತಿಭಟನೆ

ಬೆಂಗಳೂರು: 'ವಿದ್ಯಾರ್ಥಿ ಆದಿತ್ಯ ಪ್ರಭು (19) ಆತ್ಮಹತ್ಯೆಗೆ ಕಾರಣವಾಗಿರುವ ಕಾಲೇಜು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಪೋಷಕರ ಸಮೇತ ವಿದ್ಯಾರ್ಥಿಗಳು ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, 'ಆದಿತ್ಯ ಪ್ರಭು ಸಾವಿಗೆ ನ್ಯಾಯ ಒದಗಿಸಿ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

'ಆತ್ಮಹತ್ಯೆ ಸಂಬಂಧ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಎಫ್‌ಐಆರ್ ದಾಖಲಾಗಿದೆ. ತಪ್ಪಿತಸ್ಥ ಸಿಬ್ಬಂದಿಯನ್ನು ಕೂಡಲೇ ಬಂಧಿಸಬೇಕು. ಅವರನ್ನು ಸೇವೆಯಿಂದಲೂ ಅಮಾನತು ಮಾಡಬೇಕು. ಉನ್ನತ ಶಿಕ್ಷಣ ಸಚಿವರು ತನಿಖೆ ಕೈಗೊಂಡು, ಪಿಇಎಸ್ ಕಾಲೇಜು ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಆದಿತ್ಯ ಪ್ರಭು ತಾಯಿ ಆಶಾ, 'ಓದಿನಲ್ಲಿ ಮುಂದಿದ್ದ ಮಗ, ಉನ್ನತ ವ್ಯಾಸಂಗ ಮಾಡಬೇಕೆಂದು ಆಸೆ ಇಟ್ಟುಕೊಂಡಿದ್ದ. ಕಾಲೇಜಿನವರ ಕಿರುಕುಳವೇ ಈತನ ಸಾವಿಗೆ ಕಾರಣ. ಪೊಲೀಸರು ಸೂಕ್ತ ತನಿಖೆ ನಡೆಸಿ ನಿಜಾಂಶ ತಿಳಿಸಬೇಕು' ಎಂದರು.

ಯುವತಿ ಜತೆ ಸಲುಗೆ: ಪ್ರಿಯಕರನಿಗೆ ಇರಿತ

ಪ್ರಜಾವಾಣಿ ವಾರ್ತೆ



ಜಿಂಟೊದಾಸ್



ಜೋಗೀಶ್

ಬೆಂಗಳೂರು: ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ಜೋಗೀಶ್ (28) ಅವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಮಹಿಳೆ ಜಿಂಟೊದಾಸ್ (36) ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಜಿಂಟೊದಾಸ್ ಹಾಗೂ ಜೋಗೀಶ್, ಇಬ್ಬರೂ ಅಸ್ಸಾಂನವರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ. ಜುಲೈ 21ರಂದು ಜೋಗೀಶ್ ಅವರಿಗೆ ಚಾಕು ಇರಿದು ಜಿಂಟೊದಾಸ್ ಪರಾರಿಯಾಗಿದ್ದರು. ವಿಶೇಷ ತಂಡ ರಚಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

ಪತಿ ತೊರೆದಿದ್ದ ಆರೋಪಿ: 'ಜಿಂಟೊದಾಸ್ ಅವರಿಗೆ ಮದುವೆಯಾಗಿ, 16 ವರ್ಷಗಳ ಮಗಳಿದ್ದಾಳೆ. ಪತಿ ತೊರೆದು ಬೆಂಗಳೂರಿಗೆ ಬಂದಿದ್ದ ಆರೋಪಿ, ಮಹಿಳೆಯರ ಆರೈಕೆ ಕೇಂದ್ರವೊಂದರಲ್ಲಿ ಸಹಾಯಕಿ ಕೆಲಸ ಮಾಡುತ್ತಿದ್ದರು. ಒಂಟಿಯಾಗಿ ಕೊಠಡಿಯಲ್ಲಿ ವಾಸವಿದ್ದರು' ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

'ಭದ್ರತಾ ಸಿಬ್ಬಂದಿ ಜೋಗೀಶ್, ಸ್ನೇಹಿತರ ಜೊತೆ ಕೊಠಡಿಯಲ್ಲಿ ನೆಲೆಸಿದ್ದರು. ಜೋಗೀಶ್ ಹಾಗೂ ಜಿಂಟೊದಾಸ್, ಕೆಲ ತಿಂಗಳ ಹಿಂದೆಯಷ್ಟೇ ಪರಿಚಯವಾಗಿದ್ದರು. ನಂತರ, ಇಬ್ಬರು ಪ್ರೀತಿಸಲಾರಂಭಿಸಿದ್ದರು. ಹಲವೆಡೆ ಸುತ್ತಾಡಿದ್ದರು. ಸಲುಗೆ ಸಹ ಇತ್ತು' ಎಂದರು.

ಯುವತಿ ಜೊತೆ ಸಲುಗೆ: 'ಜಿಂಟೊದಾಸ್ ಅವರಿಂದ ದೂರವಾಗಲಾರಂಭಿಸಿದ್ದ ಜೋಗೀಶ್, ಬೇರೆ ಯುವತಿ ಜೊತೆ ಸಲುಗೆ ಬೆಳೆಸಿಕೊಂಡಿದ್ದರು. ಇದರ ನಡುವೆಯೇ ತಮ್ಮ ಖರ್ಚಿಗೆಂದು ಜಿಂಟೊದಾಸ್ ಕಡೆಯಿಂದ ₹ 15 ಸಾವಿರ ಸಾಲ ಪಡೆದುಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಯುವತಿ ಜೊತೆ ಜೋಗೀಶ್ ಸುತ್ತಾಡುತ್ತಿದ್ದ ಸಂಗತಿ ಆರೋಪಿಗೆ ಗೊತ್ತಾಗಿತ್ತು. ಇದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ಆಗಿತ್ತು. ತಾವು ನೀಡಿರುವ ₹ 15 ಸಾವಿರ ಸಾಲವನ್ನು ವಾಪಸು ನೀಡುವಂತೆ ಆರೋಪಿ ಒತ್ತಾಯಿಸಿದ್ದರು. ಹಣವಿಲ್ಲವೆಂದು ಜೋಗೀಶ್ ಹೇಳಿದ್ದರು'

'ಹಣ ನೀಡಲು ಸತಾಯಿಸುತ್ತಿದ್ದರಿಂದ ಕೋಪಗೊಂಡಿದ್ದ ಜಿಂಟೊದಾಸ್, ಜುಲೈ 21ರಂದು ಬೆಳಿಗ್ಗೆ ಜೋಗೀಶ್ ವಾಸವಿದ್ದ ಕೊಠಡಿಗೆ ಬಂದು ಜಗಳ ತೆಗೆದಿದ್ದರು. ಇದೇ ಸಂದರ್ಭದಲ್ಲಿ ಚಾಕುವಿನಿಂದ ಇರಿದು ಪರಾರಿಯಾಗಿದ್ದರು. ಗಾಯಗೊಂಡಿದ್ದ ಜೋಗೀಶ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಇದೀಗ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದು ತಿಳಿಸಿದರು.

'ಕೃತ್ಯ ಎಸಗಿದ ನಂತರ, ನಗರದಲ್ಲಿರುವ ಸಂಬಂಧಿಕರ ಮನೆಯಲ್ಲಿ ಆರೋಪಿ ಉಳಿದುಕೊಂಡಿದ್ದರು. ಅಸ್ಸಾಂಗೆ ಹೋಗಲು ಆರೋಪಿ ತಯಾರಿ ನಡೆಸಿದ್ದರು. ಈ ಬಗ್ಗೆ ಮಾಹಿತಿ ಸಂಗ್ರಹಿಸಿ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಜಾಮೀನು ಮೇಲೆ ಹೊರಬಂದು ಕಳ್ಳತನ



ರಫೀಕ್

ಬೆಂಗಳೂರು: ಅಪರಾಧ ಪ್ರಕರಣಗಳಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ಕಳ್ಳತನ ಮಾಡುತ್ತಿದ್ದ ಆರೋಪಿ ರಫೀಕ್ ಅಲಿಯಾಸ್ ಸೇಟುನನ್ನು (29) ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತುಮಕೂರಿನ ರಫೀಕ್, ಅಪರಾಧ ಹಿನ್ನೆಲೆಯುಳ್ಳವ. ಕೆಲ ಪ್ರಕರಣಗಳಲ್ಲಿ ಈತನನ್ನು ಬಂಧಿಸಿ, ಜೈಲಿಗೆ ಕಳುಹಿಸಲಾಗಿತ್ತು. ಕೆಲದಿನ ಜೈಲಿನಲ್ಲಿದ್ದು ಹೊರಗೆ ಬಂದಿದ್ದ ಈತ, ಪುನಃ ಕಳ್ಳತನ ಮುಂದುವರಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಜಾಜಿನಗರ ಠಾಣೆ ವ್ಯಾಪ್ತಿಯಲ್ಲಿರುವ ಪ್ರಕಾಶ-ನಗರದಲ್ಲಿರುವ ದಿನಸಿ ಅಂಗಡಿಯೊಂದರಲ್ಲಿ ಇತ್ತೀಚೆಗೆ ಕಳ್ಳತನ ನಡೆದಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ಈತನಿಂದ ₹ 22.08 ಲಕ್ಷ ಮೌಲ್ಯದ 409 ಗ್ರಾಂ ಚಿನ್ನಾಭರಣ, 425 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ 189 ಗ್ರಾಂ ನಕಲಿ ಚಿನ್ನದ ಆಭರಣಗಳನ್ನು ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ರಫೀಕ್, ಕೆ.ಆರ್. ಪುರದಲ್ಲಿ ವಾಸವಿದ್ದ. ಆರಂಭದಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದ. ದುಡಿದ ಹಣ ಖರ್ಚಿಗೆ ಸಾಲದೆ ಕಳ್ಳತನಕ್ಕೆ ಇಳಿದಿದ್ದ. ನಂತರ, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ' ಎಂದು ಹೇಳಿವೆ.

ಬೀಗ ಮುರಿದು ಕಳ್ಳತನ: 'ದೂರುದಾರ ತಮ್ಮ ದಿನಸಿ ಅಂಗಡಿಗೆ ರಾತ್ರಿ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದರು. ಮರುದಿನ ಬೆಳಿಗ್ಗೆ ಅಂಗಡಿಗೆ ಬಂದಾಗ ಕಳ್ಳತನ ಗಮನಕ್ಕೆ ಬಂದಿತ್ತು. ಬೀಗ ಮುರಿದಿದ್ದ ಆರೋಪಿ, ಒಳಗೆ ನುಗ್ಗಿ ₹ 50 ಸಾವಿರ ನಗದು ಕದ್ದು ಪರಾರಿಯಾಗಿದ್ದ. ಪೀಣ್ಯ, ಗಿರಿನಗರ, ಕಬ್ಬನ್ ಪಾರ್ಕ್, ಕೆ.ಆರ್. ಪುರ, ಬನಶಂಕರಿ, ಅಮೃತಹಳ್ಳಿ, ಕಾಡುಗೊಂಡನಹಳ್ಳಿ, ಚಂದ್ರಾ ಲೇಔಟ್ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿದ್ದ. ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ನೆಲಮಂಗಲ, ತಿಪಟೂರು ಠಾಣೆಗಳಲ್ಲೂ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿರುವ ಬಗ್ಗೆ ಮಾಹಿತಿ ಇದೆ' ' ಎಂದು ತಿಳಿಸಿವೆ.

'ಕುಡಿಯುವ ನೀರಿನ ಸಮಸ್ಯೆ: ₹ 6.14 ಕೋಟಿ ಬಿಡುಗಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ (ಸಿಇಒ) ನೇತೃತ್ವದಲ್ಲಿ ತಯಾರಿಸಿದ ನಿಯೋಜಿತ ರೂಪುರೇಷೆ (ಕಂಟಿನ್ಜೆನ್ಸಿ ಪ್ಲಾನ್) ವರದಿ ಆಧಾರದಲ್ಲಿ, ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಲು ₹5.14 ಕೋಟಿ ಬಿಡುಗಡೆ ಮಾಡಲಾಗಿದೆ. ಈ ಹಿಂದೆ ಒದಗಿಸಿದ್ದ ₹1 ಕೋಟಿ ಸೇರಿ ಈವರೆಗೆ ಒಟ್ಟು ₹6.14 ಕೋಟಿ ನೀಡಿದಂತಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ರಾಜ್ಯದ ಹಲವೆಡೆ ಮಳೆ ಕೊರತೆ ಎದುರಾಗಿದ್ದು ಹಲವು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಲಕ್ಷಣಗಳು ಕಾಣುಸುತ್ತಿವೆ. ಹೀಗಾಗಿ ಗ್ರಾಮೀಣ ಭಾಗದ ಜನರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಬಾರದೆಂಬ ಉದ್ದೇಶದಿಂದ ಮುನ್ನೆಚ್ಚರಿಕೆ ವಹಿಸಲಾಗಿದೆ. ಬರದ ಛಾಯೆ ಎದುರಾಗುವ ಮೊದಲೇ ಎಲ್ಲ ಜಿಲ್ಲೆಗಳ ಸಿಇಒಗಳ ಸಭೆ ಕರೆದು, ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಎಷ್ಟು ತಾಲ್ಲೂಕುಗಳಲ್ಲಿ ಮಳೆಯಾಗಿದೆ? ಎಷ್ಟು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಲಿದೆ? ಎಲ್ಲೆಲ್ಲಿ ಕೆರೆಗಳಲ್ಲಿ ನೀರಿನ ಪ್ರಮಾಣ ಕ್ಷೀಣಿಸುತ್ತಿದೆ, ಯಾವ ಹಳ್ಳಿಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್ ಅಥವಾ ಬಾಡಿಗೆ ಕೊಳವೆಬಾವಿ ಮೂಲಕ ಒದಗಿಸಬೇಕು ಎಂಬ ಬಗ್ಗೆ ಅಧಿಕಾರಿಗಳಿಂದ ವರದಿ ಪಡೆದು ಹಣ ಬಿಡುಗಡೆ ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ.

'ಒಟ್ಟು 101 ತಾಲ್ಲೂಕುಗಳ 366 ಗ್ರಾಮ ಪಂಚಾಯಿತಿಗಳ 514 ಹಳ್ಳಿಗಳಿಗೆ 254 ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ ಮಾಡಲಾಗುವುದು. ಟ್ಯಾಂಕರ್‌ಗಳಲ್ಲಿ ಪ್ರತಿ ದಿನ 703 ಟ್ರಿಪ್‌ಗಳ ಮೂಲಕ ನೀರು ಪೂರೈಕೆ ಮಾಡಲಾಗುವುದು. ಜೊತೆಗೆ, 465 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಲು ಹಣ ಒದಗಿಸಲಾಗಿದೆ. ಟ್ಯಾಂಕರ್ ನೀರು ಪೂರೈಕೆಗೆ ₹4.21 ಕೋಟಿ ನೀಡಲಾಗಿದ್ದು, ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲು ₹93 ಲಕ್ಷ ನೀಡಲಾಗಿದೆ' ಎಂದು ಹೇಳಿದ್ದಾರೆ.

ಕೆರೆಯಲ್ಲಿ ಮುಳುಗಿ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಗಾಣಿಗರಹಳ್ಳಿಯ ಕೆರೆಯಲ್ಲಿ ಮುಳುಗಿ ಕಾರ್ಮಿಕ ಬಸಪ್ಪ (35) ಅವರು ಮೃತಪಟ್ಟಿದ್ದು, ನಾಲ್ಕು ಗಂಟೆ ಕಾರ್ಯಾಚರಣೆ ನಡೆಸಿ ಮೃತದೇಹವನ್ನು ಹೊರಗೆ ತೆಗೆಯಲಾಗಿದೆ.

'ಕಲಬುರ್ಗಿ ಜಿಲ್ಲೆಯ ಬಸಪ್ಪ, ಕೆಲಸ ಹುಡುಕಿಕೊಂಡು ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ನಗರಕ್ಕೆ ಬಂದಿದ್ದರು. ನಿರ್ಮಾಣ ಹಂತದ ಕಟ್ಟಡಗಳಲ್ಲಿ ಕಾರ್ಮಿಕರಾಗಿದ್ದರು. ಪತ್ನಿ, ಹೋಟೆಲೊಂದರಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಬಸಪ್ಪ ಆಗಾಗ ಕೆರೆಯಲ್ಲಿ ಈಜಾಡುತ್ತಿದ್ದ. ಜುಲೈ 20ರಂದು ಗಾಣಿಗರಹಳ್ಳಿ ಕೆರೆಗೆ ತೆರಳಿದ್ದ. ಕೆರೆಯಲ್ಲಿ ಈಜಾಡುತ್ತಿದ್ದ ಸಂದರ್ಭದಲ್ಲಿ ಅಸ್ವಸ್ಥಗೊಂಡ ಅವರು, ನೀರಿನಲ್ಲಿ ಮುಳುಗಿದ್ದರು. ದಡದ ಮೇಲಿದ್ದ ಬಟ್ಟೆಗಳನ್ನು ಗಮನಿಸಿದ್ದ ಸ್ಥಳೀಯರು, ಠಾಣೆಗೆ ಮಾಹಿತಿ ನೀಡಿದ್ದರು' ಎಂದರು.

'ಸ್ಥಳೀಯರ ಸಹಾಯದಿಂದ ಮೃತ ದೇಹಕ್ಕಾಗಿ ಹುಡುಕಾಟ ನಡೆಸಲಾಯಿತು. ಆದರೆ, ಯಾವುದೇ ಸುಳಿವು ಸಿಕ್ಕಿರಲಿಲ್ಲ. ಉಡುಪಿಯ ಮುಳುಗು ತಜ್ಞ ಈಶ್ವರ್ ಮಲ್ಪೆ ಹಾಗೂ ತಂಡದವರು, ಶುಕ್ರವಾರ ಬೆಳಿಗ್ಗೆ ನಗರಕ್ಕೆ ಬಂದಿದ್ದರು. ಬೆಳಿಗ್ಗೆ 7 ಗಂಟೆಯಿಂದ 11 ಗಂಟೆಯವರೆಗೆ ಕಾರ್ಯಾಚರಣೆ ನಡೆಸಿ ಮೃತದೇಹ ಹೊರಗೆ ತೆಗೆದರು' ಎಂದು ಹೇಳಿದರು.

'ಸಮಾಜಮುಖಿ ವಕೀಲ ವೃತ್ತಿಗೆ ಬನ್ನಿ'

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ಉದ್ಯೋಗಕ್ಕೆ ಕಂಪನಿಗಳ ಮೊರೆ ಹೋಗದೆ ಸಮಾಜಮುಖಿ ವಕೀಲ ವೃತ್ತಿಗೆ ಕಾನೂನು ಪದವೀಧರರು ಬರಬೇಕು ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಹೇಳಿದರು.

ಸಿಡೆದಹಳ್ಳಿಯ ಸೌಂದರ್ಯ ಕಾಲೇಜಿನಲ್ಲಿ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ವಕೀಲರಿಗೆ ಕೆಲಸವಿಲ್ಲವೆಂಬ ತಪ್ಪು ಭಾವನೆಯಿದೆ. ಅದು ಸುಳ್ಳಾಗಿದೆ. ಉದಾಹರಣೆಗೆ ಅಮೆರಿಕದಲ್ಲಿ 250 ಜನರಿಗೆ ಒಬ್ಬ ವಕೀಲರಿದ್ದಾರೆ. ಇಂಗ್ಲೆಂಡ್‌ನಲ್ಲಿ 500 ಜನರಿಗೆ ಒಬ್ಬ ವಕೀಲನಿದ್ದರೆ, ಭಾರತದಲ್ಲಿ ಒಂದು ಸಾವಿರ ಜನರಿಗೆ ಒಬ್ಬರಿದ್ದಾರೆ. ಇದನ್ನು ಮನಗಂಡು ಪ್ರತಿಯೊಬ್ಬ ಕಾನೂನು ಪದವೀಧರರು ಸಮಾಜಮುಖಿಯಾದ ವೃತ್ತಿಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಆಶಿಸುತ್ತೇನೆ' ಎಂದು ಅವರು ತಿಳಿಸಿದರು.

ಕಾಲೇಜಿನ ಸಂಸ್ಥಾಪಕ ಪಿ. ಮಂಜಪ್ಪ ಮಾತನಾಡಿ ನೂತನ ಆವಿಷ್ಕಾರಗಳನ್ನು ನಾವು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದರು.

ಕಾಲೇಜಿನ ಸಿಇಒ ಎಂ. ಕೀರ್ತನ್ ಕುಮಾರ್ ಮಾತನಾಡಿದರು. ಪ್ರಾಂಶುಪಾಲ ಡಾ. ಮಹೇಶ್, ಟ್ರಸ್ಟಿ ವರುಣ್ ಕುಮಾರ್, ಬಿಸಿಎ ವಿಭಾಗದ ಮುಖ್ಯಸ್ಥೆ ರೇಖಾ, ಸಿಮ್ಸ್ ಕಾಲೇಜಿನ ನಿರ್ದೇಶಕ ವಾಸು, ಪ್ರಾಂಶುಪಾಲ ಸಂಜೀವ್ ಸಾಲಂಕಿ ಇದ್ದರು.



ಸಿಡೆದಹಳ್ಳಿಯ ಸೌಂದರ್ಯ ಕಾಲೇಜಿನಲ್ಲಿ ಆಯೋಜಿಸಿದ್ದ ವಿವಿಧ ವಿಭಾಗದ ಪದವಿ ಪ್ರದಾನ ಸಮಾರಂಭದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ನರೇಂದ್ರ ಪ್ರಸಾದ್ ಅವರು ವಿದ್ಯಾರ್ಥಿಗಳು ಪದವಿ ಪ್ರದಾನ ಮಾಡಿದರು

ದನಗಳ ಮೈ ತೊಳೆಯಲು ಹೋದ ಇಬ್ಬರು ಯುವಕರು ನೀರುಪಾಲು

ಗುಬ್ಬಿ: ತಾಲ್ಲೂಕಿನ ಕಡಬ ಕೆರೆಯಲ್ಲಿ ಭಾನುವಾರ ಬೆಳಿಗ್ಗೆ ದನಗಳ ಮೈತೊಳೆಯಲು ಹೋಗಿದ್ದ ಆಡುಗೊಂಡನಹಳ್ಳಿ ಗ್ರಾಮದ ಹರೀಶ್(31) ಹಾಗೂ ಯೋಗೀಶ್ (34) ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಇಬ್ಬರೂ ಕೆರೆಯಲ್ಲಿ ಮುಳುಗುತ್ತಿರುವುದನ್ನು ಗಮನಿಸಿದ ಸ್ಥಳೀಯರು ರಕ್ಷಿಸಲು ನೀರಿಗೆ ಇಳಿದಿದ್ದಾರೆ. ಸಾಧ್ಯವಾಗದೇ ಇದ್ದಾಗ ಮನೆಯವರಿಗೆ ವಿಷಯ ತಿಳಿಸಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಶವಗಳನ್ನು ಹೊರತೆಗೆದರು. ಗುಬ್ಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಅಹವಾಲುಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು: ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ **(9606038256)** ಸಹ ಮಾಡಬಹುದು.



ಕೆ.ಆರ್. ಮಾರುಕಟ್ಟೆಯ ರಸ್ತೆಯ ದುಃಸ್ಥಿತಿ.

'ಕೆಸರು ಗದ್ದೆಯಾದ ರಸ್ತೆ'

ಕೆ.ಆರ್. ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಬಹುತೇಕ ರಸ್ತೆಗಳು ಸಂಪೂರ್ಣ ಹಾಳಾಗಿವೆ. ನಗರದಲ್ಲಿ ಸಣ್ಣ ಮಳೆ ಸುರಿದರೂ ಕೆಸರು ಗದ್ದೆ ಯಾಗಿ ಮಾರ್ಪಡುತ್ತವೆ. ಮಾರುಕಟ್ಟೆಗೆ ಬರುವವರೆಲ್ಲ ಎಚ್ಚರಿಕೆಯಿಂದ ಸಂಚರಿಸದಿದ್ದರೆ, ಬಿದ್ದು ಮೂಳೆ ಮುರಿದುಕೊಳ್ಳುವ ಸಾಧ್ಯತೆಯೇ ಹೆಚ್ಚು. ಚಾಮರಾಜಪೇಟೆ ಬಿಬಿಎಂಪಿ ಎಂಜಿಯರ್‌ಗೆ ದೂರು ನೀಡಿದರೆ ಅವರು ಜಲಮಂಡಳಿ ಕಡೆ ಬೆರಳು ಮಾಡುತ್ತಾರೆ. ಜಲಮಂಡಳಿಯನ್ನು ಪ್ರಶ್ನಿಸಿದರೆ ಅವರು ದುರಸ್ತಿ ಮಾಡುವುದಾಗಿ ಆಶ್ವಾಸನೆ ನೀಡುತ್ತಿದ್ದಾರೆ. ಎರಡು ಇಲಾಖೆಗಳ ನಡುವಿನ ಜಗಳದಲ್ಲಿ ಸಾರ್ವಜನಿಕರು ಪರದಾಡುತ್ತಿದ್ದಾರೆ.

ಪ್ರಭಾಕರ್, ಚಾಮರಾಜಪೇಟೆ



ಮಡಿವಾಳ ಕೆರೆ ಆವರಣದಲ್ಲಿ ಮರವೊಂದು ಬಿದ್ದಿರುವುದು.

'ಮಡಿವಾಳ ಕೆರೆ ಅಭಿವೃದ್ಧಿಗೊಳಿಸಿ'


ಮಡಿವಾಳ ಕೆರೆಗೆ ಕಾಯಕಲ್ಪ ದೊರೆತಿಲ್ಲ. ಕೆರೆಯಲ್ಲಿ ಉತ್ಪತ್ತಿಯಾಗುವ ಪಾಚಿಯನ್ನು ಕೆರೆಯ ಆವರಣದಲ್ಲಿ ಹಾಕಲಾಗಿದ್ದು, ಗಬ್ಬೆದ್ದು ನಾರುತ್ತಿದೆ. ವಾಯು ವಿಹಾರಗಳಿಗೆ ಮೂಲಸೌಲಭ್ಯಗಳನ್ನು ಕಲ್ಪಿಸಿಲ್ಲ. ಇತ್ತೀಚಿಗೆ ಸುರಿದ ಮಳೆಗೆ ಮರವೊಂದು ಬಿದ್ದಿದ್ದು, ಅದನ್ನು ತೆರವುಗೊಳಿಸುವ ಕೆಲಸವಾಗಿಲ್ಲ. ಕೂಡಲೇ ಈ ಕೆರೆಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ಆದ್ಯತೆ ನೀಡಬೇಕು. ಕೆರೆಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು.

ಎಚ್. ದೊಡ್ಡ ಮಾರಯ್ಯ, ಸ್ಥಳೀಯ ನಿವಾಸಿ

'ರಸ್ತೆ ದುರಸ್ತಿಗೊಳಿಸಿ'

ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ರಾಘವೇಂದ್ರ ಬಡಾವಣೆಯ ಪೈಪ್‌ಲೈನ್ ರಸ್ತೆ ಹಾಳಾಗಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಇಲ್ಲಿನ ದೂಳು ಆರೋಗ್ಯದ ಗಂಭೀರ ಪರಿಣಾಮ ಬೀರುತ್ತಿದೆ. ಗುಂಡಿಗಳಿಂದಾಗಿ ಸಂಚಾರ ದಟ್ಟಣೆಯಾಗುತ್ತಿದೆ. ಸಂಚಾರಕ್ಕೆ ಅನನುಕೂಲವಾಗಿದೆ. ಈ ಬಗ್ಗೆ ಜನಪ್ರತಿನಿಧಿಗಳಿಗೆ, ಬಿಬಿಎಂಪಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ.

ಅನಿಲ್ ಕುಮಾರ್ ಕೆ.ಎಸ್.
ಸ್ಥಳೀಯ ನಿವಾಸಿ



ರಾಘವೇಂದ್ರ ಬಡಾವಣೆಯ ಪೈಪ್‌ಲೈನ್ ರಸ್ತೆ

'ರಸ್ತೆ ತುಂಬೆಲ್ಲ ಜಲ್ಲಿಕಲ್ಲು'

ಮೈಸೂರು ಬ್ಯಾಂಕ್ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಅವೆನ್ಯೂ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ರಸ್ತೆ ತುಂಬೆಲ್ಲಾ ಜಲ್ಲಿಕಲ್ಲು ಹರಡಿಕೊಂಡಿವೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರೂ ವಾಹನಗಳು ಸಂಚರಿಸುತ್ತವೆ. ಅಲ್ಲಲ್ಲಿ ಗುಂಡಿಗಳು ಬಿದ್ದಿರುವುದರಿಂದ ಸಂಚಾರ ದಟ್ಟಣೆ ಉಂಟಾಗಿ ಅಪಘಾತಗಳು ಸಂಭವಿಸುತ್ತಿವೆ. ಪ್ರತಿನಿತ್ಯ ದೂಳಿನ ಮಜ್ಜನವಾದರೆ, ಮಳೆ ಬಂದರೆ ಗುಂಡಿ ಯಾವುದು, ರಸ್ತೆ ಯಾವುದು ಎನ್ನುವುದೇ ಗೊತ್ತಾಗುವುದಿಲ್ಲ. ರಸ್ತೆ ತಿರುವಿನಲ್ಲಿ ಕಲ್ಲುಗಳು ಎಲ್ಲೆಡೆ ವ್ಯಾಪಿಸಿಕೊಂಡಿದ್ದು, ಸಂಚಾರವೇ ಕಷ್ಟವಾಗಿದೆ. ಬಿಬಿಎಂಪಿ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಸುರೇಶ್, ವಾಹನ ಸವಾರ



ಮೈಸೂರು ಬ್ಯಾಂಕ್ ವೃತ್ತದ ಅವೆನ್ಯೂ ರಸ್ತೆಯಲ್ಲಿ ಜಲ್ಲಿಕಲ್ಲು ಹರಡಿಕೊಂಡಿದೆ.



ಪೀಣ್ಯ 2ನೇ ಹಂತದ 14ನೇ ಅಡ್ಡರಸ್ತೆಯಲ್ಲಿ ಬಿದ್ದಿರುವ ಗುಂಡಿ.

'ಪೀಣ್ಯ: ರಸ್ತೆ ದುರಸ್ತಿಗೊಳಿಸಿ'

ಪೀಣ್ಯ 2ನೇ ಹಂತದ 14ನೇ ಅಡ್ಡರಸ್ತೆ ಸಂಪೂರ್ಣ ಹಾಳಾಗಿದೆ. ಇತ್ತೀಚೆಗೆ ಮಳೆ ಬಂದಾಗ ದೊಡ್ಡ ಗುಂಡಿ ಬಿದ್ದಿದೆ. ಮಳೆ ನೀರೆಲ್ಲ ಈ ಗುಂಡಿಯಲ್ಲಿ ಸಂಗ್ರಹವಾಗಿದ್ದು, ವಾಹನ ಸವಾರರು ಇದರಲ್ಲಿ ಬಿದ್ದು ಮೂಳೆ ಮುರಿದುಕೊಂಡ ಘಟನೆಗಳು ನಡೆದಿವೆ. ಈ ಭಾಗದ ಎಲ್ಲ ರಸ್ತೆಗಳಿಗೆ ಅಭಿವೃದ್ಧಿ ಮಾಡಲಾಗಿದೆ. ಆದರೆ, ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳಿಗೆ ಈ ರಸ್ತೆ ಮಾತ್ರ ಕಾಣಿಸುತ್ತಿಲ್ಲ. ಬಿಬಿಎಂಪಿ ಅಧಿಕಾರಿಗಳು ಕೂಡಲೇ ಸಮಸ್ಯೆ ನಿವಾರಿಸಬೇಕು.

ಮಂಜುನಾಥ್ ಸಿ ನೆಟ್ಕಲ್, ಸ್ಥಳೀಯ ನಿವಾಸಿ



ನಾಗರಭಾವಿ ಬಿಡಿಎ ಕಾಂಪ್ಲೆಕ್ಸ್ ಹಿಂಭಾಗದ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವ ಅನಧಿಕೃತ ಅಂಗಡಿಗಳು.

'ಅನಧಿಕೃತ ಅಂಗಡಿ ತೆರವುಗೊಳಿಸಿ'

ನಾಗರಭಾವಿ ಬಿಡಿಎ ಕಾಂಪ್ಲೆಕ್ಸ್ ಹಿಂಭಾಗದ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಅನಧಿಕೃತ ಅಂಗಡಿಗಳನ್ನು ತೆರೆಯಲಾಗಿದೆ. ಇದರಿಂದ, ಪಾದಚಾರಿಗಳಿಗೆ ಓಡಾಟಕ್ಕೆ ಸಮಸ್ಯೆಯಾಗಿದೆ. ಜತೆಗೆ ಉಪನೋಂದಣಾಧಿಕಾರಿ ಕಚೇರಿ ಮುಂಭಾಗದಲ್ಲಿಯೂ ಅನಧಿಕೃತ ಅಂಗಡಿಗಳನ್ನು ಪ್ರಾರಂಭಿಸಲಾಗಿದೆ. ಇದರಿಂದ ವೃದ್ಧರು, ಮಹಿಳೆಯರು ಮತ್ತು ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಮುಖ್ಯರಸ್ತೆಯಲ್ಲಿ ಹಾದು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಅಂಗಡಿಗಳನ್ನು ತೆರವುಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಎಂ. ಗೋಪಾಲ್, ಸ್ಥಳೀಯ ನಿವಾಸಿ

ಗಮನ ಸೆಳೆದ ಯಕ್ಷಗಾನ, ಕಂಬಳ ಕಲಾಕೃತಿಗಳು, ಕುಂದ ಕನ್ನಡ ಭಾಷೆಯ ಸೊಗಡು

ಕುಂದಾಪ್ರ ಸಂಸ್ಕೃತಿಯ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಭಾನುವಾರ ಕುಂದ ಕನ್ನಡ ಭಾಷೆಯ ಸೊಗಡು, ಸಂಸ್ಕೃತಿ, ಆಚಾರ, ವಿಚಾರಗಳು ಅನಾವರಣಗೊಂಡವು.

ಅತ್ತಿಗುಪ್ಪೆಯಲ್ಲಿರುವ ಬಂಟರ ಭವನದಲ್ಲಿ ಬೆಂಗಳೂರಿನ ಕುಂದಾಪ್ರ ಕನ್ನಡ ಪ್ರತಿಷ್ಠಾನ ಹಮ್ಮಿಕೊಂಡಿದ್ದ 'ಕುಂದಾಪ್ರ ಕನ್ನಡ ಹಬ್ಬ-2023' ಇದಕ್ಕೆ ವೇದಿಕೆಯಾಯಿತು.

ಕುಂದಾಪುರದ ಭಾಗದಲ್ಲಿ ಕಾಣುವ ಹೋಳಿ ಕುಣಿತವು ಬಂದವರನ್ನು ಸ್ವಾಗತಿಸಿತು. ಯಕ್ಷಗಾನ, ಕಂಬಳ ಕ್ರೀಡೆಯ ಕಲಾಕೃತಿಗಳು ಗಮನಸೆಳೆದವು. ಕುಂದಾಪುರದ ಗ್ರಾಮೀಣ ಬದುಕು, ಸಂಸ್ಕೃತಿಯನ್ನು ಬಿಂಬಿಸುವ ಕಲಾಕೃತಿಗಳ ಜೊತೆಗೆ ನಿಂತು ಜನರು ಸೆಲ್ಫಿ ತೆಗೆದುಕೊಂಡುಕೊಂಡು ಸಂಭ್ರಮಪಟ್ಟರು.

1000ಕ್ಕೂ ಅಧಿಕ ಜನರು ನೋಂದಣಿ ಮಾಡಿಕೊಂಡು ಭಾಗವಹಿಸಿರುವುದು ಈ ಸಂಭ್ರಮದ ಹಿರಿಮೆಗೆ ಸಾಕ್ಷಿಯಾಯಿತು. ಪುಟ್ಟ ಮಕ್ಕಳಿಂದ ವೃದ್ಧರವರೆಗೆ ಎಲ್ಲರೂ ಭಾಗವಹಿಸಿ ವಿವಿಧ ಸ್ಪರ್ಧೆಗಳಿಗೆ ಮೆರುಗು ನೀಡಿದರು.

ಮಕ್ಕಳಿಗೆ ಸೈಕಲ್ ಟೈರ್ ಸ್ಪರ್ಧೆ, ಯುವತಿಯರಿಗೆ ಹೂವು ಕಟ್ಟುವುದು, ಮಹಿಳೆಯರಿಗೆ ಹಲಸಿನ ಕೊಟ್ಟೆ ಕಟ್ಟುವುದು, ಮಡ್ಲ್ ನೆಯ್ಯುವುದು (ತೆಂಗಿನ ಗರಿ ಹೆಣೆಯುವುದು) ಸ್ಪರ್ಧೆಗಳು ಖುಷಿ ನೀಡಿದವು. ಅಡಿಕೆ ಹಾಳೆ ಓಟ, ಹಣಬೊಂಡ ಓಟಗಳಲ್ಲಿ ದಂಪತಿಗಳು ಭಾಗವಹಿಸಿ ರೋಚಕತೆ ತಂದರು. ಗಿರ್ಗಿಟ್ಲೆ, ಚಿತ್ರಕಲೆ ಹೀಗೆ ಅನೇಕ ಸ್ಪರ್ಧೆಗಳಲ್ಲಿ ವಯಸ್ಸು ಮರೆತು ಎಲ್ಲರೂ ಪಾಲ್ಗೊಂಡರು.

ಹಳ್ಳಿ ಊಟ: ಕುಂದಕನ್ನಡಿಗರು ಮಾತ್ರವಲ್ಲದೇ ಬೇರೆ ಬೇರೆ ಜಿಲ್ಲೆಗಳ, ಬೇರೆ ಬೇರೆ ರಾಜ್ಯಗಳ ಜನರು ಕುಂದಾಪ್ರ ದಿನಾಚರಣೆಯಲ್ಲಿ ಭಾಗವಹಿಸಿ ಸಂಸ್ಕೃತಿಯ ಸವಿ ಸವಿದರು. ಹಾಲುಬಾಯಿ, ಕೊಟ್ಟೆ ಕಡಬು, ಗೋಲಿಬಜೆ, ಬನ್ಸ್, ಎಳ್ ಬಾಯ್ರ್, ಹೆಸ್ರ ಬಾಯ್ರ್ ವಿವಿಧ ಪಾನಕ, ಹಬ್ಬದೂಟ, ಇಡ್ಲಿ ಕುಂದಾಪ್ರ ಕೋಳಿ ಸುಕ್ಕ, ಬಿರಿಯಾನಿ, ಚಟ್ಲಿ ಸಾರು, ಹಬ್ಬ ತಿಂಡಿಗಳಾದ ಜಿಲೇಬಿ, ಮಿಠಾಯಿ ಖಾದ್ಯಗಳಿಗೆ ಎಲ್ಲರೂ ಮಾರು ಹೋದರು.



ಅತ್ತಿಗುಪ್ಪೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಕುಂದಾಪ್ರ ಕನ್ನಡ ಹಬ್ಬ'ದಲ್ಲಿ ನಡೆದ ಅಡಿಕೆ ಹಾಳೆ ಓಟದಲ್ಲಿ ದಂಪತಿಗಳು ಸಂಭ್ರಮದಿಂದ ಪಾಲ್ಗೊಂಡರು.

'ಕುಂದಭಾಷೆ ಅಧ್ಯಯನ ಪೀಠಕ್ಕೆ ಪತ್ರ ವ್ಯವಹಾರ'

ಕುಂದಾಪುರ ಭಾಷೆ ಅಧ್ಯಯನ ಪೀಠಕ್ಕೆ ಸಂಬಂಧಿಸಿದಂತೆ ಮಂಗಳೂರು ವಿಶ್ವವಿದ್ಯಾಲಯವು ಸರ್ಕಾರಕ್ಕೆ ಪತ್ರ ಬರೆದಿದೆ. ಸರ್ಕಾರವು ಈ ಬಗ್ಗೆ ಸಮಿತಿ ರಚಿಸುವ ಸಾಧ್ಯತೆ ಇದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ ಹೆಗ್ಡೆ ತಿಳಿಸಿದರು.

'ಕುಂದಾಪ್ರ ಕನ್ನಡ ಹಬ್ಬ'ದ ಸಮಾರೋಪದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಅರೆಭಾಷೆ ಹಾಗೂ ಕುಂದಾಪುರ ಭಾಷೆಯ ಅಧ್ಯಯನ ಪೀಠ ರಚನೆಗೆ ಸಮಿತಿಯಾಗಬೇಕು. ಸಮಿತಿ ರಚನೆಯಾದರೆ ಅನುದಾನ ದೊರೆಯಲಿದೆ. ಈ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಮೀಸಲಾತಿ ಎಲ್ಲರಿಗೂ ಸಿಗದ ಹೊರತು ಜಾತಿ ಪದ್ಧತಿ ನಾಶವಾಗುವುದಿಲ್ಲ. ಇದೀಗ ಮೀಸಲಾತಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಇದು ಮುಂದೆ ಎಲ್ಲಿ ಹೋಗಿ ತಲುಪುತ್ತದೆ ಎನ್ನುವುದು ಗೊತ್ತಿಲ್ಲ ಎಂದರು.

ಸಾಹಿತಿ ಪ್ರೊ. ಎ.ವಿ. ನಾವಡ, ಸಂಗೀತ ನಿರ್ದೇಶಕ ರವಿ ಬಸ್ರೂರು ಅವರಿಗೆ ಊರಗೌರವ ನೀಡಿ ಗೌರವಿಸಲಾಯಿತು.

ಉದ್ಘಾಟನೆ ಕಾರ್ಯಕ್ರಮಕ್ಕೆ ಕಂಬಳ ಕ್ಷೇತ್ರದ ಸಾಧಕ ಶಾಂತರಾಮ ಶೆಟ್ಟಿ ಬಾರ್ಕೂರು, ಶಾಸಕರಾದ ಕಿರಣ್ ಕೊಡ್ಗಿ, ಗುರುರಾಜ್ ಗಂಟಿಹೊಳೆ ಸಾಕ್ಷಿಯಾದರು. ಸಮಾರೋಪಕ್ಕೆ ನಟ ರಿಷಬ್ ಶೆಟ್ಟಿ, ನಟ ರಾಜ್ ಬಿ.ಶೆಟ್ಟಿ, ಪ್ರಮೋದ್ ಬಿ.ಶೆಟ್ಟಿ, ಶಾಸಕ ಎಂ. ಕೃಷ್ಣಪ್ಪ, ಬಂಟರ ಸಂಘದ ಅಧ್ಯಕ್ಷ ಎಂ. ಮುರಳೀಧರ ಹೆಗ್ಡೆ ಮೆರುಗು ನೀಡಿದರು.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಭಾನುವಾರ 'ನಕ್ಸಲೀಯರ ನಾಡಿನಲ್ಲಿ ರವಿಬೆಳಗೆರೆ' ಪುಸ್ತಕವನ್ನು ಕವಿ ಬಿ.ಆರ್. ಲಕ್ಷ್ಮಣ ರಾವ್ ಬಿಡುಗಡೆ ಮಾಡಿದರು. ಯಶೋಮತಿ ಬೆಳಗೆರೆ, ಸಾಹಿತಿ ಡಾ. ವಿಜಯಾ, ಲೇಖಕಿ ಶಶಿಕಲಾ ವಸ್ತ್ರದ ಮತ್ತು ಹಿಮವಂತ ಬೆಳಗೆರೆ ಇದ್ದರು —ಪ್ರಜಾವಾಣಿ ಚಿತ್ರ

'ಉದಾತ್ತ ಧ್ಯೇಯದ ನಕ್ಸಲ್ ಹೋರಾಟ'

'ನಕ್ಸಲೀಯರ ನಾಡಿನಲ್ಲಿ ರವಿ ಬೆಳಗೆರೆ' ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಕ್ಸಲೀಯರ ಹೋರಾಟದಲ್ಲಿ ಉದಾತ್ತ ಧ್ಯೇಯ ಇತ್ತು. ಸಮಸಮಾಜದ ಕನಸು ಇತ್ತು. ಶೋಷಣೆಯ ವಿರುದ್ಧ ಕ್ರಾಂತಿಯ ನಂಬಿಕೆ ಇಟ್ಟುಕೊಂಡಿದ್ದರು. ನಕ್ಸಲರ ಕಾರಣದಿಂದ ಸಮಾಜ ಮುಂದಕ್ಕೆ ಬಂತು. ಇಲ್ಲದೇ ಇದ್ದಿದ್ದರೆ ಈಗಿರುವ ಸ್ಥಿತಿ ತಲುಪಲು ಇನ್ನೂ 150 ವರ್ಷಗಳು ಬೇಕಾಗುತ್ತಿತ್ತು' ಎಂದು ಕವಿ ಬಿ.ಆರ್. ಲಕ್ಷ್ಮಣ ರಾವ್ ಹೇಳಿದರು.

ರವಿಬೆಳಗೆರೆ ಪ್ರಕಾಶನದ ನಾಲ್ಕನೇ ಕೃತಿ 'ನಕ್ಸಲೀಯ ನಾಡಿನಲ್ಲಿ ರವಿ ಬೆಳಗೆರೆ' ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಆಗ ಇದ್ದ ಕಾಂಗ್ರೆಸ್ ಸರ್ಕಾರದಿಂದ ಸಮಸಮಾಜದ ಕನಸು ನನಸಾಗದು ಎಂದು ಅವರು ಕ್ರಾಂತಿಯ ದಾರಿ ಹಿಡಿದರು. ಕಳೆದ ಶತಮಾನದ ಈ ಚಳವಳಿ ಈಗ ಪ್ರಸ್ತುತವಾಗಿ ಉಳಿದಿಲ್ಲ. ತಿಂಗಳೊಪ್ಪೊತ್ತಿನ ಕ್ರಾಂತಿಯಲ್ಲಿ ಎಲ್ಲ ಬದಲಾಗಬೇಕು ಎಂಬುದು ಸಾಧ್ಯವಾಗದು. ಪಶ್ಚಿಮ ಬಂಗಾಳದಲ್ಲಿ 20 ವರ್ಷಗಳ ಕಾಲ ಕಮ್ಯುನಿಸ್ಟರೇ ಆಳ್ವಿಕೆ ಮಾಡಿದರೂ ಕನಸು ನನಸು ಮಾಡಲು ಸಾಧ್ಯವಾಗಿಲ್ಲ' ಎಂದರು.

'ರವಿ ಬೆಳಗೆರೆ ಕೇವಲ ಪತ್ರಕರ್ತನಾಗಿದ್ದರೆ ಕೊಂಡಪಲ್ಲಿ ಸೀತಾರಾಮಯ್ಯ ಅವರ ಸಂದರ್ಶನದ, ಒಡನಾಟದ ಮಾಹಿತಿಯಷ್ಟೇ ದೊರಕುತ್ತಿತ್ತು. ಅವರು ಸೃಜನಶೀಲ ಬರಹಗಾರರೂ ಆಗಿದ್ದರಿಂದ ಮಾಹಿತಿಯ ಬದಲು ಅನುಭವವನ್ನೇ ಕಟ್ಟಿಕೊಟ್ಟಿದ್ದಾರೆ' ಎಂದರು.

'ನಕ್ಸಲೀಯ ಜಗತ್ತಿನಲ್ಲಿ ಹೆಣ್ಣಿನ ಸವಾಲು'ಗಳ ಬಗ್ಗೆ ಲೇಖಕಿ ಶಶಿಕಲಾ ವಸ್ತ್ರದ ಮಾತನಾಡಿ, 'ರಾಜರ ಕಾಲದ ಯುದ್ಧಗಳೇ ಇರಲಿ, ಆನಂತರದ ಸಮರಗಳೇ ಇರಲಿ ಮೊದಲ ಬಲಿಪಶು ಹೆಣ್ಣು ಆಗಿದ್ದಳು. ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಎಸಗುವುದೂ ಯುದ್ಧದ ಭಾಷೆಯೇ ಆಗಿತ್ತು. ಮಣಿಪುರದಲ್ಲಿ ಹೆಣ್ಣುಮಕ್ಕಳ ಬೆತ್ತಲೆ ಮೆರವಣಿಗೆ ಮಾಡಿದ್ದು, ಅತ್ಯಾಚಾರ ಮಾಡಿದ್ದು ಇದೇ ಮನಸ್ಥಿತಿ. ಈ ಮನಸ್ಥಿತಿ ಇಲ್ಲದ ಏಕೈಕ ಹೋರಾಟ ನಕ್ಸಲ್ ಹೋರಾಟ' ಎಂದು ತಿಳಿಸಿದರು.

ಮಾನವೀಯತೆಯೇ ನಕ್ಸಲರ ಮೂಲಧಾತು ಆಗಿತ್ತು. ಆದರೆ, ಅವರು ಕಂಡುಕೊಂಡ ದಾರಿ ಮಾತ್ರ ವಿಭಿನ್ನವಾಗಿತ್ತು. ನಕ್ಸಲರು ಸಹಿತ ಅನೇಕರ ಬಲಿದಾನವನ್ನು ತಿಳಿದರೆ ನಾವು ನಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೇವೆಯೇ ಎಂಬ ಪ್ರಶ್ನೆ ಬರುತ್ತಿದೆ ಎಂದು ವಿಶ್ಲೇಷಿಸಿದರು.

ಲೇಕಕಿ ವಿಜಯಾ ಅಧ್ಯಕ್ಷತೆ ವಹಿಸಿದ್ದರು. ಯಶೋಮತಿ ಬೆಳಗೆರೆ ಮತ್ತು ಹಿಮವಂತ ಬೆಳಗೆರೆ ಕಾರ್ಯಕ್ರಮ ಸಂಘಟಿಸಿದ್ದರು. ಪ್ರಿಯಾ ಯಾದವ್ ಸಂಗೀತ ಸಂಜೆ ನಡೆಸಿಕೊಟ್ಟರು.

'ಬೆಳ್ಳಿ ಸಂಭ್ರಮ ಗೌರವ' ಪ್ರಶಸ್ತಿ ಪ್ರಕಟ

ಜು. 29ರಿಂದ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ವಿಜಯಪುರ: ಇದೇ 29 ಮತ್ತು 30ರಂದು ವಿಜಯಪುರದಲ್ಲಿ ಆಯೋಜಿಸಿರುವ 10ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ 'ಬೆಳ್ಳಿ ಸಂಭ್ರಮ ಗೌರವ' ಪ್ರಶಸ್ತಿಗೆ ವಿವಿಧ ಕ್ಷೇತ್ರಗಳ 14 ಮಂದಿ ಸಾಧಕರು ಹಾಗೂ 'ಬೆಳ್ಳಿ ಸಂಭ್ರಮ ಪುಸ್ತಕ' ಪ್ರಶಸ್ತಿಗೆ 16 ಮಂದಿಯನ್ನು ಆಯ್ಕೆ ಮಾಡಲಾಗಿದೆ ಎಂದು ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ ಗೊಳಸಂಗಿ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಬುದ್ಧ ಭಾರತ' ಎಂಬ ಆಶಯದಲ್ಲಿ ನಗರದ ಕಂದಗಲ್ಲ ಹನುಮಂತರಾಯ ರಂಗಮಂದಿರದಲ್ಲಿ ಎರಡು ದಿನ ನಡೆಯಲಿರುವ ಈ ಸಮ್ಮೇಳನದಲ್ಲಿ ವಿವಿಧ ಗೋಷ್ಠಿ, ಉಪನ್ಯಾಸ, ಸಂವಾದ, ಪುಸ್ತಕ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಕವಿ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಅವರು ಜುಲೈ 30ರಂದು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಹೇಳಿದರು

'ಬೆಳ್ಳಿ ಸಂಭ್ರಮ ಗೌರವ' ಪ್ರಶಸ್ತಿ : ಆರ್.ದೊಡ್ಡೇಗೌಡ, ಬೆಂಗಳೂರು (ಸಾಹಿತ್ಯ), ವೀರಹನುಮಾನ, ರಾಯಚೂರು (ಸಾಹಿತ್ಯ), ಶ್ರೀಶೈಲ ನಾಗರಾಳ, ಕಲಬುರಗಿ (ಸಾಹಿತ್ಯ), ಡಾ.ಗವಿಸಿದ್ದಪ್ಪ ಪಾಟೀಲ, ಹುಮನಾಬಾದ್ (ಸಾಹಿತ್ಯ), ಮುರ್ತುಜಾ ಬೇಗಂ ಕೊಡಗಲಿ ಇಳಕಲ್ಲ (ಸಾಹಿತ್ಯ), ಹಾರೋಹಳ್ಳಿ ರವೀಂದ್ರ ಮೈಸೂರು (ಸಾಹಿತ್ಯ), ಪರಶುರಾಮ ಶಿವಶರಣ, ವಿಜಯಪುರ (ಸಾಹಿತ್ಯ), ನರೇಂದ್ರ ನಾಗವಾಲ, ಮೈಸೂರು (ಸಮಾಜಸೇವೆ), ಮುಳ್ಳೂರ ಶಿವಮಲ್ಲು, ಚಾಮರಾಜನಗರ (ದಲಿತ ಚಳವಳಿ), ಡಾ.ಸಂಜೀವಕುಮಾರ ಮಾಲಗತ್ತಿ, ಧಾರವಾಡ (ಪತ್ರಿಕಾರಂಗ), ರಾಜು ವಿಜಾಪುರ, ಹುಬ್ಬಳ್ಳಿ (ಪತ್ರಿಕಾರಂಗ), ಸೌಜನ್ಯ ಕರಡೋಣಿ, ಧಾರವಾಡ (ಚಿತ್ರಕಲೆ), ಸಿ.ಆರ್. ನಟರಾಜ ಕೋಲಾರ (ಸಂಗೀತ), ದೇವು ಕೆ. ಅಂಬಿಗ, ವಿಜಯಪುರ (ಸಿನಿಮಾ) ಆಯ್ಕೆ ಮಾಡಲಾಗಿದೆ.

'ಬೆಳ್ಳಿ ಸಂಭ್ರಮ ಪುಸ್ತಕ' ಪ್ರಶಸ್ತಿ: ಬಿದಲೋಟಿ ರಂಗನಾಥ್, ಡಾ.ಸದಾಶಿವ ದೊಡಮನಿ, ಡಾ.ಶಾಂತನಾಯ್ಕ ಶಿರಗಾನಹಳ್ಳಿ, ರೇಣುಕಾ ಹೆಳವರ, ಪಿ.ಆರಡಿ ಮಲ್ಲಯ್ಯ ಕಟ್ಟೇರ, ಡಾ.ಪ್ರಸನ್ನ ನಂಚಾಪುರ, ಡಾ.ಗಿರೀಶ ಮೂಗ್ತಿಹಳ್ಳಿ, ಪ್ರಭುಲಿಂಗ ನೀಲೂರೆ, ಗೌಡಗೆರೆ ಮಾಯುಶ್ರೀ, ಡಾ.ಎಚ್.ಡಿ. ಉಮಾಶಂಕರ, ಸೋಮಲಿಂಗ ಗೆಣ್ಣೂರ, ಡಾ.ಎಂ.ಬಿ.ಕಟ್ಟಿ, ಡಾ.ಹೊಂಬಯ್ಯ ಹೊನ್ನಲಗೆರೆ, ಡಾ.ಅಮರೇಶ ಯತಗಲ್, ಡಾ.ಪೂರ್ಣಿಮಾ ಧಾಮಣ್ಣವರ, ರಾಯಸಾಬ ದರ್ಗಾದವರ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

'ದಲಿತ ಸಾಹಿತ್ಯ ಪರಿಷತ್ತು ಅತ್ಯುತ್ತಮ ಸಂಘಟಕ ಸಾಧಕಶ್ರೀ ಪ್ರಶಸ್ತಿ'ಯನ್ನು ಪರಿಷತ್ ವಿಭಾಗೀಯ ಸಂಯೋಜಕ ಗಣಪತಿ ಚಲವಾದಿ, ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷ ತಾಯರಾಜ್ ಮರ್ಚಟಹಾಳ, ಸಿಂಧನೂರು ತಾಲ್ಲೂಕು ಅಧ್ಯಕ್ಷ ಹುಸೇನಪ್ಪ ಅಮರಾಪುರ ಅವರಿಗೆ ಪ್ರದಾನ ಮಾಡಲಾಗುವುದು ಎಂದರು.

ಜ್ಞಾನವಾಪಿ: ವೈಜ್ಞಾನಿಕ ಸಮೀಕ್ಷೆ ಇಂದಿನಿಂದ

ವಾರಾಣಸಿ (ಪಿಟಿಐ): ಜ್ಞಾನವಾಪಿಯ ಕಾಶಿ ವಿಶ್ವನಾಥ ದೇಗುಲದ ಪಕ್ಕದಲ್ಲಿರುವ ಮಸೀದಿಯು ದೇವಾಲಯದ ಮೇಲೆ ನಿರ್ಮಾಣವಾಗಿದೆಯೇ ಎಂಬುದರ ನಿರ್ಣಯಕ್ಕಾಗಿ ವೈಜ್ಞಾನಿಕ ಸಮೀಕ್ಷೆ ನಡೆಸಲು ಭಾರತೀಯ ಪುರಾತತ್ವ ಇಲಾಖೆಯ ಅಧಿಕಾರಿಗಳ ತಂಡವು ವಾರಾಣಸಿಗೆ ಆಗಮಿಸಿದೆ.

ಸೋಮವಾರ ಬೆಳಿಗ್ಗೆ 7ರಿಂದಲೇ ಸರ್ವೆ ಕಾರ್ಯ ನಡೆಯಲಿದೆ. ಸಮೀಕ್ಷೆ ನಡೆಯುವ ವೇಳೆ ಪ್ರಕರಣದ ಅರ್ಜಿದಾರರೆಲ್ಲರ ವಕೀಲರೂ ಉಪಸ್ಥಿತರಿರಲಿದ್ದಾರೆ ಎಂದು ಪ್ರಕರಣದಲ್ಲಿ ಹಿಂದೂಗಳ ಪರ ವಾದ ಮಂಡಿಸುತ್ತಿರುವ ವಕೀಲ ಮದನ್ ಮೋಹನ್ ಯಾದವ್ ತಿಳಿಸಿದ್ದಾರೆ.

ಮಸೀದಿಯ ವಿವರವಾದ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ವಾರಾಣಸಿಯ ಜಿಲ್ಲಾ ನ್ಯಾಯಾಲಯ ಶುಕ್ರವಾರ ಪುರಾತತ್ವ ಇಲಾಖೆಗೆ ಸೂಚನೆ ನೀಡಿತ್ತು. ಅಗತ್ಯ ಎದುರಾದರೆ ಉತ್ಖನನ ನಡೆಸುವಂತೆಯೂ ನ್ಯಾಯಾಲಯ ತಿಳಿಸಿದೆ.

ವಿಡಿಯೊ, ಫೋಟೊಗಳ ಸಹಿತ ವಿವರವಾದ ವರದಿಯನ್ನು ಆಗಸ್ಟ್ 4ರ ಒಳಗಾಗಿ ಸಲ್ಲಿಸುವಂತೆ ಜಿಲ್ಲಾ ನ್ಯಾಯಾಲಯವು ಪುರಾತತ್ವ ಇಲಾಖೆಗೆ ತಿಳಿಸಿದೆ.

ಮಸೀದಿಯ 'ವಝುಖಾನಾ'ದಲ್ಲಿ 'ಶಿವಲಿಂಗ'ದಂಥ ರಚನೆ ಇದೆ ಎಂದು ಹೇಳಲಾಗಿದ್ದು, ಆ ಸ್ಥಳದ ಸಂರಕ್ಷಣೆಗೆ ಸುಪ್ರೀಂ ಕೋರ್ಟ್ ಈಗಾಗಲೇ ಆದೇಶಿಸಿದೆ. ಹೀಗಾಗಿ ನಿರ್ದಿಷ್ಟ ಜಾಗದಲ್ಲಿ ಸಮೀಕ್ಷೆ ನಡೆಯುತ್ತಿಲ್ಲ.

'ಪುಟ್ಟರಾಜರ ಹೆಸರಿನಲ್ಲಿ ವಿ.ವಿ ಸ್ಥಾಪಿಸಿ'

ಮೈಸೂರು: 'ಸಂಗೀತಕ್ಕೆ ಅಪಾರ ಕೊಡುಗೆ ನೀಡಿರುವ ಪುಟ್ಟರಾಜು ಗವಾಯಿ ಅವರ ಹೆಸರಿನಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಬೇಕು' ಎಂದು ಕಲಬುರ್ಗಿಯ ಕೇಂದ್ರೀಯ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಡಾ.ಜಯದೇವಿ ಜಂಗಮಶೆಟ್ಟಿ ಹೇಳಿದರು.

ನಗರದ ಗಾನಭಾರತಿಯಲ್ಲಿ ಗುರು ಪುಟ್ಟರಾಜ ಸಂಗೀತ ಸಭಾದಿಂದ ನಡೆದ ಸಂಗೀತ ಕಾರ್ಯಕ್ರಮ ಹಾಗೂ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'ನಮಗೆ ಯಾರ ಹಂಗಿನ ಹಣ ಬೇಡ. ಎಲ್ಲಾ ಜನಾಂಗದವರು ಬಂದು ಮನಸಿನಿಂದ ಕಾಯಕ ಮಾಡುವ ವಿಶ್ವವಿದ್ಯಾಲಯ ಬೇಕು. ಒಂದೇ ಸೂರಿನಲ್ಲಿ, ಸಂಗೀತ, ಗಾಯನ, ನೃತ್ಯ, ತಬಲಾ, ವಾದ್ಯ ಸಿಗಬೇಕು. ಅದಕ್ಕೆ ಎಲ್ಲರೂ ಸೇರಿ ಪ್ರಯತ್ನಿಸಬೇಕು' ಎಂದರು.

ಗಾನಭಾರತಿ ಖಜಾಂಚಿ ಸಿ.ಎಸ್. ಜನಾರ್ಧನ್, ಜಿಎಸ್ಎಸ್ಎಸ್ ಪ್ರಾಂಶುಪಾಲೆ ಎಸ್.ಆರ್.ಹೇಮಲತಾ, ಗುರು ಪುಟ್ಟರಾಜ ಸಂಗೀತ ಸಭಾದ ಅಧ್ಯಕ್ಷ ಭೀಮಾಶಂಕರ್ ಬಿದನೂರ ಇದ್ದರು.

ಚಂದ್ರಶೇಖರ ಕಂಬಾರ ಮೆಚ್ಚುಗೆ • ಲೇಖಕಿಯರ ಸಂಘದಿಂದ 75 ಮಂದಿಗೆ ಪ್ರಶಸ್ತಿ ಪ್ರದಾನ

'ಮಹಿಳೆಯರಿಂದ ಸವಾಲೊಡ್ಡುವ ಸಾಹಿತ್ಯ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಲೋಕದಲ್ಲಿ ಲೇಖಕಿಯರು ತಮ್ಮದೆಯಾದ ಅಸ್ಮಿತೆ ಕಂಡುಕೊಂಡಿದ್ದಾರೆ. ಪುರುಷ ಸಾಹಿತ್ಯಕ್ಕೆ ಸಮಾನವಾಗಿ ನಿಲ್ಲುವ ಹಾಗೂ ಸವಾಲೊಡ್ಡುವ ಸಾಹಿತ್ಯವನ್ನು ಸೃಷ್ಟಿಸುತ್ತಿದ್ದಾರೆ' ಎಂದು ಸಾಹಿತಿ ಚಂದ್ರಶೇಖರ ಕಂಬಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಲೇಖಕಿಯರ ಸಂಘ ನಗರದಲ್ಲಿ ಭಾನುವಾರ ಹಮ್ಮಿಕೊಂಡ 44ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ 75 ಲೇಖಕಿಯರಿಗೆ ದತ್ತಿಪ್ರಶಸ್ತಿಗಳನ್ನುಪ್ರದಾನಮಾಡಿದರು.

'ಕನ್ನಡದ ಹೆಣ್ಣು ಮಕ್ಕಳು ಉತ್ತಮವಾದ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ಪ್ರತ್ಯೇಕ ಬರವಣಿಗೆ ಶೈಲಿಯ ಮೂಲಕ ಛಾಪು ಮೂಡಿಸುತ್ತಿದ್ದಾರೆ. ಪುರುಷರಿಗಿಂತಲೂ ಭಿನ್ನವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಅವರು, ಧೈರ್ಯದಿಂದ ಬರೆಯುತ್ತಿದ್ದಾರೆ. ಇಲ್ಲಿರುವಷ್ಟು ಬರಹಗಾರ್ತಿಯರು ಬೇರೆ ರಾಜ್ಯಗಳಲ್ಲಿ ಇಲ್ಲ. ಕನ್ನಡ ಸಾಹಿತ್ಯದ ಏಳ್ಗೆಯ ವಿಚಾರದಲ್ಲಿ ಇದು ಸಂತಸದ ಸಂಗತಿ' ಎಂದರು.

'ಇಲ್ಲಿನ ಲೇಖಕಿಯರು ಪ್ರತ್ಯೇಕ ಸಂಘ ಸ್ಥಾಪಿಸಿ, ಇತರ ರಾಜ್ಯಗಳಿಗೆ ಮಾದರಿಯಾಗಿದ್ದಾರೆ. ಕರ್ನಾಟಕ ಹೊರತುಪಡಿಸಿದರೆ ಬೇರೆ ಯಾವುದೇ ರಾಜ್ಯದಲ್ಲಿ ಪ್ರತ್ಯೇಕ ಲೇಖಕಿಯರ ಸಂಘವಿಲ್ಲ. ಈ ವಿಚಾರದಲ್ಲಿ ನನಗೆ ಹೆಮ್ಮೆಯಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕಿ ರಾಣಿ ಸತೀಶ್, 'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶಾಶ್ವತ ಸಂಘ-ಸಂಸ್ಥೆಗಳಿಗೆ ವಾರ್ಷಿಕ ಅನುದಾನವನ್ನು ನಿಯಮಿತವಾಗಿ ನೀಡಬೇಕು. ಲೇಖಕಿಯರ ಸಂಘಕ್ಕೆ ಅನುದಾನ ಒದಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿಮಾಡಲಾಗುವುದು. ಸಮಾಜ ಸುಧಾರಿಸುವ ಶಕ್ತಿ ಸಾಹಿತ್ಯಕ್ಕಿದೆ. ಸಾಹಿತ್ಯದಿಂದ ಆದಾಯ, ಸಂಪತ್ತು ಬರುವುದಿಲ್ಲ. ಆದರೆ, ಸಾಹಿತ್ಯ, ಸಾಹಿತಿಗಳೇ ನಾಡಿನ ಸಂಪತ್ತು' ಎಂದರು.

ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ, 'ಮಹಿಳೆಯರ ಮೇಲಿನ ಹಲ್ಲೆಗಳಿಗೆ ಕೊನೆಯಿಲ್ಲವಾಗಿದೆ. ಒಂದು ಘಟನೆ ಅಂತ್ಯಕಾಣುವ ವೇಳೆಗೆ ಮತ್ತೊಂದು ಘಟನೆ ಘಟಿಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಮಹಿಳಾ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಮಣಿಪುರದಲ್ಲಿ ನಡೆದ ಪ್ರಕರಣ ಖಂಡನೀಯ' ಎಂದು ಹೇಳಿದರು.



ಬೆಂಗಳೂರಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಲೇಖಕಿಯರಾದ ಮಮ್ತಾಜ್ ಬೇಗಂ, ರಂಗಮ್ಮ ಹೊದೇಕಲ್ಲು, ಮಾಧವಿ ಭಂಡಾರಿ, ನಾಗರೇಖಾ ಗಾಂವ್ಕರ್, ಮಾಲತಿ ಮುದಕವಿ, ಎಚ್.ಎಸ್. ಪ್ರೇಮಾ, ಎಸ್. ಸುಧಾ ಹಾಗೂ ಸುಕನ್ಯಾ ಸೂನಗಳ್ಳಿ ಅವರು ದತ್ತಿ ಪ್ರಶಸ್ತಿಗಳನ್ನು ಸ್ವೀಕರಿಸಿದರು. ಎಚ್.ಎಲ್. ಪುಷ್ಪ, ಚಂದ್ರಶೇಖರ ಕಂಬಾರ, ರಾಣಿ ಸತೀಶ್, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ವಿಮರ್ಶಕಿ ಎಂ.ಎಸ್. ಆಶಾದೇವಿ, ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ, ಸಹ ಕಾರ್ಯದರ್ಶಿ ಮಂಜುಳಾ ಬಿ.ವಿ. ಹಾಗೂ ಪದಾಧಿಕಾರಿಗಳು ಇದ್ದರು —ಪ್ರಜಾವಾಣಿ ಚಿತ್ರ

ಬರಗೂರು ರಾಮಚಂದ್ರಪ್ಪ ಅವರ 'ಕಾಗೆ ಕಾರುಣ್ಯದ ಕಣ್ಣು' ಕೃತಿ ಬಿಡುಗಡೆ

ಪ್ರಜಾಪ್ರಭುತ್ವ ಸ್ವೇಚ್ಛಾಚಾರಕ್ಕೆ ತಿರುಗಿದೆ: ಜಿ. ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದಿನವರು ನಮಗೆ ಬಂಗಾರದ ತಟ್ಟೆಯಲ್ಲಿ ಪ್ರಜಾಪ್ರಭುತ್ವವನ್ನು ಹಾಕಿಕೊಟ್ಟಿದ್ದರು. ಆದರೆ, ಈಗ ಪ್ರಜಾಪ್ರಭುತ್ವ ಸ್ವೇಚ್ಛಾಚಾರಕ್ಕೆ ತಿರುಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಬೇಸರ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ ಅವರ ಆಯ್ದ ಅನುಭವ ಕಥನ 'ಕಾಗೆ ಕಾರುಣ್ಯದ ಕಣ್ಣು' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

'ಚೀನಾ, ರಷ್ಯಾದಂತಹ ರಾಷ್ಟ್ರಗಳಿಗೆ ತೆರಳಿದರೆ ಪ್ರಜಾಪ್ರಭುತ್ವದ ನಿಜವಾದ ಬೆಲೆ ತಿಳಿಯುತ್ತದೆ. ಪ್ರಜಾಪ್ರಭುತ್ವ ಸ್ವೇಚ್ಛಾಚಾರ ಆಗಬಾರದು. ಅದು ಸ್ವೇಚ್ಛಾಚಾರವಾದಲ್ಲಿ ದೇಶ ಅವನತಿಯತ್ತ ಸಾಗಲಿದೆ' ಎಂದು ಹೇಳಿದರು.

'ಕಾಗೆಗಿರುವಂತಹ ಭಾವನೆ, ಹಂಚಿಕೊಂಡು ತಿನ್ನುವ ಬಳಗ-ಬಂಧುತ್ವ ಬಹಳ ಜನರಿಗಿಲ್ಲ. ಕೋಗಿಲೆ ಮೊಟ್ಟೆಯಿಟ್ಟಾಗ ಕಾಗೆ ಅದಕ್ಕೆ ಕಾವು ನೀಡಿ, ಮರಿಮಾಡುತ್ತದೆ. ಅದಕ್ಕಿರುವ ಹೃದಯ ಶ್ರೀಮಂತಿಕೆ ಮನುಷ್ಯರಲ್ಲಿ ಕಾಣ ಸಿಗುವುದಿಲ್ಲ. ಯಾರದ್ದೋ ಮಕ್ಕಳನ್ನು ಸಾಕಲು ನಾವು ಸಿದ್ಧರಿರುವುದಿಲ್ಲ. ಕಾಗೆಯ ವ್ಯಕ್ತಿತ್ವವನ್ನು ಇಡೀ ಸಮಾಜಕ್ಕೆ ತಿಳಿಸುವ ಪ್ರಯತ್ನವನ್ನು ಬರಗೂರು ರಾಮಚಂದ್ರಪ್ಪ ಮಾಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಕಾಗೆಯ ಸೌಹಾರ್ದ, ಬಳಗ ಪ್ರಜ್ಞೆ ಇವತ್ತು ದೇಶಕ್ಕೆ ಬೇಕಾಗಿದೆ. ಮಣಿಪುರ ನೋಡಿದರೆ ದೇಶ ಏನಾಗಿದೆ ಅನಿಸುತ್ತದೆ. ಕಾಗೆಯ ಪ್ರಜ್ಞೆ ಇರುವವರಾದರೆ ಅಂತಹ ಘಟನೆಯನ್ನು ಖಂಡಿಸಿ, ಶಾಂತಿ ಸ್ಥಾಪನೆಗೆ ಬೇಕಾದ ಕೆಲಸ ಮಾಡುತ್ತಿದ್ದರು. ಈ ದೇಶದಲ್ಲಿ ನಂಜುನಾಲಿಗೆ, ನುಡಿಕೋರರು ಹೆಚ್ಚಾಗಿದ್ದಾರೆ. ಭಾಷಿಕ ಹಲ್ಲೆ ಮೂಲಕ ಹಿಂಸೆ ನಡೆಯುತ್ತಿದೆ. ಭಾಷಿಕ ಹಿಂಸೆ ಮತ್ತು ದೈಹಿಕ ಹಿಂಸೆ ಮುನ್ನೆಲೆಗೆ ಬಂದಿದೆ. ದ್ವೇಷದ ದ್ವೀಪ ಹೆಚ್ಚಾಗುತ್ತಿದ್ದು, ದೀಪದ ದಾರಿ ಕಡಿಮೆಯಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, 'ಪಠ್ಯ ಪುಸ್ತಕಗಳು ಪಕ್ಷದ ಪುಸ್ತಕಗಳಾಗಬಾರದು, ಅವುಗಳೇನಿದ್ದರೂ ಪಠ್ಯದ ಪುಸ್ತಕಗಳಾಗೇ ಇರಬೇಕು ಎಂಬುದು ಬರಗೂರು ಅವರ ನಿಲುವಾಗಿತ್ತು. ಇದನ್ನು ಅವರು ಬಹುವಾಗಿ ಸಮರ್ಥಿಸಿದ್ದರು' ಎಂದು ಸ್ಮರಿಸಿಕೊಂಡರು.



ಕಾರ್ಯಕ್ರಮದಲ್ಲಿ ಜಿ. ಪರಮೇಶ್ವರ ಅವರು ಬಿಡುಗಡೆ ಮಾಡಿದ 'ಕಾಗೆ ಕಾರುಣ್ಯದ ಕಣ್ಣು' ಕೃತಿಯ ಪ್ರತಿಯನ್ನು ವಿಮರ್ಶಕ ಕೆ.ವಿ. ನಾರಾಯಣ ಅವರಿಗೆ ಹಸ್ತಾಂತರಿಸಿದರು. ಡಾ. ಸಿ.ಎನ್. ಮಂಜುನಾಥ ಹಾಗೂ ಬರಗೂರು ರಾಮಚಂದ್ರಪ್ಪ ಇದ್ದಾರೆ —ಪ್ರಜಾವಾಣಿ ಚಿತ್ರ

ಚಿತ್ರಾವಳಿ



ಸಂಗೀತ ಕಲಾ ಕುಟೀರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೀತಾ ಹೆಬ್ಳೀಕರ್ ಅವರು ಭಾನುವಾರ ಹಿಂದೂಸ್ಥಾನಿ ಸಂಗೀತವನ್ನು ಪ್ರಸ್ತುತ ಪಡಿಸಿದರು. ಹಾರ್ಮೋನಿಯಂನಲ್ಲಿ ಶಿವಕುಮಾರ್ ಮಹಾಂತ, ತಬಲಾದಲ್ಲಿ ಪ್ರಜ್ವಲ್ ಶರ್ಮ ಸಾಥ್ ನೀಡಿದರು.



ನಗರದ ಕಲಾಗ್ರಾಮದಲ್ಲಿ ಅಶೋಕ್ ಭಟ್ ಮತ್ತು ಪ್ರೀತಿ ಅಶೋಕ್ ಅವರು ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಭಾವ ಮಾಧುರ್ಯ' ಸಂಗೀತ ಆಲ್ಬಂ ಅನ್ನು ಗಾಯಕ ವಿಜಯ ಹಾವನೂರು ಲೋಕಾರ್ಪಣೆ ಮಾಡಿದರು. ಗಾಯಕ ಆರ್.ಎಸ್. ಗಣೇಶ್ ನಾರಾಯಣನ್, ಕಲಾವಿದ ಗಣಪತಿ ಎಸ್. ಹೆಗಡೆ, ಗಾಯಕ ಗಣೇಶ್ ದೇಸಾಯಿ ಇದ್ದಾರೆ.

ಸುಪ್ರೀಂ ಕೋರ್ಟ್ ವಕೀಲ ಅಶ್ವಿನಿ ಉಪಾಧ್ಯಾಯ

'ಯುಸಿಸಿ: ಮುಸ್ಲಿಮರಿಗೆ ಹೆಚ್ಚು ಲಾಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸಿದರೆ ಹಿಂದೂ, ಕ್ರೈಸ್ತ ಸಮುದಾಯಕ್ಕಿಂತ ಮುಸ್ಲಿಮರಿಗೆ ಹೆಚ್ಚು ಅನುಕೂಲವಾಗಲಿದೆ' ಎಂದು ಸುಪ್ರೀಂ ಕೋರ್ಟ್ ವಕೀಲ ಅಶ್ವಿನಿ ಉಪಾಧ್ಯಾಯ ಅವರು ಹೇಳಿದರು.

ಸ್ಪಂದನ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ಏಕರೂಪ ನಾಗರಿಕ (ಯುಸಿಸಿ) ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, 'ಯುಸಿಸಿ ಬಗ್ಗೆ ಪರ ಮತ್ತು ವಿರೋಧ ವ್ಯಕ್ತಪಡಿಸುತ್ತಿರುವ ಹಲವರಿಗೆ ಸಮರ್ಪಕ ಮಾಹಿತಿ ಇಲ್ಲ. ಈ ಸಂಹಿತೆ ಜಾರಿಯಾದರೆ ಹಿಂದೂಗಳು ಸೇರಿ ಎಲ್ಲರ ಮದುವೆ ನೋಂದಣಿ ಕಡ್ಡಾಯವಾಗಲಿದೆ. ಪಾರ್ಸಿ ಸಮುದಾಯದ ಮಹಿಳೆಯರು ಅನ್ಯ ಧರ್ಮಿಯರೊಂದಿಗೆ ಮದುವೆಯಾದರೂ ಸಹ ಆಸ್ತಿ ಹಕ್ಕು ದೊರೆಯಲಿದೆ. ಜತೆಗೆ ಮುಸ್ಲಿಂ ಮಹಿಳೆಯರಿಗೆ ಈ ಎಲ್ಲ ಹಕ್ಕುಗಳ ಜತೆಗೆ ಹೆಚ್ಚು ಪ್ರಯೋಜನವಾಗಲಿದೆ' ಎಂದು ಪ್ರತಿಪಾದಿಸಿದರು.

'ಭಾರತದ ನಾಗರಿಕತ್ವ ಪಡೆದುಕೊಳ್ಳಲು ಸ್ಪಷ್ಟ ವ್ಯಾಖ್ಯಾನ ರೂಪಿಸಬೇಕು. ಮತದಾನದ ಹಕ್ಕು ಪಡೆಯಬೇಕಾದರೆ ಸಂವಿಧಾನ ನಿಷ್ಠೆ ಪ್ರದರ್ಶಿಸುವ ಅರ್ಜಿ ತುಂಬಬೇಕು. ದೇಶದಲ್ಲಿ ಧರ್ಮದ ವಿಜಯವಾಗಬೇಕಾದರೆ ಕೇಂದ್ರ ಸರ್ಕಾರ ಏಕರೂಪ ನಾಗರಿಕ ಸಂಹಿತೆ, ಏಕಧರ್ಮ ಸಂಹಿತೆ, ಸಮಾನ ಜನಸಂಖ್ಯೆ ಸಂಹಿತೆ ಎಂಬ ಮೂರು ಕಾನೂನುಗಳನ್ನು ಜಾರಿಗೊಳಿಸಬೇಕು' ಎಂದು ಸಲಹೆ ನೀಡಿದರು.

'ಯುಸಿಸಿ ಜಾರಿಯಾದರೆ ಆಹಾರ ಪದ್ಧತಿ, ಉಡುಗೆ ತೊಡುಗೆ, ಭಾಷೆ, ಆಚಾರ ವಿಚಾರಗಳಿಗೆ ವೈವಿಧ್ಯಕ್ಕೆ ಧಕ್ಕೆ ಆಗುವುದಿಲ್ಲ. ವಿವಾಹ ಯೋಗ್ಯ ವಯಸ್ಸು, ಆಸ್ತಿ ಹಕ್ಕು, ವಿಚ್ಛೇದನ ಪ್ರಕ್ರಿಯೆ, ದತ್ತು ಅಧಿಕಾರ, ಪೋಷಕರ ರಕ್ಷಣೆ ಹಕ್ಕುಗಳು ಸಿಗುತ್ತವೆ' ಎಂದರು.

ಮಿಥಿಕ್ ಸೊಸೈಟಿಯ ಕಾರ್ಯದರ್ಶಿ ವಿ. ನಾಗರಾಜ್ ಮಾತನಾಡಿ, 'ಡಾ.ಬಿ.ಆರ್. ಅಂಬೇಡ್ಕರ್ ಸೇರಿದಂತೆ ಸಂವಿಧಾನ ರಚನಾ ಸಮಿತಿಯಲ್ಲಿದ್ದ ಹಲವರಿಗೆ ಯುಸಿಸಿ ಜಾರಿಗೊಳಿಸಬೇಕೆಂಬ ಆಶಯವಿತ್ತು. ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ಇದನ್ನು ಜಾರಿಗೊಳಿಸಬೇಕೆಂಬ ಆಸೆ ಇತ್ತು. ಆದರೆ, ಮತ ಬ್ಯಾಂಕ್‌ಗೆ ಹೆದರಿಕೊಂಡು ಯುಸಿಸಿಯನ್ನು ಜಾರಿಗೊಳಿಸಲಿಲ್ಲ. ಈ ಸಂಹಿತೆಗೆ ಯಾವುದೇ ಧಾರ್ಮಿಕ ಆಯಾಮಗಳಿಲ್ಲ' ಎಂದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್, 'ಯುಸಿಸಿ ಸಂವಿಧಾನದ 44ರ ಪರಿಚ್ಛೇದದಲ್ಲಿ ಉಲ್ಲೇಖಿಸಲಾಗಿದೆ. ಯುಸಿಸಿ ರೂಪಿಸಲು ಸರ್ಕಾರ ಪ್ರಯತ್ನ ಮಾಡುವುದನ್ನು ಸಂವಿಧಾನವೇ ಕಡ್ಡಾಯಗೊಳಿಸಿದೆ. ಮೂಲಭೂತ ಹಕ್ಕುಗಳು ಸಂವಿಧಾನದ ಮೂರನೇ ಭಾಗದಲ್ಲಿದ್ದರೆ, ಯುಸಿಸಿ ವಿಚಾರ ಸಂವಿಧಾನದ ನಿರ್ದೇಶನ ತತ್ವಗಳನ್ನು ಪ್ರತಿಪಾದಿಸುವ ನಾಲ್ಕನೇ ಭಾಗದಲ್ಲಿದೆ' ಎಂದು ಹೇಳಿದರು.



ನಗರದಲ್ಲಿ ಭಾನುವಾರ ನಡೆದ ಯುಸಿಸಿ ಕುರಿತ ವಿಚಾರಸಂಕಿರಣದಲ್ಲಿ ಮಿಥಿಕ್ ಸೊಸೈಟಿಯ ಕಾರ್ಯದರ್ಶಿ ವಿ. ನಾಗರಾಜ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್, ಸುಪ್ರೀಂ ಕೋರ್ಟ್ ವಕೀಲ ಅಶ್ವಿನಿ ಉಪಾಧ್ಯಾಯ ಇದ್ದಾರೆ —ಪ್ರಜಾವಾಣಿ ಚಿತ್ರ



ಬಹುಜನ ಸ್ವಾಭಿಮಾನಿ ದಿನಾಚರಣೆ ಕಾರ್ಯಕ್ರಮದಲ್ಲಿ ದಲಿತ ವಿಮೋಚನ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಮಾ. ಮುನಿರಾಜ್, ಮುಖಂಡರಾದ ಹರಿರಾಮ್, ಎಚ್. ಗೋವಿಂದಯ್ಯ ಅವರು ಪ್ರೊ.ಬಿ. ಕೃಷ್ಣಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

'ಭೂ ಹಂಚಿಕೆಯಿಂದ ಮೇಲ್ಜಾತಿಗೆ ಶಕ್ತಿ'

ಬೆಂಗಳೂರು: 'ದಲಿತ ಸಮುದಾಯದಲ್ಲಿ ಭೂಮಿ ಶೇ 6ರಷ್ಟು ಇದ್ದರೆ, ಶೇ 78 ಭಾಗ ಮೇಲ್ಜಾತಿ ಕೈಯಲ್ಲಿದೆ. ಇದು ರಾಜಕೀಯ ಶಕ್ತಿಯನ್ನು ಅವರಿಗೆ ತಂದುಕೊಟ್ಟಿದೆ' ಎಂದು ವಕೀಲ ಹರಿರಾಮ್ ತಿಳಿಸಿದರು.

ದಲಿತ ವಿಮೋಚನಾ ಸೇನೆ ವತಿಯಿಂದ ಪ್ರೊ.ಬಿ. ಕೃಷ್ಣಪ್ಪ ಅವರ 85ನೇ ಜಯಂತ್ಯುತ್ಸವದ ಅಂಗವಾಗಿ ನಡೆದ ಬಹುಜನ ಸ್ವಾಭಿಮಾನ ದಿನಾಚರಣೆ ಮತ್ತು ಮಾಳವ ನಾರಾಯಣ ಅವರು ರಚಿಸಿರುವ 'ಕರ್ನಾಟಕದ ಅಂಬೇಡ್ಕರ್ ಪ್ರೊ.ಬಿ. ಕೃಷ್ಣಪ್ಪ' ಕೃತಿ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಿವೃತ್ತ ಪ್ರಾಧ್ಯಾಪಕ ಎಚ್. ಗೋವಿಂದಯ್ಯ ಮಾತನಾಡಿ, 12 ಶತಮಾನದ ವಚನ ಚಳವಳಿ ನಂತರ ಕನ್ನಡ ನೆಲದಲ್ಲಿ ಎಲ್ಲರನ್ನು ಮುಟ್ಟುವ ಚಳವಳಿ ನಡೆದಿದ್ದೇ ಬಿ. ಕೃಷ್ಣಪ್ಪ ಅವರ ನೇತೃತ್ವದಲ್ಲಿ ನಡೆದ ದಲಿತ ಸಂಘರ್ಷ ಸಮಿತಿಯ ಚಳವಳಿ' ಎಂದು ಬಣ್ಣಿಸಿದರು.

ಕೃತಿ ಪರಿಚಯ ಮಾಡಿದ ಕವಿ ವಡ್ಡಗೆರೆ ನಾಗರಾಜಯ್ಯ, 'ಬಂಧುತ್ವ ನಾಶವಾಗಿದ್ದರಿಂದಲೇ ಹಿಂದುತ್ವ ಬೆಳೆದಿದೆ. ದಲಿತತ್ವದಿಂದ ಮತ್ತೆ ಬಂಧುತ್ವ ಕಟ್ಟಬೇಕು' ಎಂದು ತಿಳಿಸಿದರು.

ಪ್ರಜಾವಾಣಿ ಸೋಮವಾರ, 24 ಜುಲೈ 2023

ಶಿಕ್ಷಣ



> ತರಗತಿಯಲ್ಲಿ ಪಾಠ ಕೇಳುವ ವಿದ್ಯಾರ್ಥಿಗಳು ಧ್ಯಾನದಂತೆ ಸುಮ್ಮನೆ ಕೂತು ಎದ್ದು ಹೋದರೆ ಆಗುವುದಿಲ್ಲ. ಶಿಕ್ಷಕರು ಹೇಳಿದ ಪ್ರಮುಖ ಅಂಶಗಳನ್ನು ಟಿಪ್ಪಣಿ ಮಾಡಿಟ್ಟುಕೊಂಡಿದ್ದರೆ ನೆನಪಿಟ್ಟುಕೊಳ್ಳಲು ಸುಲಭವಾಗುತ್ತದೆ.

ಕಲಿಯುವವರ ಕೈ ಹಿಡಿಯುವ ಟಿಪ್ಪಣಿ

ಸದಾಶಿವ್ ಸೊರಟೂರು

ಕಲಿಯುವವರು ಮತ್ತು ಕಲಿಸುವವರ ನಡುವಿನ ಪ್ರಕ್ರಿಯೆ ಕಲಿಕೆ. ಅವರಿಬ್ಬರ ನಡುವೆ ಪಠ್ಯ ಎಂಬುದಿರುತ್ತದೆ. ಅದು ಏನು ಬೋಧಿಸಬೇಕು ಎಂಬುದನ್ನು ಹೇಳುತ್ತದೆಯಾದರೂ ಅವರಿಬ್ಬರೂ ಅದಕ್ಕಷ್ಟೇ ಸೀಮಿತವಾಗಿರುವುದು ಒಂದು ಒಳ್ಳೆಯ ಶಿಕ್ಷಣದ ಲಕ್ಷಣವಲ್ಲ. ಪಠ್ಯವಷ್ಟೇ ಅಂತಿಮವೆಂಬುದಿಲ್ಲ.

ಪಠ್ಯದಲ್ಲಿರುವುದನ್ನಷ್ಟೇ ಓದಿಕೊಂಡರೆ ಕಲಿಕೆ ಹೇಗೆ ಪರಿಣಾಮಕಾರಿಯಾಗಲು ಸಾಧ್ಯ? ಒಂದು ಅವಧಿಯಷ್ಟು ಬೋಧಿಸಲು ಶಿಕ್ಷಕರೊಬ್ಬರು ಹಲವು ಗಂಟೆಗಳ ಕಾಲ ತಯಾರಿ ನಡೆಸುತ್ತಾರೆ. ಹೊಸ ಹೊಸ ಮಾಹಿತಿ ಕಲೆ ಹಾಕುತ್ತಾರೆ. ಪಠ್ಯಕ್ಕಿಂತ ಹೆಚ್ಚು ಹೇಳುತ್ತಾರೆ. ಹೆಚ್ಚು ಹೆಚ್ಚು ಕಲಿಸುವ ಹಂಬಲವುಳ್ಳವರಾಗಿರುತ್ತಾರೆ. ಉದಾಹರಣೆ ಕೊಡುತ್ತಾರೆ. ವಿವರಿಸುತ್ತಾರೆ. ದೃಕ್ ಶ್ರವಣ ಮಾಧ್ಯಮ ಬಳಸುತ್ತಾರೆ. ಸಂಬಂಧಿಸಿದ ವಿಷಯವನ್ನು ಸಾಕಷ್ಟು ಪೂರ್ಣ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ತಲುಪಿಸಲು ಪ್ರಯತ್ನಿಸುತ್ತಾರೆ.

ಪಾಠ ಕೇಳುವ ವಿದ್ಯಾರ್ಥಿಗಳು ಧ್ಯಾನದಂತೆ ಸುಮ್ಮನೆ ಕೂತು ಎದ್ದು ಹೋದರೆ ಅದು ಪಠ್ಯ ಮೀರಿ ಹೇಗೆ ಹೆಚ್ಚಿನದನ್ನು ಕಲಿಯುತ್ತಾರೆ? ತರಗತಿಯಲ್ಲಿ ಶಿಕ್ಷಕರು ಹೇಳುವ ಅನೇಕ ವಿಷಯಗಳು 'ಇದೇನು ಬಿಡು ನೆನಪಿರುತ್ತದೆ' ಅಂತ ಅನಿಸಿಬಿಡುತ್ತದೆ. ಆದರೆ ಮನೆಗೆ ಹೋದಾಗ ಮರೆತು ಹೋಗುತ್ತದೆ. ಎರಡು ದಿನ ಕಳೆದರಂತೂ ಅದರ ನೆನಪೇ ಇರುವುದಿಲ್ಲ. ತರಗತಿಯಲ್ಲಿ ಪಾಠ ಕೇಳುವಾಗ ಶಿಕ್ಷಕರು ಹೇಳಿದ ಪ್ರಮುಖ ಅಂಶಗಳನ್ನು ಬರೆದಿಟ್ಟುಕೊಂಡಿದ್ದರೆ ಎಷ್ಟೊಂದು ಅನುಕೂಲವಾಗುತ್ತಿತ್ತು ಅನಿಸುತ್ತದೆ ಅಲ್ಲವಾ ? ಹೌದು ಎನಿಸಿದರೆ ನೀವು ಇನ್ನೇಲೆ ತರಗತಿಯಲ್ಲಿ ಟಿಪ್ಪಣಿ ಮಾಡಿಟ್ಟುಕೊಳ್ಳುವ ಬಗ್ಗೆ ಯೋಜಿಸಬಹುದು.

ಟಿಪ್ಪಣಿಯಿಂದೇನು ಲಾಭ?

ತರಗತಿ ಮುಗಿಸಿ ಮನೆಗೆ ಬಂದ ನಂತರ ವಿಷಯವನ್ನು ಪರಿಶೀಲಿಸಲು ಮತ್ತು ಅದರ ಕುರಿತು ಹೆಚ್ಚು ಅಧ್ಯಯನ ಮಾಡಲು ತರಗತಿಯಲ್ಲಿ ಬರೆದುಕೊಂಡ ಟಿಪ್ಪಣಿಗಳು ನೆರವಾಗುತ್ತವೆ. ತರಗತಿಯಲ್ಲಿ ಕೇಳಿದ ಪಾಠಗಳು ಮನೆಯಲ್ಲಿ ಒಮ್ಮೆ ಪುನರಾವರ್ತನೆಯಾದಂತೆ ಆಗುತ್ತದೆ. ಇದರಿಂದ ಕಲಿಕೆ ಇನ್ನಷ್ಟು ದೃಢಗೊಳ್ಳುತ್ತದೆ. ಕಿರುಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಗೆ ಸಮರ್ಥವಾಗಿ ತಯಾರಿ ಮಾಡಿಕೊಳ್ಳಲು ಅನುಕೂಲವಾಗುತ್ತದೆ.


ಸಾಂದರ್ಭಿಕ ಚಿತ್ರ

ಟಿಪ್ಪಣಿ ಮಾಡಿಕೊಳ್ಳಬೇಕಾದಾಗ ಗಮನಿಸಬೇಕಾದ ಅಂಶಗಳು...

- ಬರೆದುಕೊಳ್ಳುವ ಗಡಿಬಿಡಿಯಲ್ಲಿ ಶಿಕ್ಷಕರ ಬೋಧನೆಯ ಕೆಲವು ಅಂಶಗಳು ತಪ್ಪಿ ಹೋಗಬಹುದು ಆ ಬಗ್ಗೆ ಗಮನವಿರಲಿ
- ಮುಖ್ಯ ಅಂಶವನ್ನು ಅತ್ಯಂತ ಚುಟುಕಾಗಿ ಬರೆದುಕೊಳ್ಳುವ ಅಭ್ಯಾಸ ರೂಢಿಸಿಕೊಳ್ಳಿ. ಪದಗುಚ್ಛ, ಚಿಹ್ನೆ, ಸೂತ್ರ ಇವುಗಳನ್ನು ಬಳಸಿಕೊಳ್ಳಿ
- ನೋಟ್ ಮಾಡಿಕೊಂಡಿದ್ದನ್ನು 24 ಗಂಟೆಯಲ್ಲೇ ಅದನ್ನು ಮನೆಯಲ್ಲಿ ವಿವರವಾಗಿ ಬರೆದಿಟ್ಟುಕೊಳ್ಳಿ.
- ಯಾವುದೇ ಗೊಂದಲ ಉಳಿಸಿಕೊಂಡು ಮನೆಗೆ ಬರಬೇಡಿ, ಶಿಕ್ಷರನ್ನು ಕೇಳಿ ಬಗೆಹರಿಸಿಕೊಳ್ಳಿ.
- ಮನೆಯಲ್ಲಿ ಟಿಪ್ಪಣಿ ನಿರ್ವಹಿಸುವಾಗ ಅಗತ್ಯಬಿದ್ದರೆ ಗೆಳೆಯರ ನೆರವು ಪಡೆಯಿರಿ.
- ಬರೆದುಕೊಂಡ ಟಿಪ್ಪಣಿಯೇ ಅಂತಿಮವಲ್ಲ; ಕಲಿಕೆಗೆ ಪೂರಕವಾಗಿ ಬಳಸಿಕೊಳ್ಳಿ
- ಬೇರೆ ಯಾರದೊ ಟಿಪ್ಪಣಿಯನ್ನು ಅನುಕರಿಸಬಾರದು. ಅವರವರೇ ಟಿಪ್ಪಣಿ ಮಾಡಿಕೊಳ್ಳುವುದು ಸೂಕ್ತ
- ಟಿಪ್ಪಣಿ ಆಧರಿಸಿ ವಿವರವಾಗಿ ಬರೆದಿಟ್ಟುಕೊಂಡ ಮೇಲೆಯೂ ಆ ಟಿಪ್ಪಣಿಗಳನ್ನು ಉಳಿಸಿಕೊಳ್ಳಿ.

ತರಗತಿಯಲ್ಲೇಕೆ ಟಿಪ್ಪಣಿ ತೆಗೆದುಕೊಳ್ಳಬೇಕು?

ತರಗತಿಯಲ್ಲಿ ಉತ್ತಮ ಟಿಪ್ಪಣಿಗಳನ್ನು ತೆಗೆದುಕೊಳ್ಳುವುದು ಕಲಿಕಾ ಪ್ರಕ್ರಿಯೆಯ ಒಂದು ಭಾಗ. ಆ ಮೂಲಕ ಶೈಕ್ಷಣಿಕ ಯಶಸ್ಸನ್ನು ವಿದ್ಯಾರ್ಥಿ ಸಾಧಿಸಲು ಅನುಕೂಲವಾಗುತ್ತದೆ. ಪಾಠ ಮಾಡುವಾಗ ಸಕ್ರಿಯವಾಗಿ ಟಿಪ್ಪಣಿಗಳನ್ನು ತೆಗೆದುಕೊಳ್ಳುವುದರಿಂದ ಮುಖ್ಯ ಪರಿಕಲ್ಪನೆಗಳ ಕಡೆ ಗಮನ ಕೇಂದ್ರೀಕರಿಸಲು ಮತ್ತು ವಿಷಯವನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡುತ್ತದೆ. ಟಿಪ್ಪಣಿ ಬರೆದುಕೊಳ್ಳುವುದು ವಿದ್ಯಾರ್ಥಿಯ ಗಮನ ಕೇಂದ್ರಿಕರಿಸುವಂತೆ ಮಾಡುತ್ತದೆ. ಒಂದು ಉತ್ತಮ ಟಿಪ್ಪಣಿ ಬರೆದುಕೊಳ್ಳುವಿಕೆ ನಿಮ್ಮ ಆಲಿಸುವಿಕೆ, ವಸ್ತುಗಳ ಗ್ರಹಿಕೆ ಮತ್ತು ಧಾರಣೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಇದೆಲ್ಲವೂ ನಿಮ್ಮ ನೆನಪಿನ ಶಕ್ತಿ ಹೆಚ್ಚಿಸಲು ಸಹಾಯವಾಗುತ್ತದೆ.

ನಿಖರವಾಗಿ, ಸ್ಪಷ್ಟವಾಗಿ ಮತ್ತು ಸಂಕ್ಷಿಪ್ತವಾಗಿ ಬರೆದಿಟ್ಟುಕೊಂಡ ಟಿಪ್ಪಣಿಗಳು ನಿಮ್ಮ ಸಮಯ, ಶಕ್ತಿ ಉಳಿಸಬಹುದು. ಗೊಂದಲ ತೊಲಗಿಸಬಹುದು ಮತ್ತು ಮಾಡಿಕೊಂಡ ಟಿಪ್ಪಣಿಗಳನ್ನು ಮುಂದಿಟ್ಟುಕೊಂಡು ವಿವರವಾಗಿ ಮಾಹಿತಿ ಬರೆದಿಟ್ಟುಕೊಳ್ಳಬಹುದು. ಅಧ್ಯಯನಕ್ಕೆ ಬಳಸಿಕೊಳ್ಳಬಹುದು. ತರಗತಿ ಬೋಧನೆಯನ್ನು ಮತ್ತೆ ಮತ್ತೆ ಪುನರಾವರ್ತಿಸಿಕೊಳ್ಳಲು ಇದು ಸಹಾಯವಾಗುತ್ತದೆ.


ಒಂದು ಉತ್ತಮ ಟಿಪ್ಪಣಿ ಹೇಗಿರಬೇಕು?

ವಿವರವಾಗಿ ಬರೆದುಕೊಳ್ಳದೆ ಕೇವಲ ಮುಖ್ಯ ವಿಷಯವನ್ನು ಬರೆದುಕೊಳ್ಳಬೇಕು. ಪಠ್ಯಕ್ಕೆ ಯಾವುದು ಪೂರಕವೊ ಅದನ್ನು ಮಾತ್ರ ಬರೆದುಕೊಳ್ಳಿ. ಅದು ಸ್ಪಷ್ಟವಾಗಿರಬೇಕು. ಸುಮ್ಮನೆ ಗೀಚಿಕೊಂಡು ಹೋಗಬಾರದು. ಗೊಂದಲ ಬರುವಂತೆ ಬರೆದುಕೊಳ್ಳುವುದು ವ್ಯರ್ಥ. ತರಗತಿಗೆ ಮತ್ತು ವಿಷಯಕ್ಕೆ ಪ್ರತ್ಯೇಕವಾದ ನೋಟ್ ಪುಸ್ತಕ ಬಳಸುವುದು ಒಳ್ಳೆಯದು. ಅದಕ್ಕೆ ಸಂಬಂಧಿಸಿದಂತೆ ಯಾವಾಗಲೂ ಒಂದು ನಿಗದಿತ ಪುಸ್ತಕವನ್ನೇ ಬಳಸಿ. ದಿನಾಂಕ ಮತ್ತು ಸಮಯವನ್ನು ನಮೂದಿಸಿಕೊಳ್ಳುವುದು ಒಳ್ಳೆಯದು. ಹೇಳಿದ್ದೆಲ್ಲವನ್ನು ಬರೆದುಕೊಳ್ಳಬಾರದು.

ಟಿಪ್ಪಣಿಗಳಿಗೆ ವಿವಿಧ ಸ್ವರೂಪಗಳು

ನಾವು ಅನೇಕ ಶೈಲಿಗಳಲ್ಲಿ ಟಿಪ್ಪಣಿಗಳನ್ನು ಬರೆದುಕೊಳ್ಳಬಹುದು. ಆದರೆ ನಿಮಗೆ ಹೇಗೆ ಅನುಕೂಲವೊ ಹಾಗೆ ಬರೆದಿಟ್ಟುಕೊಳ್ಳುವುದು ಒಳ್ಳೆಯದು. ದಿನಾಂಕ, ಅಗತ್ಯ ಪ್ರಶ್ನೆ, ವಿಷಯ, ಸಾರಾಂಶವನ್ನು ಬರೆದು ಕೊಳ್ಳಲು ಕಾರ್ನೆಲ್ ಶೈಲಿ(ಪುಟ್ಟ ಕಾಲಂಗಳನ್ನು ಬರೆದುಕೊಂಡು ನೋಟ್ಸ್ ಮಾಡಿಕೊಳ್ಳುವುದು)ಒಳ್ಳೆಯದು. ಕೆಲವೊಂದಕ್ಕೆ ಔಟ್ ಲೈನ್ ಸೂಕ್ತವಾಗುತ್ತದೆ. ಫ್ಲೋಚಾರ್ಟ್/ಕಾನ್ಸೆಪ್ಟ್ ಮ್ಯಾಪ್/ ಮೈಂಡ್ ಮ್ಯಾಪ್‌ಗಳನ್ನು ಕೂಡ ಟಿಪ್ಪಣಿಯಾಗಿ ಬರೆದುಕೊಳ್ಳಬಹುದು. ವಾಕ್ಯಗಳು, ಪದಗುಚ್ಛಗಳು, ಚಿಹ್ನೆಗಳನ್ನೂ ಟಿಪ್ಪಣಿ ಮಾಡಿಟ್ಟುಕೊಳ್ಳಬಹುದು. ನಿಮಗೆ ಯಾವುದು ಸೂಕ್ತವೊ ಅದನ್ನು ಬಳಸಬಹುದು.

ಗ್ರಾಮೀಣ, ನಗರಾಭಿವೃದ್ಧಿ ಡಿಪ್ಲೊಮಾ ಕಲಿಕೆ ಹೇಗೆ?


ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಸರ್ಕಾರಿ ಟೂಲ್ ರೂಮ್ ಮತ್ತು ಟ್ರೈನಿಂಗ್ ಸೆಂಟರ್‌ನಲ್ಲಿ ಟೂಲ್ ಮತ್ತು ಡೈ ಮೇಕಿಂಗ್ ಡಿಪ್ಲೊಮಾ ಮಾಡಿದ್ದೇನೆ. ಮುಂದೇನು ಮಾಡುವುದು ತಿಳಿಸಿ.

ಅದಿಲ್ ಹುಸೇನ್, ಊರು ತಿಳಿಸಿಲ್ಲ.

ಮುಂದಿನ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ಈ ಸಲಹೆಗಳನ್ನು ಗಮನಿಸಿ:

- ಟೂಲ್ ಮತ್ತು ಡೈ ಮೇಕಿಂಗ್ ಡಿಪ್ಲೊಮಾ ಅಭ್ಯರ್ಥಿಗಳಿಗೆ ಉತ್ಪಾದನಾ ಕ್ಷೇತ್ರದಲ್ಲಿ ಸಾಕಷ್ಟು ಬೇಡಿಕೆಯಿದೆ. ಹಾಗಾಗಿ, ಪ್ರತಿಷ್ಠಿತ ಸಂಸ್ಥೆಗಳಲ್ಲಿ ನೇರವಾಗಿ ಉದ್ಯೋಗವನ್ನು ಪಡೆಯಬಹುದು.
- ಹೆಚ್ಚಿನ ತಜ್ಞತೆಗಾಗಿ, ಬಿಇ/ಬಿಟೆಕ್ (ಮೆಕ್ಯಾನಿಕಲ್) ಕೋರ್ಸ್ ಮಾಡಬಹುದು.
- ಔದ್ಯೋಗಿಕ ಕ್ಷೇತ್ರದ ಅನುಭವದ ನಂತರ ಸ್ವಂತ ಉದ್ದಿಮೆಯನ್ನು ಪ್ರಾರಂಭಿಸಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=MHnPg_sp6E0

2. ನಾನು ಬಿಎ (ಅರ್ಥಶಾಸ್ತ್ರ) 6ನೇ ಸೆಮಿಸ್ಟರ್ ಓದುತ್ತಿದ್ದೇನೆ. 3 ತಿಂಗಳ ಇಂಟರನ್‌ಷಿಪ್ ಮಾಡಬೇಕು. ಒಳ್ಳೆಯ ಇಂಟರನ್‌ಷಿಪ್ ನೀಡುವ ಸರ್ಕಾರಿ ಮತ್ತು ಖಾಸಗಿ ಕಂಪನಿಗಳ ವಿವರವನ್ನು ನೀಡಿ.

ಹೆಸರು, ಊರು ತಿಳಿಸಿಲ್ಲ

ಶಿಕ್ಷಣ ಸಂಸ್ಥೆಗಳಲ್ಲಿ ನೀಡುವ ಸೈದ್ಧಾಂತಿಕ ಜ್ಞಾನದ ಪ್ರಾಯೋಗಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು, ಕಾರ್ಪೊರೇಟ್ ಪ್ರಾಜೆಕ್ಟ್‌ಗಳನ್ನು (ಇಂಟರನ್‌ಷಿಪ್) ವಿನ್ಯಾಸಗೊಳಿಸಲಾಗುತ್ತದೆ. ಆದಾಗ್ಯೂ, ಈ ಸೀಮಿತ ಉದ್ದೇಶದೊಂದಿಗೆ ಪ್ರಾಜೆಕ್ಟ್‌ಗಳನ್ನು ಮಾಡುವುದು ಸೂಕ್ತವಲ್ಲ; ಬದಲಾಗಿ, ಯಶಸ್ವಿ ವೃತ್ತಿಯನ್ನು ರೂಪಿಸುವ ಅತ್ಯುತ್ತಮ ಅವಕಾಶವನ್ನಾಗಿ ಬಳಸಿಕೊಳ್ಳಬೇಕು. ಅದಕ್ಕಾಗಿ ಈ ಸಲಹೆಗಳನ್ನು ಗಮನಿಸಿ:

- ನಿಮ್ಮ ಆಸಕ್ತಿ, ಅಭಿರುಚಿ, ಕೌಶಲ ಮತ್ತು ಶೈಕ್ಷಣಿಕ ಅರ್ಹತೆಗಳನ್ನು ಗಮನದಲ್ಲಿಟ್ಟುಕೊಂಡು ವೃತ್ತಿಯೋಜನೆಯನ್ನು ರೂಪಿಸಿ.
- ವೃತ್ತಿಯೋಜನೆಯಲ್ಲಿ, ನೀವು ಮುಂದೆ ಯಾವ ಕ್ಷೇತ್ರದಲ್ಲಿ ವೃತ್ತಿಯನ್ನು ಮಾಡಲು ಬಯಸುತ್ತೀರಿ ಎಂದು ನಿರ್ಧರಿಸಿ, ಆ ಕ್ಷೇತ್ರದ ಪ್ರತಿಷ್ಠಿತ ಸರ್ಕಾರಿ ಮತ್ತು ಖಾಸಗಿ ಕಂಪನಿಗಳ ಪಟ್ಟಿಯನ್ನು ಮಾಡಬೇಕು. ಈ ಪಟ್ಟಿಯನ್ನು ಮಾಡಲು ಜಾಲತಾಣ ಮತ್ತು ಲಿಂಕ್ಡ್‌ಇನ್ (Linkedin) ಸಾಮಾಜಿಕ ಮಾಧ್ಯಮ ಸಹಾಯವಾಗುತ್ತದೆ.
- ಪ್ರಾಜೆಕ್ಟಿಗೆ ಅಗತ್ಯವಾದ ವಿಷಯವನ್ನು ನಿರ್ಧರಿಸುವುದು ಸುಲಭವಲ್ಲ. ವಿಷಯದ ಪ್ರಸ್ತುತತೆ, ವಿಷಯದ ಕುರಿತು ಸ್ವಾಭಾವಿಕವಾದ ಒಲವು ಮತ್ತು ಪ್ರೇರಣೆಯ ಜೊತೆಗೆ, ಕಂಪನಿಗೆ ನೀವು ಮಾಡುವ ಪ್ರಾಜೆಕ್ಟ್ ಉಪಯುಕ್ತವಾಗಿರಬೇಕು. ಹಾಗಾಗಿ, ವಿಷಯದ ಕುರಿತು ಪ್ರಾಥಮಿಕ ಸಂಶೋಧನೆ ಅಗತ್ಯ.
- ಈ ಪ್ರತಿಷ್ಠಿತ ಕಂಪನಿಗಳ ಮಾನವ ಸಂಪನ್ಮೂಲ ಅಧಿಕಾರಿಗಳನ್ನು ಇಮೇಲ್/ದೂರವಾಣಿ ಮೂಲಕ ಸಂಪರ್ಕಿಸಿ, ನಿಮ್ಮ ಪ್ರಸ್ತಾವನೆಯನ್ನು ಪರಿಣಾಮಕಾರಿಯಾಗಿ ಮಂಡಿಸಿ.

ಅತ್ಯುತ್ತಮ ಕಂಪನಿಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾಜೆಕ್ಟ್‌ಗಳನ್ನು ಪಡೆಯಲು, ಶಿಕ್ಷಣ ಸಂಸ್ಥೆಗಳ ಪ್ಲೇಸ್‌ಮೆಂಟ್ ಸೆಲ್ ಕಾರ್ಯನಿರ್ವಹಿಸುತ್ತದೆ. ನೀವು ಓದುತ್ತಿರುವ ಶಿಕ್ಷಣ ಸಂಸ್ಥೆಯಲ್ಲಿ ಈ ಸೌಕರ್ಯವಿಲ್ಲದಿದ್ದರೆ, ಸ್ವಂತ ಪ್ರಯತ್ನಗಳಿಂದ ಸೂಕ್ತವಾದ ಪ್ರಾಜೆಕ್ಟ್ ಪಡೆಯಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ಲೇಖನವನ್ನು ಗಮನಿಸಿ: http://www.vpradeepkumar.com/projects-to-kickstart-your-career/



3. ನಾನು ಪಿಯುಸಿ (ವಿಜ್ಞಾನ) ಮುಗಿಸಿದ್ದು, 84,000 ರ್‍ಯಾಂಕ್ ಗಳಿಸಿದ್ದೇನೆ. ಇದರಿಂದ ಎಂಜಿನಿಯರಿಂಗ್‌ಗೆ ಸರ್ಕಾರಿ ಸೀಟ್ ಸಿಗುವುದಿಲ್ಲವೆನಿಸುತ್ತಿದೆ. ಆದ್ದರಿಂದ, ಕೊನೆಯವರಿಗೂ ಕಾಯುವುದೇ ಅಥವಾ ಬಿಬಿಎ/ಬಿಬಿಎಂ ಮಾಡುವುದೇ? ಯಾವುದು ಸೂಕ್ತ?

ಹೆಸರು, ಊರು ತಿಳಿಸಿಲ್ಲ

ಈ ವರ್ಷದ ಎಂಜಿನಿಯರಿಂಗ್ ಕೌನ್ಸೆಲಿಂಗ್ ಪ್ರಕ್ರಿಯೆ ಇನ್ನೂ ನಡೆಯುತ್ತಿದೆ. ಕಳೆದ ವರ್ಷದ ಮಾಹಿತಿಯಂತೆ, 1793 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಸೀಟುಗಳು ಭರ್ತಿಯಾಗಲಿಲ್ಲ. ಹಾಗಾಗಿ, ಕರ್ನಾಟಕದ ಯಾವುದಾದರೂ ಕಾಲೇಜಿನಲ್ಲಿ ಎಂಜಿನಿಯರಿಂಗ್ ಸೀಟ್ ಸಿಗುವ ಸಾಧ್ಯತೆಯಿದೆ. ಮೇಲಾಗಿ, ಎಂಜಿನಿಯರಿಂಗ್ ಮತ್ತು ಬಿಬಿಎ ಸಂಬಂಧಿತ ವೃತ್ತಿಗಳಿಗೆ ಬೇಕಾಗುವ ಅಭಿರುಚಿ ಮತ್ತು ಕೌಶಲಗಳು ವಿಭಿನ್ನವಾಗಿವೆ. ಹಾಗಾಗಿ, ನಿಮಗೆ ಯಾವ ವೃತ್ತಿ ಸೂಕ್ತ ಎಂದು ಪರಿಶೀಲಿಸುವುದು ಮುಖ್ಯ. ಅಂತಿಮ ನಿರ್ಧಾರ ನಿಮ್ಮದು.

4. ನಾನು ಬಿ.ಎಸ್ಸಿ ಮುಗಿಸಿದ್ದೇನೆ. ಈಗ ಗ್ರಾಮೀಣ ಮತ್ತು ನಗರಾಭಿವೃದ್ಧಿ ವಿಷಯದಲ್ಲಿ ಡಿಪ್ಲೊಮಾ ಮಾಡುವ ಆಸಕ್ತಿಯಿದೆ. ಈ ವಿಷಯದ ಕೋರ್ಸ್ ಮಾಡಲು ಉತ್ತಮ ಕಾಲೇಜುಗಳ ವಿವರವನ್ನು ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ನಮಗಿರುವ ಮಾಹಿತಿಯಂತೆ ಈ ಎರಡೂ ವಿಭಿನ್ನ ವಿಷಯಗಳನ್ನು ಸಂಯೋಜಿಸಿ ಒಂದೇ ಡಿಪ್ಲೊಮಾ ಕೋರ್ಸ್ ಮಾಡಲು ಸಾಧ್ಯವಾಗಲಾರದು. ಹಾಗಾಗಿ, ನಿಮ್ಮ ಆಸಕ್ತಿಯಂತೆ ಯಾವುದಾದರೂ ಈ ಎರಡು ವಿಷಯಗಳನ್ನು ಪ್ರತ್ಯೇಕವಾಗಿ ಏಕಕಾಲದಲ್ಲಿ ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಮಾಡಬಹುದು. ಈ ಕೋರ್ಸ್‌ಗಳು ಆನ್‌ಲೈನ್/ದೂರಶಿಕ್ಷಣದ ಮೂಲಕ ದೊರೆಯುತ್ತದೆ. ಹಾಗೂ ನಿಮ್ಮ ವೃತ್ತಿಯೋಜನೆಯನ್ನು ಅನುಷ್ಠಾನಗೊಳಿಸಲು ಸಹಾಯವಾಗುವುದಾದರೆ, ಈ ವಿಷಯಗಳ ಬಗ್ಗೆ ಎಂಎ ಕೋರ್ಸ್ ಮಾಡುವ ಸಾಧ್ಯತೆಗಳನ್ನೂ ಪರಿಶೀಲಿಸಿ. ಜಾಲತಾಣದಲ್ಲಿ ಪ್ರಾಥಮಿಕ ಸಂಶೋಧನೆಯ ಮೂಲಕ ಸಮಗ್ರವಾದ ಕೋರ್ಸ್ ಮಾಹಿತಿಯನ್ನು ಕಲೆಹಾಕಿ, ಮುಂದಿನ ನಿರ್ಧಾರವನ್ನು ಮಾಡಬಹುದು. ನೀವು ಕೇಳುತ್ತಿರುವ ವಿಷಯಗಳ ಕುರಿತಾದ ಕೋರ್ಸ್ ಮಾಹಿತಿಗಾಗಿ ಗಮನಿಸಿ: http://ignou.ac.in/ignou/aboutignou/school/soce/programmes

https://swayam.gov.in/explorer?searchText=urban+planning

5. ನಾನು ಬಿ.ಎಸ್ಸಿ 3ನೇ ಸೆಮೆಸ್ಟರ್ ಓದುತ್ತಿರುವಾಗ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಅಡುಗೆಯವರಾಗಿ ಕೆಲಸಕ್ಕೆ ಸೇರಿರುತ್ತೇನೆ. ಬಡ್ತಿಗೆ, ಈ ಶೈಕ್ಷಣಿಕ ಅರ್ಹತೆ ಪರಿಗಣಿಸುತ್ತಾರೆಯೇ? ಅಥವಾ, ಪದವಿ ಗಳಿಸಿದ ಬಳಿಕವೇ ಬಡ್ತಿಗೆ ಅರ್ಹತೆ ಸಿಗುತ್ತದೆಯೇ?

ನಾಗಪ್ರಿಯ, ಬೀದರ್

ನಿಮ್ಮ ನೇಮಕಾತಿಯ ನಿಯಮ ಮತ್ತು ನಿಬಂಧನೆಗಳು, ಸೇವಾ ವಿವರಗಳ ಮಾಹಿತಿಯಿಲ್ಲದೆ ನಿಖರವಾಗಿ ಉತ್ತರಿಸುವುದು ಸಾಧ್ಯವಿಲ್ಲ. ಹಾಗಾಗಿ, ನಿಮ್ಮ ಇಲಾಖೆಯ ಮೇಲಧಿಕಾರಿಗಳನ್ನು ಸಂಪರ್ಕಿಸಿ.

> ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಲೆಗ್ರಾಂಡ್ ಎಂಪವರಿಂಗ್ ಸ್ಕಾಲರ್‌ಶಿಪ್ ಪ್ರೋಗ್ರಾಂ

ಭಾರತದಾದ್ಯಂತ ಬಿ.ಟೆಕ್/ಬಿ.ಇ/ಬಿ.ಆರ್ಕ್ ಸೇರಿದಂತೆ ಇತರೆ ಪದವಿ ಕೋರ್ಸ್‌ಗಳನ್ನು (ಬಿಬಿಎ/ಬಿ.ಕಾಂ/ಬಿ.ಎಸ್ಸಿ ಗಣಿತ ಮತ್ತು ವಿಜ್ಞಾನ) ಮುಂದುವರಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಬೆಂಬಲಿಸುವುದಕ್ಕಾಗಿ ರೂಪಿಸಿರುವ ಕಾರ್ಯಕ್ರಮ 'ಲೆಗ್ರಾಂಡ್ ಎಂಪವರಿಂಗ್ ಸ್ಕಾಲರ್‌ಷಿಪ್ ಪ್ರೋಗ್ರಾಂ 2023'.

ಈ ವಿದ್ಯಾರ್ಥಿವೇತನವು ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಫೈನಾನ್ಸ್ ಮತ್ತು ಸೈನ್ಸಸ್‌ನಲ್ಲಿ ವೃತ್ತಿಜೀವನ ಮುಂದುವರಿಸಲು ಉದ್ದೇಶಿಸಿರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಬೆಂಬಲಿಸುತ್ತದೆ.

- **ಅರ್ಹತೆ:** ಅರ್ಜಿದಾರರು ದೇಶದ ಯಾವುದೇ ಶೈಕ್ಷಣಿಕ ಸಂಸ್ಥೆಗಳಲ್ಲಿ ಬಿ.ಟೆಕ್/ ಬಿ.ಇ/ ಬಿ.ಆರ್ಕ್/ ಬಿಬಿಎ/ ಬಿ.ಕಾಮ್/ ಬಿ.ಎಸ್‌ಸಿ (ಗಣಿತ ಮತ್ತು ವಿಜ್ಞಾನ) ಪದವಿಗಳಲ್ಲಿ ಪ್ರವೇಶ ಪಡೆದಿರಬೇಕು. 2022–2023ರಲ್ಲಿ 12 ನೇ ತರಗತಿ ಉತ್ತೀರ್ಣರಾಗಿರಬೇಕು.


ಅರ್ಜಿದಾರರು 10 ಮತ್ತು 12ನೇ ತರಗತಿಗಳಲ್ಲಿ ಕನಿಷ್ಠ ಶೇ 70ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಎಲ್ಲಾ ಮೂಲಗಳಿಂದ ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 5,00,000ಕ್ಕಿಂತ ಕಡಿಮೆಯಿರಬೇಕು

- **ಆರ್ಥಿಕ ಸಹಾಯ:** ಕೋರ್ಸ್ ಪೂರ್ಣಗೊಳ್ಳುವವರೆಗೆ ವರ್ಷಕ್ಕೆ ₹60 ಸಾವಿರದ ವರೆಗೆ (ಶೇ 60 ಕೋರ್ಸ್ ಶುಲ್ಕ) ನೀಡಲಾಗುತ್ತದೆ. ವಿಶೇಷ ವರ್ಗದ ವಿದ್ಯಾರ್ಥಿನಿಯರಿಗೆ ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ಕೋರ್ಸ್ ಪೂರ್ಣಗೊಳ್ಳುವವರೆಗೆ ವರ್ಷಕ್ಕೆ ₹ 1 ಲಕ್ಷದವರೆಗೆ (ಶೇ 80ರಷ್ಟು ಕೋರ್ಸ್ ಶುಲ್ಕ) ನೀಡಲಾಗುತ್ತದೆ.
- **ವಿಶೇಷ ವರ್ಗ:** ಅಂಗವಿಕಲ/ಟ್ರಾನ್ಸ್ ಜೆಂಡರ್/ ಸಿಂಗಲ್ ಪೇರೆಂಟ್(ಏಕ ಪೋಷಕ) ಹೊಂದಿರುವ ವಿದ್ಯಾರ್ಥಿಗಳು/ ಕೋವಿಡ್‌ನಿಂದಾಗಿ ಪೋಷಕರನ್ನು ಕಳೆದುಕೊಂಡ ವಿದ್ಯಾರ್ಥಿಗಳು.
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-08-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** www.b4s.in/praja/LFLS7

ಕೋಟಕ್ ಕನ್ಯಾ ಸ್ಕಾಲರ್‌ಷಿಪ್

ಕೋಟಕ್ ಮಹೀಂದ್ರಾ ಗ್ರೂಪ್ ಕಂಪನಿಯವರು, ಕೋಟಕ್ ಎಜುಕೇಶನ್ ಫೌಂಡೇಶನ್ ಇದರ ಶಿಕ್ಷಣ ಮತ್ತು ಜೀವನೋಪಾಯದ ಕುರಿತಾದ ಸಿಎಸ್‌ಆರ್ ಯೋಜನೆಯ ಅಡಿ ಶೇ 85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿನಿಯರಿಂದ 'ಕೋಟಕ್ ಕನ್ಯಾ ಸ್ಕಾಲರ್‌ಷಿಪ್'ಗಾಗಿ ಅರ್ಜಿ ಆಹ್ವಾನಿಸಿದೆ.

- **ಅರ್ಹತೆ:** ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ (ನ್ಯಾಕ್/ಎನ್‌ಐಆರ್‌ಎಫ್ ಮಾನ್ಯತೆ ಪಡೆದ) ವೃತ್ತಿಪರ ಕೋರ್ಸ್‌ಗಳಲ್ಲಿ ಮೊದಲ ವರ್ಷದ ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಎಲ್ಲ ಮೂಲಗಳಿಂದ ಕುಟುಂಬದ ಆದಾಯ ವಾರ್ಷಿಕ ₹ 6 ಲಕ್ಷ ಮೀರದಂತಹ,



12ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಲು ಅರ್ಹರು. ಅರ್ಜಿದಾರರು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಶೇ 85 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು.

- **ಆರ್ಥಿಕ ಸಹಾಯ:** ವರ್ಷಕ್ಕೆ ₹ 1.5 ಲಕ್ಷ
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-09-2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** www.b4s.in/praja/KKGS2

ಕೃಪೆ: www.buddy4study.com

ಮಾನವನ ವರ್ಣತಂತು ಸಂಖ್ಯಾದೋಷಗಳು




ಸಾಂದರ್ಭಿಕ ಚಿತ್ರ

ಡಾ. ಎಸ್. ಶಿಶುಪಾಲ

'ತಾರೆ ಜಮೀನ್ ಪರ್' ಎಂಬ ಚಿತ್ರದಲ್ಲಿ ವಿಶೇಷ ಚೇತನ (ಬುದ್ಧಿಮಾಂದ್ಯ) ಮಕ್ಕಳ ಸಮಸ್ಯೆಯನ್ನು ಸಾಮಾಜಿಕ ದೃಷ್ಟಿಯಿಂದ ತೋರಿಸಿ ಜನರು ಗಂಭೀರವಾಗಿ ಚಿಂತಿಸುವಂತೆ ಮಾಡಿತು. ನಮ್ಮ ಸುತ್ತಮುತ್ತ ಅಂತಹ ಮಕ್ಕಳನ್ನು ಕಂಡಾಗ ಬೇಸರವಾಗುತ್ತದೆ. ಇಂತಹ ಸಮಸ್ಯೆಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಿದಾಗ ಪ್ರಾಕೃತಿಕವಾಗಿ ಆಗುವ ಒಂದು ಆಕಸ್ಮಿಕ ಕ್ರಿಯೆಯಿಂದ ಆ ರೀತಿಯ ಮಕ್ಕಳ ಕಷ್ಟಕ್ಕೆ ಕಾರಣವಾಗುತ್ತದೆ.

ಮಾನವನ ಪ್ರತಿ ಜೀವಕೋಶದಲ್ಲಿ 46 ವರ್ಣತಂತುಗಳಿವೆ. ಇವುಗಳಲ್ಲಿ 44 ನ್ನು ಕೋಶಕಾಯಕ (Somatic chromosomes) ವರ್ಣತಂತುಗಳೆಂದು ಮತ್ತು ಉಳಿದ ಎರಡನ್ನು ಲೈಂಗಿಕ (Sex chromosomes) ವರ್ಣತಂತುಗಳೆಂದು ಪರಿಗಣಿಸಲಾಗಿದೆ. ಈ ವಿವಿಧ ವರ್ಣತಂತುಗಳಲ್ಲಿ ಹುದುಗಿರುವ ಗುಣಾಣುಗಳು (Genes) ನಮ್ಮ ಎಲ್ಲಾ ಗುಣಲಕ್ಷಣಗಳನ್ನು ನಿರ್ವಹಿಸುವ ಅನುವಂಶೀಯ ರಾಸಾಯನಿಕಗಳು. ಗಂಡು ಮಕ್ಕಳಲ್ಲಿ (44 ಮತ್ತು XY) ಹೆಣ್ಣು ಮಕ್ಕಳಲ್ಲಿ (44 ಮತ್ತು XX) ಸಂಖ್ಯೆಯ ವರ್ಣತಂತುಗಳಿರುತ್ತವೆ. ಪ್ರತಿಯೊಬ್ಬರ ಜೀವಕೋಶದಲ್ಲಿರುವ ವರ್ಣತಂತುಗಳಲ್ಲಿ 23 ತಂದೆಯ ವೀರ್ಯಾಣುವಿನಿಂದಲೂ ಮತ್ತು 23 ತಾಯಿಯ ಅಂಡಾಣುವಿನಿಂದಲೂ ಬಂದಿರುತ್ತವೆ. ಈ ಲಿಂಗಾಣುಗಳ (ವೀರ್ಯಾಣು ಮತ್ತು ಅಂಡಾಣು) ಉತ್ಪತ್ತಿ ಕಾಲದಲ್ಲಿ ಪ್ರತಿಯೊಂದು ಲಿಂಗಾಣುವಿಗೆ ಹಂಚಿಕೆಯಾಗಬೇಕಾದ ವರ್ಣತಂತುಗಳ ನಿರ್ದಿಷ್ಟ ಸಂಖ್ಯೆಯಲ್ಲಿ (23) ಏರುಪೇರಾಗಿ ಒಂದಕ್ಕಿಂತ ಹೆಚ್ಚು ಅಥವಾ ಕಡಿಮೆ ವರ್ಣತಂತುಗಳು ಹಂಚಿಕೆಯಾಗುತ್ತವೆ. ಅಂತಹ ಸಂಖ್ಯೆ ಹೆಚ್ಚು-ಕಡಿಮೆಯಾದ ಲಿಂಗಾಣುವಿನಿಂದ ಹುಟ್ಟುವ ಮಕ್ಕಳಲ್ಲಿ ವರ್ಣತಂತು ಸಂಖ್ಯಾ ದೋಷವುಂಟಾಗುವುದು. ಹಲವಾರು ರೀತಿಯ ವರ್ಣತಂತು ಸಂಖ್ಯಾ ದೋಷಗಳಿದ್ದು ಕೆಲವನ್ನು ಇಲ್ಲಿ ವಿವರಿಸಲಾಗಿದೆ.



ಕ್ರೊಮೊಸೋಮ್ಸ್ ಚಿತ್ರ ಕೃಪೆ : ವೆಸೆಕ್ಸ್ ರೆಗ್


ಕ್ಲೈನ್ ಫೆಲ್ಟರ್ ರೋಗಕೂಟ (ಕ್ಲೈನ್ ಫೆಲ್ಟರ್ ಸಿಂಡ್ರೋಮ್): ಇದು ಗಂಡು ಮಕ್ಕಳ ಜೀವಕೋಶಗಳಲ್ಲಿ ಲೈಂಗಿಕ ವರ್ಣತಂತುಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬರುತ್ತದೆ. ಇವರಲ್ಲಿ ಲಿಂಗ ನಿರ್ಧರಿಸುವ ವರ್ಣತಂತುಗಳ ಸಂಖ್ಯೆ ಎರಡಕ್ಕೆ ಬದಲಾಗಿ ಮೂರು ಅಥವ ಹೆಚ್ಚು ಆಗಿರುತ್ತದೆ. ಇಂತಹವರ ಲಕ್ಷಣಾವಳಿಗಳಲ್ಲಿ ಪ್ರಮುಖವಾದದ್ದು ಹೆಣ್ಣಿನಂತಹ ಧ್ವನಿ. ತೊದಲು ಮಾತು. ಬಾಗಿದ ಮೊಳಕಾಲು. ಮುಖದಲ್ಲಿ ಕಡಿಮೆ ಕೂದಲುಗಳಿರುತ್ತವೆ. ಸಣ್ಣ ವೃಷಣಗಳಿದ್ದು ನಪುಂಸಕರಾಗಿರುತ್ತಾರೆ. ಬುದ್ಧಿಶಕ್ತಿಯು ಸಾಮಾನ್ಯವಾಗಿರುತ್ತದೆ.

ಡೌನ್ಸ್ ರೋಗಕೂಟ (ಡೌನ್ಸ್ ಸಿಂಡ್ರೋಮ್): ಮಾನವರಲ್ಲಿ 21 ನೇ ವರ್ಣತಂತುವಿನ ಮೂರು ಪ್ರತಿಗಳಿದ್ದಾಗ ಉಂಟಾಗುವು ನ್ಯೂನತೆ (ಚಿತ್ರ ನೋಡಿ). ಇದನ್ನು ತ್ರಿಕಾಯ (Trisomy) ಸ್ಥಿತಿ ಎನ್ನುವರು. ಚಪ್ಪಟೆ ಮುಖ ಮತ್ತು ಸಣ್ಣ ಕುತ್ತಿಗೆ ಇರುತ್ತದೆ. ದೊಡ್ಡ ನಾಲಿಗೆ ಹೊರಚಾಚಿರುತ್ತದೆ. ತೇಲು ಕಣ್ಣುಗಳು. ಚಿಕ್ಕದಾದ ಕಿವಿಗಳಿರುತ್ತವೆ. ಕೈಗಳು ಅಗಲವಾಗಿದ್ದು ಚಿಕ್ಕದಾಗಿರುತ್ತವೆ. ಕಡಿಮೆ ಅಥವಾ ಮಧ್ಯಮ ವರ್ಗದ ಮಾನಸಿಕ ತೊಂದರೆಗಳಾಗಬಹುದು. ಮೂಳೆಗಳ ಬೆಳವಣಿಗೆ ಸರಿಯಿರುವುದಿಲ್ಲ. ಆದರೂ ಸಾಮಾನ್ಯ ಜೀವನ ನಡೆಸಬಹುದು. ತಾಯಿಯಲ್ಲಿನ ವೈರಸ್ ಸೋಂಕು, ವಯಸ್ಸಾದ ಅಂಡಾಣು ಅಥವಾ ಹಾನಿಕಾರಕ ವಿಕಿರಣಗಳಿಂದ ಈ ಪರಿಸ್ಥಿತಿ ಉಂಟಾಗಬಹುದು.

ಟರ್ನರ್ ರೋಗಕೂಟ (ಟರ್ನರ್ ಸಿಂಡ್ರೋಮ್): ಇದು ಹೆಣ್ಣು ಮಕ್ಕಳಲ್ಲಿ ಕಾಣುವ ವರ್ಣತಂತು ದೋಷ. ಇವರಲ್ಲಿ ಒಂದು ಲೈಂಗಿಕ ವರ್ಣತಂತು ಕಡಿಮೆಯಿರುತ್ತದೆ. ಒಟ್ಟು ವರ್ಣತಂತುಗಳ ಸಂಖ್ಯೆ 45 ಮಾತ್ರ. ಈ ಸಮಸ್ಯೆ ಇರುವ ಹೆಣ್ಣು ಸಾಮಾನ್ಯವಾಗಿ ಕುಳ್ಳಗಿದ್ದು ಅಗಲವಾದ ಎದೆಯನ್ನು ಹೊಂದಿರುತ್ತಾರೆ. ಕುತ್ತಿಗೆಯ ಚರ್ಮದಲ್ಲಿ ಸುಕ್ಕುಗಳಿರುತ್ತವೆ. ಕಿವಿ ಸರಿಯಾಗಿ ಕೇಳಿಸುವುದಿಲ್ಲ. ಬಂಜೆಯಾಗಿರುತ್ತಾರೆ.

ದೋಷ ಪತ್ತೆ ಹಚ್ಚುವಿಕೆ: ಗರ್ಭಿಣಿಯಾದ ಹತ್ತು ವಾರಗಳಲ್ಲಿ ಕರುಳ ಬಳ್ಳಿಯಿಂದ ಪಡೆದ ರಕ್ತ ಅಥವಾ ಭ್ರೂಣದ್ರವವನ್ನು ಸೂಕ್ತ ಪರೀಕ್ಷೆಗೊಳಪಡಿಸುವುದು. ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಮೂಲಕವೂ ಭ್ರೂಣದ ಬೆಳವಣಿಗೆಯನ್ನು ಗಮನಿಸಿ ನ್ಯೂನತೆಗಳನ್ನು ಪತ್ತೆ ಹಚ್ಚಬಹುದು. ಸೂಕ್ತ ಪರಿಹಾರವಿಲ್ಲದ ಸಂಖ್ಯಾದೋಷವಿದು. ಭ್ರೂಣಾವಸ್ಥೆಯಲ್ಲಿಯೇ ಪತ್ತೆ ಹಚ್ಚಬೇಕು. ಇಂತಹ ಮಕ್ಕಳ ತಂದೆ-ತಾಯಿಯರಿಗೆ ಸೂಕ್ತ ವೈಜ್ಞಾನಿಕ ಮಾರ್ಗದರ್ಶನ ಅಗತ್ಯವಿದೆ. ಪ್ರಕೃತಿಯಲ್ಲಾಗುವ ಈ ಆಕಸ್ಮಿಕಕ್ಕೆ ಮಕ್ಕಳ ಜೀವನ ಬಲಿಯಾಗುವುದು ಮಾನವ ಸಮಾಜದ ವಿಪರ್ಯಾಸ.

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)


ಅಂಕೋಲಾ ತಾಲ್ಲೂಕಿನ ಅಚವೆ ಗ್ರಾಮದಲ್ಲಿರುವ ವಿಭೂತಿ ಜಲಪಾತ ಮೈದುಂಬಿ ಹರಿಯುತ್ತಿದೆ


ಶಿವಮೊಗ್ಗದ ತುಂಗಾ ಜಲಾಶಯದ 21 ಕ್ರಸ್ಟ್‌ಗೇಟ್‌ಗಳಿಂದ ನೀರನ್ನು ಬಿಡಲಾಗಿದೆ


ಕೊಡಗು ಜಿಲ್ಲೆಯ ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಕಾವೇರಿ ನದಿ ನೀರಿನಮಟ್ಟ ಭಾನುವಾರ ಹೆಚ್ಚಾಗಿತ್ತು

ರಸ್ತೆ ಜಲಾವೃತ, ಮನೆ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭಾನುವಾರ ಮಳೆಗೆ ರಸ್ತೆಗಳು ಜಲಾವೃತಗೊಂಡಿದ್ದು, ಸಂಚಾರ ವ್ಯತ್ಯಯವಾಗಿದೆ. ಹಲವೆಡೆ ಸೇತುವೆಗಳು ಹಾಗೂ ಮನೆಗಳಿಗೆ ಹಾನಿಯುಂಟಾಗಿದೆ.

ಕೊಡಗು ಜಿಲ್ಲೆಯಲ್ಲಿ ನಾಪೋಕ್ಲು-ಮೂರ್ನಾಡು ಸಂಪರ್ಕ ರಸ್ತೆಯ ಹೊದ್ದೂರು ಬಳಿ ಬೊಳಿಬಾಣೆ ಹಾಗೂ ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಕಳಸೂರು ಬಳಿ ರಸ್ತೆಗಳು ಜಲಾವೃತವಾಗಿದ್ದು, ಸಂಪರ್ಕ ಕಡಿತಗೊಂಡಿದೆ.

ಕೊಡಗು ಜಿಲ್ಲೆಯ ನಾಗರಹೊಳೆ ಅರಣ್ಯದಂಚಿನ ಚೆಟ್ಟಿಪಾಡಿಗೆ ಸಂಪರ್ಕ ಕಲ್ಪಿಸುವ ತೋಡಿಗೆ ನಿರ್ಮಿಸಿದ್ದ ಕಾಲುಸೇತುವೆ ಕೊಚ್ಚಿಕೊಂಡು ಹೋಗಿದೆ. ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಐದು ಹಾಗೂ ಚಿಕ್ಕೋಡಿ ತಾಲ್ಲೂಕಿನ ಒಂದು ಸೇತುವೆ ಮುಳುಗಿವೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ವನಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಣಗೇರಿ ಗ್ರಾಮದ ಸೇತುವೆ ಮೇಲೆ ನೀರು ಹರಿದಿದ್ದು, ಕೊಡಗಿನ ಸೋಮವಾರಪೇಟೆ - ವನಗೂರು ಸಂಪರ್ಕಿಸುವ ರಸ್ತೆಯಲ್ಲಿ ಸಂಚಾರ ಬಂದ್ ಆಗಿತ್ತು.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಪಾರಿಶ್ವಾಡ ಗ್ರಾಮದ ಬಳಿ ಮಲಪ್ರಭಾ ನದಿಗೆ ನಿರ್ಮಿಸಿದ ಸೇತುವೆಯ ಸ್ವಲ್ಪಭಾಗ ಭಾನುವಾರ ಕುಸಿದು ಬಿದ್ದಿದೆ. ಇದರಿಂದ ಅಕ್ಕಪಕ್ಕದ ಇರುವ 30 ಗ್ರಾಮಗಳ ಸಂಚಾರಕ್ಕೆ ಸಂಕಷ್ಟ ಎದುರಾಗಿದೆ.

ಮನೆಗಳಿಗೆ ಹಾನಿ: ಕೊಡಗು ಜಿಲ್ಲೆಯ ಕುಂಜಿಲ ಗ್ರಾಮದ ಮಕ್ಕಿ ಉಮ್ಮರ್ ಅವರ ಮನೆಯ ಚಾವಣಿಯ ಶೀಟ್‌ಗಳು ಹಾರಿ ಹೋಗಿವೆ. ಧಾರವಾಡ ಜಿಲ್ಲೆಯ ವಿವಿಧ ತಾಲ್ಲೂಕಿನ ಗ್ರಾಮಗಳಲ್ಲಿ ಸುಮಾರು 24 ಮನೆಗಳಿಗೆ ಹಾನಿ ಆಗಿದೆ. ಉಡುಪಿ ಜಿಲ್ಲೆಯಲ್ಲಿ ಕುಂದಾಪುರ ತಾಲ್ಲೂಕಿನ ವಿವಿಧ ಗ್ರಾಮಗಳ ಮನೆಗಳಿಗೆ ಹಾನಿಯಾಗಿದೆ. ಕಬ್ಬಿನಾಲೆ, ಹಳ್ಳಿ ಹೊಳೆಯಲ್ಲಿ ಅಡಿಕೆ ತೋಟಕ್ಕೆ ಹಾನಿಯಾಗಿದೆ.

ಜಾನುವಾರು ಸಾವು: ಧಾರವಾಡ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಮೂರು ಆಡುಗಳು ಹಾಗೂ ಒಂದು ದನ ಹಾಗೂ ಎಮ್ಮೆ ಮೃತಪಟ್ಟಿವೆ. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಒಂದು ಎತ್ತು ಮೃತಪಟ್ಟಿದೆ.

ಮಂಗಳೂರಿನ ಮುಂಡಾಜೆ ಸಮೀಪದ ಅಂಬ್ಯಾರು ಬಳಿ ರಾಷ್ಟ್ರೀಯ ಹೆದ್ದಾರಿಗೆ ಮರ ಬಿದ್ದು, ಚಿಕ್ಕಮಗಳೂರು- ಮಂಗಳೂರು ನಡುವೆ ಸಂಪರ್ಕ ಒಂದೂವರೆ ಗಂಟೆ ಕಾಲ ಕಡಿತಗೊಂಡಿತ್ತು. ನಗರದ ನಾರಾಯಣಗುರು ವೃತ್ತದ ಬಳಿ ಸುಮಾರು 300 ವರ್ಷಗಳಷ್ಟು ಹಳೆಯ ಆಲದ ಮರ ರಸ್ತೆಗುರುಳಿದೆ.

ಮಹಿಳೆಗೆ ಗಾಯ: ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕು ಹೊಳಲು ಗ್ರಾಮದಲ್ಲಿ ಮಣ್ಣಿನ ಮಾಳಿಗೆ ಮನೆ ಕುಸಿದು ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ.

ಜಲಪಾತ ವೀಕ್ಷಣೆಗೆ ನಿಷೇಧ: ಬೆಳಗಾವಿ ನಗರ ಹಾಗೂ ಜಿಲ್ಲೆಯ ಹಲವೆಡೆ ಧಾರಾಕಾರ ಮಳೆಯಾಗಿದೆ. ಖಾನಾಪುರ ತಾಲ್ಲೂಕಿನಲ್ಲಿ ಮಳೆ ಮತ್ತಷ್ಟು ಬಿರುಸು ಪಡೆದ ಕಾರಣ ಜಲಪಾತಗಳ ವೀಕ್ಷಣೆ ಮೇಲೆ ಹೇರಿದ ನಿಷೇಧವನ್ನು ಮುಂದುವರಿಸಲಾಗಿದೆ.

ನಿರ್ಬಂಧದ ನಡುವೆಯೂ ಮಹಾರಾಷ್ಟ್ರ ಗಡಿಯಲ್ಲಿರುವ ಬಾಬಾಫಾಲ್ಸ್ ನೋಡಲು ಹೆಚ್ಚು ಜನ ಓಡಾಡುವುದು ಭಾನುವಾರ ಕಂಡುಬಂತು. ಶಿಂಧೋಳಿ- ತಿಲಾರಿ ಮಾರ್ಗದ ರಸ್ತೆಯ ಮೇಲೆ ಎರಡು ಅಡಿಯಷ್ಟು ನೀರು ಹರಿಯುತ್ತಿದ್ದರೂ ಜನ ನಡೆದುಕೊಂಡು ಸಾಗಿದ್ದು ಕಂಡುಬಂತು.

ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ಅಲ್ಲಲ್ಲಿ ಮನೆಗಳು ಕುಸಿದಿದ್ದರೆ, ಮರಗಳು ಧರೆಗುರುಳಿವೆ. ಶೃಂಗೇರಿ- ಮಂಗಳೂರು ಹೆದ್ದಾರಿಯಲ್ಲಿ ಸಂಪರ್ಕ ಕಡಿತಗೊಂಡಿದೆ. ದಾವಣಗೆರೆ ಜಿಲ್ಲೆಯ ಜಿಲ್ಲೆಯ ವಿವಿಧೆಡೆ ಬಿರುಸಿನ ಮಳೆಯಾಗಿದೆ. ಇದರಿಂದಾಗಿ ರೈತರ ಮೊಗದಲ್ಲಿ ಸಂತಸ ಮೂಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	92.60	16,848	5,283
ಹಾರಂಗಿ	2,859	2,855.15	21,740	35,500
ಕಬಿನಿ	2284.00	2,276.77	17,412	800
ಹೇಮಾವತಿ	2,922	2900.10	12,088	200
ಲಿಂಗನಮಕ್ಕಿ	1,819	1,770.7	52,374	1,285
ಸೂಪಾ (ಮೀ)	564	536.15	51,435	00
ಮಾಣಿ	595	577.30	7,732	00
ತುಂಗಭದ್ರಾ	1,633	1,599.87	59,500	125
ಮಲಪ್ರಭಾ	2079.5	2,051.90	13,840	194
ಘಟಪ್ರಭಾ	2175	2,121.55	29,501	98
ಭದ್ರಾ	186	145	12,169	167
ಆಲಮಟ್ಟಿ (ಮೀ)	519.6	513.81	1,07,769	6,671
ನಾರಾಯಣಪುರ (ಮೀ)	492.25	486.97	5,081	00

*ನೆಲಮಟ್ಟದಿಂದ

ಗುಂಡಿಗೆ ಬಿದ್ದು ಬಾಲಕರು ಸಾವು

ಕಲಬುರಗಿ: ಎಲ್ ಆ್ಯಂಡ್ ಟಿ ಕಂಪನಿ ನಗರದಲ್ಲಿ ಕಟ್ಟುತ್ತಿರುವ ಓವರ್ ಹೆಡ್ ಟ್ಯಾಂಕ್‌ನ ಬುನಾದಿಯ ಗುಂಡಿಯಲ್ಲಿ ನಿಂತಿದ್ದ ಮಳೆ ನೀರಲ್ಲಿ ಬಿದ್ದು ಇಬ್ಬರು ಬಾಲಕರು ಶನಿವಾರ ಮೃತಪಟ್ಟಿದ್ದಾರೆ.

ಸಂಜಯ ಗಾಂಧಿ ನಗರದ ಅಭಿಷೇಕ ಸುರೇಶ ಕನ್ನೊಳ್ಳಿ (12) ಮತ್ತು ಅಜಯ್ ಭೀಮಾಶಂಕರ ನೆಲೋಗಿ (12) ಮೃತರು. ಶನಿವಾರ ಸಂಜೆ ಆಟವಾಡಲು ಹೋಗಿ ಕಾಲು ಜಾರಿ ಬಿದ್ದಿದ್ದಾರೆ. ಭಾನುವಾರ ಬೆಳಿಗ್ಗೆ ಗುಂಡಿಯಲ್ಲಿ ಮೃತ ದೇಹಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲ್ ಆ್ಯಂಡ್ ಟಿ ಕಂಪನಿಯ ನಗರದ ಮುಸ್ಲೆ ಕಾಲೊನಿಯಲ್ಲಿ ಸುಮಾರು 15 ಅಡಿ ಗುಂಡಿಯನ್ನು ಅಗೆದು, ಟ್ಯಾಂಕ್ ಕಾಲಂ ಹಾಕಿ ಸುತ್ತಲೂ ತಗ್ಗು ಮುಚ್ಚದೆ ಹಾಗೆಯೇ ಬಿಟ್ಟಿದೆ. ಆಟವಾಡಲು ಹೋದ ಮಕ್ಕಳು ಅದರಲ್ಲಿ ಬಿದ್ದು ಮೃತಪಟ್ಟಿದ್ದಾರೆ. ಇದು ಕಂಪನಿಯ ನಿರ್ಲಕ್ಷ್ಯ ಎಂಬುದು ಸ್ಥಳೀಯರ ಆರೋಪ.

₹ 10 ಲಕ್ಷ ಪರಿಹಾರದ ಭರವಸೆಯನ್ನು ಲಿಖಿತವಾಗಿ ನೀಡುವವರೆಗೆ ಶವ ಹೂಳುವುದಿಲ್ಲ ಎಂದು ಪಟ್ಟುಹಿಡಿದರು. ಪಾಲಿಕೆ ಅಧಿಕಾರಿಗಳು ಆಶ್ವಾಸನೆ ಕೊಟ್ಟ ಬಳಿಕ ಬಾಲಕರ ಶವ ತೆಗೆದುಕೊಂಡು ಹೋಗಲಾಯಿತು.

ಯುವಕೇಂದ್ರ: ಯೋಜನೆಗಳ ‘ಭಾರ’

ಒಂದನೇ ಪುಟದಿಂದ...

ಸಂಸದರು, ವಿಧಾನ ಸಭೆ ಸದಸ್ಯರು ಅಥವಾ ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಇಬ್ಬರು ಉಪಾಧ್ಯಕ್ಷರು ಇರುತ್ತಾರೆ. ವಿವಿಧ ಇಲಾಖೆಯ 40ಕ್ಕೂ ಹೆಚ್ಚು ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಆದರೂ ನೇಮಕಾತಿ ವಿಷಯದಲ್ಲಿ ಈ ‘ಶಕ್ತಿ’ ಪ್ರಯೋಜನಕ್ಕೆ ಬಂದಿಲ್ಲ ಎಂದು ಕೆಲವು ಜಿಲ್ಲೆಗಳ ಯುವ ಅಧಿಕಾರಿಗಳು ದೂರಿದ್ದಾರೆ.

‘ಸಂಘಟನೆಗೆ ಯುಪಿಎಸ್‌ಸಿ ನೇಮಕಾತಿ ನಡೆಸುತ್ತದೆ. ಕೋವಿಡ್–19ಕ್ಕೂ ಮೊದಲು 460 ಜಿಲ್ಲಾ ಯುವ ಅಧಿಕಾರಿಗಳ ನೇಮಕಾತಿ ಆಗಿತ್ತು. 200 ಅಧಿಕಾರಿಗಳ ನೇಮಕಾತಿಗೆ ಪ್ರಕ್ರಿಯೆ ಆರಂಭವಾಗುವ ಸಾಧ್ಯತೆ ಕಾಣುತ್ತಿದೆ. ಇದು ಪೂರ್ಣಗೊಂಡರೆ ಕರ್ನಾಟಕದ ಎಲ್ಲ ಜಿಲ್ಲೆಗಳಿಗೂ ಅಧಿಕಾರಿಗಳು ಸಿಗುವ ನಿರೀಕ್ಷೆ ಇದೆ’ ಎಂದು ಎನ್‌ವೈಕೆಎಸ್ ಬೆಂಗಳೂರು ಪ್ರಾದೇಶಿಕ ಕಚೇರಿಯ ನಿರ್ದೇಶಕ ಎಂ.ಎನ್.ನಟರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಯೋಧರಿಗೆ ಅಭಿನಂದನೆ– ಭೂತಾಯಿಗೆ ನಮನ: ದೇಶದ ಯೋಧರ ತ್ಯಾಗವನ್ನು ನೆನಪಿಸಿಕೊಳ್ಳುವ ‘ಪಂಚ ಪ್ರಾಣ್’ ಎಂಬ ಹೊಸ ಯೋಜನೆ ಇದೀಗ ಎನ್‌ವೈಕೆಎಸ್ ಹೆಗಲಿಗೆ ಬಿದ್ದಿದೆ. ಯೋಧರಿಗೆ ಅಭಿನಂದನೆ; ಭೂತಾಯಿಗೆ ನಮನ ಎಂಬ ಹೆಸರಿನ ಈ ಕಾರ್ಯಕ್ರಮ ಆಗಸ್ಟ್ 9ರಂದು ಆರಂಭಗೊಳ್ಳಲಿದೆ. ದೇಶದ ಎಲ್ಲ ಜಿಲ್ಲೆಗಳ ಗ್ರಾಮ ಪಂಚಾಯಿತಿಗಳಲ್ಲಿ ಏಕಕಾಲದಲ್ಲಿ ನಡೆಯುವ ಕಾರ್ಯಕ್ರಮದಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 75 ಗಿಡಗಳನ್ನು ನೆಡಲಾಗುವುದು. ಯೋಧರು ಮತ್ತು ಸ್ವಾತಂತ್ರ್ಯ ಯೋಧರಿಗೆ ಸನ್ಮಾನ ನಡೆಯಲಿದೆ. ದೆಹಲಿಯಲ್ಲಿ ನಡೆಯಲಿರುವ ದೇಶದ ವೈವಿಧ್ಯ ಬಿಂಬಿಸುವ ಪೋಷಾಕು ಪೆರೇಡ್‌ನಲ್ಲಿ ಪಾಲ್ಗೊಳ್ಳಲು ಪ್ರತಿ ಬ್ಲಾಕ್‌ನಿಂದ ಒಬ್ಬ ಯುವ ಪ್ರತಿನಿಧಿಯನ್ನು ಆರಿಸಿ ಕಳುಹಿಸಲಾಗುವುದು ಎಂದು ಎಂ.ಎನ್. ನಟರಾಜ್ ತಿಳಿಸಿದರು.

ಜಲಾಶಯಗಳ ಒಳಹರಿವು ಏರಿಕೆ

ಒಂದನೇ ಪುಟದಿಂದ...

ಭಾರತೀತೀರ್ಥ ರಸ್ತೆ, ಕುರುಬಗೆರೆ ರಸ್ತೆ ಮುಳುಗಡೆಯಾಗಿದೆ.

ಬೆಳೆಹಾನಿ: ಹುಬ್ಬಳ್ಳಿ ಜಿಲ್ಲೆಯ ಅಗಡಿ ಗ್ರಾಮದ ಹೊಲದಲ್ಲಿ ಜಲಾವೃತವಾಗಿದ್ದು, ಸೋಯಾಬಿನ್ ಬೆಳೆ ಹಾಳಾಗಿದೆ. ಜೊಯಿಡಾ ಭಾಗದ ಕದ್ರಾ ಜಲಾಶಯದಿಂದ ಹೆಚ್ಚಿನ ನೀರು ಹೊರಬಿಟ್ಟಿದ್ದರಿಂದ ನದಿಪಾತ್ರದ ಕೃಷಿ ಭೂಮಿ ಜಲಾವೃತಗೊಂಡಿದೆ.

ಶಿರಸಿ ತಾಲ್ಲೂಕಿನ ವರದಾ ನದಿ ಭರ್ತಿಯಾಗಿದ್ದು, ನದಿ ಇಕ್ಕೆಲಗಳ ಜಮೀನಿಗೆ ನೀರು ನುಗ್ಗಿದ್ದು ಅಡಿಕೆ ತೋಟಗಳು ಜಲಾವೃತಗೊಂಡಿವೆ. ಮುಂಡಗೋಡ-ಯಲ್ಲಾಪುರ ರಾಜ್ಯ ಹೆದ್ದಾರಿ ಮೇಲೆ ಹರಿದು ರಸ್ತೆ ಪಕ್ಕದ ಭತ್ತದ ಗದ್ದೆಗಳಿಗೆ ನೀರು ನುಗ್ಗಿದೆ. ರಾಣೇಬೆನ್ನೂರ ತಾಲೂಕಿನ ಬಿಲ್ಲಹಳ್ಳಿಯ ಕಾಲುವೆ ಒಡೆದು ಕೃಷಿ ಭೂಮಿಗೆ ನೀರು ನುಗ್ಗಿದೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಬಳಿ ಭತ್ತದ ಗದ್ದೆಯಲ್ಲಿದ್ದ ಸಸಿ ಮಡಿ ಕೊಚ್ಚಿ ಹೋಗಿದೆ.

ಕೊಡಗು ಜಿಲ್ಲೆಯಲ್ಲಿ ಹಲವೆಡೆ ರಸ್ತೆಗಳು ಜಲಾವೃತಗೊಂಡಿವೆ. ವಿರಾಜಪೇಟೆಯ ಭೇತ್ರಿಯ ಕಿಗ್ಗಾಲು ರಸ್ತೆಯ ಬದಿಯಲ್ಲಿ ಕಾವೇರಿ ನದಿ ತುಂಬಿ ಹರಿಯುತ್ತಿದ್ದು, ನೀರಿನ ಮಟ್ಟ ಏರುತ್ತಲೇ ಇದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಅನೇಕ ಕಡೆ ರಸ್ತೆಗೆ ಮರಗಳು ಬಿದ್ದು ಸಂಚಾರಕ್ಕೆ ಹಾನಿ ಉಂಟಾಯಿತು.

ಸ್ನಾನಘಟ್ಟ ಮುಳುಗಡೆ: ಘಟ್ಟ ಪ್ರದೇಶಗಳಲ್ಲಿ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿ ಕುಕ್ಕೆ ಸುಬ್ರಹ್ಮಣ್ಯದ ಕುಮಾರಧಾರಾ ಸ್ನಾನಘಟ್ಟ ಮುಳುಗಡೆಯಾಗಿದೆ. ಅಲ್ಲಿನ ಲಗೇಜ್ ಕೊಠಡಿ, ಶೌಚಾಲಯಗಳೆಲ್ಲ ಜಲಾವೃತವಾಗಿದ್ದರಿಂದ ಭಕ್ತರು ತೀರ್ಥ ಸ್ನಾನಕ್ಕೆ ಸಮಸ್ಯೆ ಎದುರಿಸಿದರು.

‘ಸಿದ್ದನೆಪ’ ಹೇಳಬೇಡಿ: ಎಚ್‌ಡಿಕೆ

ನೈಸ್ ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆಯಲು ಮುಖ್ಯಮಂತ್ರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದನೆಪ’ ಹೇಳದೆ ನೈಸ್ ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆದು, ಬದ್ಧತೆ ತೋರಿಸಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

‘ಸಮ್ಮಿಶ್ರ ಸರ್ಕಾರ (ಜೆಡಿಎಸ್–ಕಾಂಗ್ರೆಸ್) ಇದ್ದಾಗ ನೈಸ್ ಹಗರಣದ ತನಿಖೆ ನಡೆಸಲು ಕಾಂಗ್ರೆಸ್‌ನವರು ಕೈಕಟ್ಟಿದ್ದರು’ ಎನ್ನುವ ಕುಮಾರಸ್ವಾಮಿ ಅವರ ಆರೋಪ ಸುಳ್ಳು’ ಎಂದು ಸಿದ್ದರಾಮಯ್ಯ ಶನಿವಾರ ಹೇಳಿದ್ದರು.

ಅದಕ್ಕೆ, ‘ನೈಸಿಗೆ ನ್ಯಾಯ ಕೊಡಿ’ ಎಂಬ ಹ್ಯಾಷ್ ಟ್ಯಾಗ್‌ನಲ್ಲಿ ಸರಣಿ ಟ್ವೀಟ್ ಮಾಡಿ ತಿರುಗೇಟು ನೀಡಿರುವ ಕುಮಾರಸ್ವಾಮಿ, ‘ಸಿದ್ದರಾಮಯ್ಯರ-ವರೇ, ನೀವು ಈಗ ಕರ್ನಾಟಕದ ಮುಖ್ಯಮಂತ್ರಿ. ನನಗೂ ಮುಖ್ಯಮಂತ್ರಿ, ಮಹಾದೇವಪ್ಪ ಅವರಿಗೂ ಮುಖ್ಯಮಂತ್ರಿ! ಕಾಕಾ ಪಾಟೀಲರಿಗೂ ಮುಖ್ಯಮಂತ್ರಿ!! ಇಂಥಾ ನಿಮ್ಮನ್ನು ‘ಸುಳ್ಳುರಾಮಯ್ಯ’ ಎಂದು ಕರೆಯುವುದು ನನಗೆ ಸುತಾರಾಂ ಇಷ್ಟವಿಲ್ಲ. ಏಕೆಂದರೆ, ನಿಮ್ಮ ಹೆಸರಿನಲ್ಲೇ ‘ರಾಮ’ರಿದ್ದಾರೆ. ತಾವು ‘ಸತ್ಯರಾಮಯ್ಯ’ನವರೇ ಆಗಿದ್ದರೆ, ಸ್ವತಃ ತಾವುಗಳೇ ನೇಮಿಸಿದ್ದ, ತಮ್ಮದೇ ಸರ್ಕಾರದ ಕಾನೂನು ಸಚಿವರೇ ಮುಖ್ಯಸ್ಥರಾಗಿದ್ದ ಸದನ ಸಮಿತಿ ನೀಡಿದ್ದ ನೈಸ್ ಕರ್ಮ ಕಥೆಯನ್ನು ಪುರುಸೊತ್ತು ಮಾಡಿಕೊಂಡು ಪಾರಾಯಣ ಮಾಡಿ’ ಎಂದು ಸಲಹೆ ಮಾಡಿದ್ದಾರೆ.

‘ನೈಸ್ ಅಕ್ರಮ ತನಿಖೆಗೆ ನಾನೇನು ಮಾಡಿದ್ದೆ ಎಂದು ಮುಖ್ಯಮಂತ್ರಿ ಸಾಹೇಬರು ಕೇಳಿದ್ದಾರೆ. ಈ ಬಾಲಿಶ ಪ್ರಶ್ನೆಗೆ ಗೌರವದಿಂದಲೇ ಉತ್ತರಿಸುವೆ. ನಾನು ಮುಖ್ಯಮಂತ್ರಿ ಆಗಿದ್ದಾಗ ನನ್ನ ಜತೆಗಿದ್ದ ಅಡ್ವೋಕೇಟ್ ಜನರಲ್ ಮತ್ತು ಅವರ ಕಾನೂನು ತಂಡ ನೈಸ್ ದೌಲತ್ತಿನ ಹುಟ್ಟಡಗಿಸಿತ್ತು. ಅದುವರೆಗೆ ಅಧಿಕಾರಿಗಳನ್ನು ಬೆದರಿಸಿಟ್ಟುಕೊಂಡಿದ್ದ ಆ ಕಂಪನಿಗೆ ಬೊಂಬೆ ತೋರಿಸಿದ್ದೆವು’ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ವಿವಿಧ ನ್ಯಾಯಾಲಯಗಳಲ್ಲಿ ಹೂಡಲಾಗಿದ್ದ ಎಲ್ಲ ನಿಂದನಾ ಅರ್ಜಿಗಳನ್ನು 2019 ಜುಲೈನಲ್ಲಿ ಸುಪ್ರೀಂ ಕೋರ್ಟ್ ವಜಾ ಮಾಡಿತ್ತು. ಹಿಂದಿನ ಬಿಜೆಪಿ ಸರ್ಕಾರವೂ ಈ ಲೂಟಿ ಕಂಪನಿಯ ರೆಕ್ಕೆಪುಕ್ಕ ಕತ್ತರಿಸಿತ್ತು. ಅಂದಿಗೇ (2018) ನೈಸಿನ ಕೊಚ್ಚೆಯಲ್ಲಿ ಹೊರಳಾಡಿ ಪೊಗದಸ್ತಾಗಿ ಮೇಯ್ದು ಬಲಿತಿದ್ದ ಪ್ರಾಣಿಗಳನ್ನು ಎದುರು ಹಾಕಿಕೊಂಡು ನಾನು ತೆಗೆದುಕೊಂಡ ರಿಸ್ಕ್ ಸಣ್ಣದೇನಲ್ಲ . ನನ್ನ ಮೇಲೆ ಬಂದ ಒತ್ತಡಗಳ ಬಗ್ಗೆ ನಿಮಗೂ ಮಾಹಿತಿ ಇರಬಹುದು. ಆಗ ನೀವು ಮತ್ತು ನಿಮ್ಮ ತಂಡ ನನಗೆ ಕೊಟ್ಟ ‘ನಿತ್ಯ ಕಿರುಕುಳ’ವನ್ನು ಮರೆಯಲಾದೀತೆ?’ ಎಂದು ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಹೇಳಿದ್ದಾರೆ.

‘ನಿಮ್ಮ ಹಂಗಿನಲ್ಲಿದ್ದ ನನಗೆ, ನಿಮ್ಮದೇ ಪಕ್ಷದವರ ವಿರುದ್ಧ ತನಿಖೆ ನಡೆಸಿ, ನೈಸ್ ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆಯುವ ದಮ್ಮು ತಾಕತ್ತು ಇರಲಿಲ್ಲ, ನಿಜ ಒಪ್ಪಿಕೊಳ್ಳುತ್ತೇನೆ. ಆದರೆ, ನಿಮ್ಮದು ಪೂರ್ಣ ಬಹುಮತದ ಬಲಿಷ್ಠ ಸರ್ಕಾರ, ನುಡಿದಂತೆ ನಡೆಯುವ ‘ಅಪರ ಹರಿಶ್ಚಂದ್ರ’ನ ಸರ್ಕಾರ! ಹೌದಲ್ಲವೇ’ ಎಂದು ಮಾಜಿ ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ.

27 ರಂದು ಸಿಎಲ್‌ಪಿ ಸಭೆ: ಖರ್ಗೆ ಭಾಗಿ

ಬೆಂಗಳೂರು: ಕಾಂಗ್ರೆಸ್ ವಿರುದ್ಧ ಜಂಟಿ ಹೋರಾಟಕ್ಕೆ ಬಿಜೆಪಿ, ಜೆಡಿಎಸ್ ನಿರ್ಧರಿಸಿದ ಬೆನ್ನಲ್ಲೆ, ಇದೇ 27ರಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಹಮ್ಮಿಕೊಳ್ಳಲಾಗಿದೆ. ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡಾ ಭಾಗವಹಿಸಲಿದ್ದಾರೆ.

ಹೋಟೆಲ್ ರ್‍ಯಾಡಿಸನ್ ಬ್ಲೂನಲ್ಲಿ (ಏಟ್ರಿಯಾ ಹೋಟೆಲ್) ಸಂಜೆ 6.30ಕ್ಕೆ ಸಭೆ ನಡೆಯಲಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ಸಭಾನಾಯಕ ಎನ್.ಎಸ್. ಬೋಸರಾಜು, ಕೆಪಿಸಿಸಿ ಕಾರ್ಯಾಧ್ಯಕ್ಷರು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಹರಿಪ್ರಸಾದ್ ಅಮಾನತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವಾಗ್ದಾಳಿ ನಡೆಸುವ ಮೂಲಕ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾದ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರನ್ನು ಪಕ್ಷದಿಂದ ಅಮಾನತು ಮಾಡಬೇಕು’ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ಕೋಶದ ಮಾಜಿ ಅಧ್ಯಕ್ಷ ಎಲ್. ಆರ್. ಅನಂತ್ ಆಗ್ರಹಿಸಿದ್ದಾರೆ.

‘ಸಿದ್ದರಾಮಯ್ಯ ವಿರುದ್ಧ ಮಾತನಾಡಲು ಹರಿಪ್ರಸಾದ್ ಅವರಿಗೆ ಯಾವ ನೈತಿಕ ಹಕ್ಕಿದೆ? ವಿಧಾನಸಭೆ, ಲೋಕಸಭೆ ಚುನಾವಣೆ ಗೆಲ್ಲಲು ಸಾಧ್ಯವಾಗದ ಅವರನ್ನು ಪಕ್ಷ ಐದು ಬಾರಿ ರಾಜ್ಯಸಭಾ ಸದಸ್ಯರಾಗಿ ನಾಮನಿರ್ದೇಶನ ಮಾಡಿದೆ. ಸುಮಾರು 50 ವರ್ಷ ಅವರು ಅಧಿಕಾರ ಅನುಭವಿಸಿದರು. ಆದರೆ, ಕಾಂಗ್ರೆಸ್ ಪಕ್ಷಕ್ಕೆ ಅವರ ಕೊಡುಗೆ ಏನು? ಗುಜರಾತ್ ಮತ್ತು ಬಿಹಾರದಲ್ಲಿ ಹರಿಪ್ರಸಾದ್ ಪಕ್ಷದ ಉಸ್ತುವಾರಿ ವಹಿಸಿದ್ದರು. ಆದರೆ, ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ದಯನೀಯವಾಗಿ ಸೋತಿತು’ ಎಂದು ಅವರು ಹೇಳಿದ್ದಾರೆ.

‘ಹರಿಪ್ರಸಾದ್ ಅವರು ತಮ್ಮ ಕಾಂಗ್ರೆಸ್ ವಿರೋಧಿ ಚಟುವಟಿಕೆಯನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಕಾಂಗ್ರೆಸ್‌ನಿಂದ ಅವರನ್ನು ಅಮಾನತುಗೊಳಿಸುವಂತೆ ಇಡೀ ಹಿಂದುಳಿದ ವರ್ಗ ಅವರ ವಿರುದ್ಧ ಆಂದೋಲನ ಹಮ್ಮಿಕೊಳ್ಳಲಿದೆ’ ಎಂದಿದ್ದಾರೆ.

ದೇವಾಂಗ ಸಂಘದ ಕಾರ್ಯಕ್ರಮದಲ್ಲಿ ಸಚಿವ ಶಿವರಾಜ ತಂಗಡಗಿ

‘ಕಾಂತರಾಜು ವರದಿ ಜಾರಿಯಾದರೆ ನ್ಯಾಯ’

ಪ್ರಜಾವಾಣಿ ವಾರ್ತೆ


ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ದಯಾನಂದಪುರಿ ಸ್ವಾಮೀಜಿ, ಸಚಿವ ಶಿವಾನಂದ ಪಾಟೀಲ, ಮಾಜಿ ಶಾಸಕ ಎಂ.ಡಿ. ಲಕ್ಷ್ಮಿನಾರಾಯಣ್, ರಾಜ್ಯ ದೇವಾಂಗ ಸಂಘದ ಅಧ್ಯಕ್ಷ ರವೀಂದ್ರ ಪಿ. ಕಲಬುರ್ಗಿ, ರಾಜ್ಯ ದೇವಾಂಗ ನೌಕರರ ಸಂಘದ ಅಧ್ಯಕ್ಷ ಕೆ.ಬಿ.ಭಾಸ್ಕರಯ್ಯ, ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಡಾ.ಶ್ರೀನಿವಾಸ್ ಬಳ್ಳಿ ಇದ್ದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜು ನೇತೃತ್ವದಲ್ಲಿ ನಡೆದಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ (ಜಾತಿ ಗಣತಿ) ವರದಿಯಲ್ಲಿನ ಶಿಫಾರಸುಗಳು ಅನುಷ್ಠಾನವಾದರೆ ಹಿಂದುಳಿದ ವರ್ಗಗಳಿಗೆ ನ್ಯಾಯ ದೊರೆಯಲಿದೆ. ಈ ವರದಿಯ ಅನುಷ್ಠಾನದಿಂದ ಅಸಮಾನತೆ ತೊಡೆದು ಹಾಕುವುದು ಸಾಧ್ಯವಾಗಲಿದೆ’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಹೇಳಿದರು.

ನಗರದಲ್ಲಿ ಭಾನುವಾರ ರಾಜ್ಯ ದೇವಾಂಗ ಸಂಘ ಹಾಗೂ ರಾಜ್ಯ ದೇವಾಂಗ ನೌಕರರ ಸಂಘವು ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಎಚ್. ಕಾಂತರಾಜು ಆಯೋಗದ ವರದಿಯು ಸಿದ್ಧಗೊಂಡಿತ್ತು. ರಾಜಕೀಯ ಕಾರಣಕ್ಕೆ ವರದಿ ಇನ್ನೂ ಬಹಿರಂಗ-ಗೊಂಡಿಲ್ಲ. ಹಿಂದಿನ ಸರ್ಕಾರಗಳು ವರದಿ ಸ್ವೀಕರಿಸುವ ಮನಸ್ಸು ಮಾಡಲಿಲ್ಲ. ಆಯೋಗದ ವರದಿಯಿಂದ ಪ್ರತಿಯೊಂದು ಸಮಾಜದ ಜನಸಂಖ್ಯೆ, ಶಿಕ್ಷಣ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಯು ಅಂಕಿ–ಅಂಶ ಸಹಿತ ಸ್ಪಷ್ಟವಾಗಿ ತಿಳಿಯಲಿದೆ’ ಎಂದು ಹೇಳಿದರು.

‘ದೇವಾಂಗ ಸಮಾಜಕ್ಕೆ ರಾಜಕೀಯ ಪ್ರಾತಿನಿಧ್ಯ ನೀಡುವುದು ಅಗತ್ಯವಾಗಿದೆ. ಈ ವಿಷಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಲಾಗುವುದು’ ಎಂದರು.

ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ‘ನೇಕಾರರ ಗಣತಿ ಕಾರ್ಯಕ್ಕೆ ಸರ್ಕಾರವು ಸೂಚನೆ ನೀಡಿದೆ. ಇದಕ್ಕೆ ಸಮುದಾಯದವರು ಸಹಕಾರ ನೀಡಬೇಕು’ ಎಂದು ಮನವಿ ಮಾಡಿದರು.

ಹಂಪಿ ಹೇಮಕೂಟದ ಗಾಯಿತ್ರಿ ಪೀಠ ಮಹಾಸಂಸ್ಥಾನದ ದಯಾನಂದಪುರಿ ಸ್ವಾಮೀಜಿ ಮಾತನಾಡಿ, ‘ವರ್ಷದಿಂದ ವರ್ಷಕ್ಕೆ ಪ್ರತಿಭಾ ಪುರಸ್ಕಾರ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಇದು ಉತ್ತಮ ಬೆಳವಣಿಗೆ. ಪ್ರತಿಭಾ ಪುರಸ್ಕಾರ ಸ್ವೀಕರಿಸಿದವರು ಉನ್ನತ ಸ್ಥಾನಕ್ಕೇರಿ ಸಮಾಜದ ಅಭ್ಯುದಯಕ್ಕೆ ಶ್ರಮಿಸಬೇಕು’ ಎಂದು ಹೇಳಿದರು.

2022–23ನೇ ಶೈಕ್ಷಣಿಕ ಸಾಲಿನಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

> **ಸಮಾಜದ ಸಂಘಟನೆಯ ಜತೆಗೆ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು ಮುಖ್ಯ. ಶಿಕ್ಷಣದಿಂದ ಸಮಾಜ ಪ್ರಬಲ ಆಗಲಿದೆ**
> **ಶಿವರಾಜ ತಂಗಡಗಿ**
> ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

> **ಮನುಕುಲಕ್ಕೆ ವಸ್ತ್ರ ನೀಡುವ ದೇವಾಂಗ ಸಮುದಾಯಕ್ಕೆ ಸರ್ಕಾರವು ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು**
> **ರವೀಂದ್ರ ಪಿ. ಕಲಬುರ್ಗಿ**
> ಅಧ್ಯಕ್ಷ, ಕರ್ನಾಟಕ ರಾಜ್ಯ ದೇವಾಂಗ ಸಂಘ

ಅಫಜಲಪುರ: ಎಟಿಎಂನಿಂದ ₹14 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): ಪಟ್ಟಣದ ಕಾಳಿಕಾ ದೇವಸ್ಥಾನದ ಹತ್ತಿರವಿರುವ ಕೆನರಾ ಬ್ಯಾಂಕ್ ಎಟಿಎಂನಿಂದ ಭಾನುವಾರ ನಸುಕಿನ ಜಾವ ಕಳ್ಳತನವಾಗಿದೆ. ಕೇವಲ 9 ನಿಮಿಷಗಳಲ್ಲಿ ಕಳ್ಳರು ₹14.86 ಲಕ್ಷ ದೋಚಿ ಪರಾರಿಯಾಗಿದ್ದಾರೆ.

ಭಾನುವಾರ ನಸುಕಿನ ಜಾವ 3 ಗಂಟೆ 24 ನಿಮಿಷದ ವೇಳೆ ಎಟಿಎಂನಿಂದ ಹಣ ಕಳವು ಮಾಡಿರುವುದು ಸಿ.ಸಿ. ಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ₹14.86 ಲಕ್ಷ ಹಣವನ್ನು ಕಳ್ಳರು ದೋಚಿಕೊಂಡು ಹೋಗಿದ್ದಾರೆ ಎಂದು ತಿಳಿದು ಬಂದಿದೆ. ಮುಖವನ್ನು ಬಿಳಿ ಬಣ್ಣದ ಬಟ್ಟೆಯಿಂದ ಮುಚ್ಚಿದ್ದ ನಾಲ್ಕು ಜನ ಬೊಲೆರೊ ವಾಹನದಲ್ಲಿ ಬಂದಿದ್ದರು.

ನಿರ್ಲಕ್ಷ್ಯ: ಎಟಿಎಂ ಭದ್ರತೆಗಾಗಿ ಬ್ಯಾಂಕ್‌ನ ಆಡಳಿತ ಮಂಡಳಿ ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡದೇ ನಿರ್ಲಕ್ಷ್ಯ ತೋರಿದೆ ಎಂದು ಗ್ರಾಹಕರು ಆಕ್ರೋಶ ವ್ಯಕ್ತಪಡಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನೀವು ಕುಟುಂಬದ ಅತ್ಯಂತ ಪ್ರಮುಖ ಭಾಗವಾಗಿದ್ದೀರಿ. ಹಾಗಾಗಿ, ಮೊದಲು ನಿಮ್ಮ ಬಗ್ಗೆ ಕಾಳಜಿ ವಹಿಸಿ. ಆಗ ಕುಟುಂಬದ ಇತರರೆಲ್ಲರ ಬಗ್ಗೆ ಇನ್ನೂ ಹೆಚ್ಚು ಕಾಳಜಿ ವಹಿಸುವ ಸಾಮರ್ಥ್ಯ ನಿಮಗೆ ಲಭಿಸುತ್ತದೆ.

–ದೀಪಕ್ ಚೋಪ್ರಾ

‘ರಾಜಕೀಯ ಕೆಲಸ’ಕ್ಕೆ ಐಎಎಸ್ ಬಳಕೆ ಸರ್ಕಾರ ಎಡವಿರುವುದು ಸ್ಪಷ್ಟ

ಬೆಂಗಳೂರಿನಲ್ಲಿ ಈಚೆಗೆ ನಡೆದ ವಿರೋಧ ಪಕ್ಷಗಳ ನಾಯಕರ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ರಾಜಕೀಯ ಪ್ರಮುಖರನ್ನು ಬರಮಾಡಿಕೊಳ್ಳಲು ರಾಜ್ಯ ಸರ್ಕಾರವು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿದ ಕ್ರಮವು ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ವಿರೋಧಕ್ಕೆ ಕಾರಣವಾಗಿದೆ. 2024ರ ಲೋಕಸಭಾ ಚುನಾವಣೆಯನ್ನು ಒಟ್ಟಾಗಿ ಎದುರಿಸಲು ಒಂದು ಮೈತ್ರಿಕೂಟವನ್ನು ರಚಿಸಿಕೊಳ್ಳುವ ಉದ್ದೇಶದಿಂದ ಈ ರಾಜಕೀಯ ಪ್ರಮುಖರು ಬೆಂಗಳೂರಿಗೆ ಬಂದಿದ್ದರು. ಅಧಿಕಾರಿಗಳ ನಿಯೋಜನೆ ವಿಚಾರವಾಗಿ ವಿಧಾನ ಸಭೆಯಲ್ಲಿ ಗದ್ದಲ ಸೃಷ್ಟಿಯಾಗಿತ್ತು. ಗದ್ದಲ ಎಬ್ಬಿಸಿದ ಕಾರಣಕ್ಕಾಗಿ ಬಿಜೆಪಿಯ 10 ಮಂದಿ ಶಾಸಕರನ್ನು ಈ ಬಜೆಟ್ ಅಧಿವೇಶನ ಮುಗಿಯುವವರೆಗೆ ಸ್ಪೀಕರ್ ಯು.ಟಿ. ಖಾದರ್ ಅವರು ಅಮಾನತು ಮಾಡಿದ್ದರು.ರಾಜಕೀಯ ಮುಖಂಡರನ್ನು ಬರಮಾಡಿಕೊಳ್ಳಲು ಐಎಎಸ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂಬ ವಿಚಾರವನ್ನು ಮೊದಲು ಪ್ರಸ್ತಾಪಿಸಿದ್ದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ. 29 ಅಧಿಕಾರಿಗಳನ್ನು ಈ ಕೆಲಸಕ್ಕೆ ಬಳಸಿಕೊಳ್ಳುವ ಮೂಲಕ ಸರ್ಕಾರವು ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಅವರು ಸಾಮಾಜಿಕ ಜಾಲತಾಣಗಳ ಮೂಲಕ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ರಾಜಕೀಯ ಪ್ರಮುಖರು ಬಂದಿದ್ದು ಸರ್ಕಾರದ ಯಾವುದೇ ಅಧಿಕೃತ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಅಲ್ಲ; ಅವರು ಬಂದಿದ್ದು ರಾಜಕೀಯ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲಿಕ್ಕೆ ಎಂದು ಕುಮಾರಸ್ವಾಮಿ ಹೇಳಿದ್ದರು. ಇಂತಹ ರಾಜಕೀಯ ಸಭೆಗಳು ರಾಜ್ಯದ ಪಾಲಿಗೆ ಹೊಸವಲ್ಲವಾದರೂ, ಈ ಸಭೆಗಳಲ್ಲಿ ಪಾಲ್ಗೊಳ್ಳುವುದಕ್ಕೆ ಬರುವ ನಾಯಕರನ್ನು ಪಕ್ಷದ ಪದಾಧಿಕಾರಿಗಳೇ ಸ್ವಾಗತಿಸುತ್ತಾರೆ, ಸರ್ಕಾರದ ಹಿರಿಯ ಅಧಿಕಾರಿಗಳು ಆ ಕೆಲಸ ಮಾಡುವುದಿಲ್ಲ ಎಂದು ಕುಮಾರಸ್ವಾಮಿ ನೆನಪಿಸಿದರು.



ಅಧಿಕಾರಿಗಳನ್ನು ಈ ರೀತಿ ದುರ್ಬಳಕೆ ಮಾಡಿಕೊಳ್ಳುವುದು ಪುನರಾವರ್ತನೆ ಆಗದಂತೆ ಸರ್ಕಾರ ಎಚ್ಚರ ವಹಿಸಬೇಕು

ಆದರೆ, ಅಧಿಕಾರಿಗಳನ್ನು ನೇಮಕ ಮಾಡಿದ್ದು ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳನ್ನು ಸ್ವಾಗತಿಸುವುದಕ್ಕೆ ಮಾತ್ರ; ಹೀಗೆ ನಿಯೋಜನೆ ಮಾಡಲು ಶಿಷ್ಟಾಚಾರದ ಪ್ರಕಾರ ಅವಕಾಶ ಇದೆ ಎಂದು ರಾಜ್ಯ ಸರ್ಕಾರವು ಹೇಳಿದೆ. ಇಷ್ಟನ್ನು ಹೊರತುಪಡಿಸಿದರೆ, ಈ ಸಭೆಯ ವಿಚಾರದಲ್ಲಿ ಸರ್ಕಾರವು ಯಾವ ಪಾತ್ರವನ್ನೂ ವಹಿಸಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮರ್ಥನೆ ನೀಡಿದ್ದಾರೆ. ಆದರೆ ಅವರ ಸಮರ್ಥನೆಯನ್ನು ವಿರೋಧ ಪಕ್ಷಗಳು ಒಪ್ಪಿಲ್ಲ. ಹೆಚ್ಚಿನವರಿಗೆ ಗೊತ್ತೇ ಇಲ್ಲದ, ಯಾವುದೇ ಸಾಂವಿಧಾನಿಕ ಹುದ್ದೆ ಹೊಂದಿಲ್ಲದ ಹಾಗೂ ಸರ್ಕಾರದ ಕಡೆಯಿಂದ ಸ್ವಾಗತ ಪಡೆಯಲು ಅರ್ಹರಲ್ಲದ ರಾಜಕೀಯ ಪ್ರಮುಖರನ್ನು ಸ್ವಾಗತಿಸಲಿಕ್ಕೂ ಸರ್ಕಾರದ ಅಧಿಕಾರಿಗಳನ್ನು ಬಳಸಿಕೊಳ್ಳಲಾಗಿದೆ ಎಂದು ಅವು ಆರೋಪಿಸಿವೆ. ರಾಜ್ಯಕ್ಕೆ ಬಂದ ಅತಿಥಿಗಳನ್ನು ಗೌರವದಿಂದ ನಡೆಸಿಕೊಳ್ಳುವುದು ಸರ್ಕಾರದ ಜವಾಬ್ದಾರಿ ಎಂದು ಹೇಳಿರುವ ಸಿದ್ದರಾಮಯ್ಯ ಅವರು, ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ, ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳಲು ಬಂದವರನ್ನು ಕೂಡ ಸರ್ಕಾರದ ಅತಿಥಿಗಳು ಎಂಬಂತೆ ನೋಡಿಕೊಂಡಿತ್ತು ಎಂದು ಹೇಳಿದ್ದಾರೆ.

ಸಾಂವಿಧಾನಿಕ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳ ವಿಚಾರದಲ್ಲಿ ಕೆಲವು ಶಿಷ್ಟಾಚಾರಗಳನ್ನು ಪಾಲಿಸಬೇಕಾಗುತ್ತದೆ ಎಂಬುದು ನಿಜ. ಇಂತಹ ಹುದ್ದೆಗಳಲ್ಲಿ ಇರುವವರು ಖಾಸಗಿ ಭೇಟಿ ನೀಡುವ ಸಂದರ್ಭದಲ್ಲಿಯೂ ಈ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಸರ್ಕಾರಕ್ಕೆ ಯಾವ ರೀತಿಯಲ್ಲಿಯೂ ಸಂಬಂಧಪಡದ, ಯಾವುದೇ ಕ್ಷೇತ್ರದ ಪ್ರಮುಖ ವ್ಯಕ್ತಿ ರಾಜ್ಯಕ್ಕೆ ಭೇಟಿ ನೀಡಿದಾಗ ಅವರನ್ನು ಸರ್ಕಾರದ ಅತಿಥಿ ಎಂದು ಕಾಣಲು ಅವಕಾಶ ಇದೆ. ಅವರು ಸರ್ಕಾರದಲ್ಲಿ ಯಾವುದೇ ಹುದ್ದೆಯನ್ನು ಹೊಂದದೆ ಇದ್ದರೂ, ಅವರನ್ನು ಸರ್ಕಾರದ ವತಿಯಿಂದ ಬರಮಾಡಿಕೊಳ್ಳಲು, ಅವರಿಗೆ ಆತಿಥ್ಯ ನೀಡಲು ಅವಕಾಶ ಇದೆ. ಆದರೆ, ಶುದ್ಧ ರಾಜಕೀಯ ಸಭೆಯೊಂದರಲ್ಲಿ ಭಾಗವಹಿಸಲು ಬಂದ, ಹೆಚ್ಚು ಜನಪ್ರಿಯರಲ್ಲದ ನಾಯಕರನ್ನು ಬರಮಾಡಿಕೊಳ್ಳಲಿಕ್ಕೂ ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿದ್ದು ಒಪ್ಪಬಹುದಾದ ಕೆಲಸ ಅಲ್ಲ. ಈ ಹಿಂದೆ ಬಿಜೆಪಿ ಅಥವಾ ಬೇರೆ ಯಾವುದೇ ಪಕ್ಷ ಅಧಿಕಾರದಲ್ಲಿ ಇದ್ದಾಗ ಇದೇ ರೀತಿ ಆಗಿದೆ ಎಂಬುದು ಈಗ ಮಾಡಿರುವುದಕ್ಕೆ ಸಮರ್ಥನೆ ಆಗುವುದಿಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ತಮ್ಮ ಅಧಿಕಾರವನ್ನು ಬಳಸಿ, ಹಿರಿಯ ಐಎಎಸ್ ಅಧಿಕಾರಿಗಳನ್ನು ಈ ಕೆಲಸಕ್ಕೆ ನಿಯೋಜನೆ ಮಾಡದಂತೆ ನೋಡಿಕೊಳ್ಳಬಹುದಿತ್ತು. ಅವರನ್ನು ನಿಯೋಜಿಸಿದ್ದುದು ಒಂದು ಬಗೆಯಲ್ಲಿ ‘ರಾಜಕೀಯ ಕೆಲಸ’ಗಳಿಗೆ. ಇಲ್ಲಿ ರಾಜ್ಯ ಸರ್ಕಾರ ತಪ್ಪು ಮಾಡಿರುವುದು ಸ್ಪಷ್ಟ. ಅಧಿಕಾರಿಗಳನ್ನು ಈ ರೀತಿ ದುರ್ಬಳಕೆ ಮಾಡಿಕೊಳ್ಳುವುದು ಪುನರಾವರ್ತನೆ ಆಗದಂತೆ ಸರ್ಕಾರ ಎಚ್ಚರ ವಹಿಸಬೇಕು. ಐಎಎಸ್ ಅಧಿಕಾರಿಗಳು ಮಾಡುವುದಕ್ಕೆ, ಬೇರೆ ಬೇರೆ ಪಕ್ಷಗಳ ಮುಖಂಡರು ಬರುವುದನ್ನು ಕಾಯುತ್ತ ಇರುವುದಕ್ಕಿಂತ ಹೆಚ್ಚು ಪ್ರಮುಖವಾದ ಇತರ ಕೆಲಸಗಳಿವೆ.

ದಿನದ ಟ್ವೀಟ್

ಇದೆಂತಹ ಕ್ರೌರ್ಯ?



ಇನ್ನೋರ್ವ ಮಹಿಳೆಯ ಮೇಲೆ ಅತ್ಯಾಚಾರ ಎಸಗುವಂತೆ ಮಹಿಳೆಯರೇ ಪುರುಷರನ್ನು ಕೇಳುತ್ತಿದ್ದಾರೆ. ಮನುಕುಲವು ಇದೆಂತಹ ಕ್ರೌರ್ಯಕ್ಕೆ ಸಾಕ್ಷಿಯಾಗುತ್ತಿದೆ? #Manipur

ರಾಖಿ ತ್ರಿಪಾಠಿ, ಸಹ ಪ್ರಾಧ್ಯಾಪಕಿ

ಕಿಡಿನುಡಿ



ರೇಖಾ ಶರ್ಮಾ ಅವರು ಯಾರನ್ನು ರಕ್ಷಿಸಬೇಕಿತ್ತೋ ಅವರನ್ನು ರಕ್ಷಿಸುವಲ್ಲಿ ವಿಫಲರಾಗುತ್ತಿದ್ದಾರೆ. ಇದರ ಬಗ್ಗೆ ಅವರನ್ನು ಕೇಳಿದಾಗ, ವಿರೋಧಪಕ್ಷಗಳ ವಿರುದ್ಧ ಪ್ರತ್ಯಾರೋಪ ಬಿಟ್ಟರೆ ಇನ್ನೇನೂ ಅವರಲ್ಲಿ ಇರಲಿಲ್ಲ. ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರಾದವರು ಎಲ್ಲಕ್ಕಿಂತ ಮೊದಲು ಮಹಿಳೆಯರು ಹಾಗೂ ಬಾಲಕಿಯರ ಬಗ್ಗೆ ಕಾಳಜಿ ವಹಿಸುವ ಗುಣ ಹೊಂದುವುದು ಮೂಲಭೂತ ಅಗತ್ಯವಾಗಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 24-7-1998

• ಕಾಗದದ ಮೇಲೆಯೇ ಉಳಿದ ತನಿಖೆ

ಬೆಂಗಳೂರು, ಜುಲೈ 23– ಆರೋಪ ಹೊತ್ತ ಐಎಎಸ್ ಅಧಿಕಾರಿಗಳ ವಿರುದ್ಧ ತನಿಖೆ ಅಥವಾ ಕ್ರಮಕ್ಕೆ ‘ಐಎಎಸ್ ಲಾಬಿ’ ತಡೆಯೊಡ್ಡುತ್ತದೆಯೇ?

ದೆಹಲಿ, ಮುಂಬೈ ಮತ್ತು ಬೆಂಗಳೂರು ನಗರಗಳಲ್ಲಿ ಪ್ರಿಯದರ್ಶಿನಿ ಮಳಿಗೆಗಳನ್ನು ತೆರೆಯುವ ಹಾಗೂ ಮಳಿಗೆಗಳ ನವೀಕರಣದ ಹೆಸರಿನಲ್ಲಿ ನಡೆದಿರುವ ಲಕ್ಷಾಂತರ ರೂಪಾಯಿಗಳ ಭಾರಿ ಪ್ರಮಾಣದ ಅವ್ಯವಹಾರಗಳ ಪ್ರಕರಣಕ್ಕೆ ಸಂಬಂಧಿಸಿದಂತೆ, ಇದು ನಿಜ ಎಂದು ಅಧಿಕಾರದ ಸೂತ್ರ ಹಿಡಿದಿರುವವರೇ ಆತಂಕ ವ್ಯಕ್ತಪಡಿಸುವ ಪರಿಸ್ಥಿತಿ ಉದ್ಭವಿಸಿದೆ.

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ನಡೆಸಬೇಕಾದ ತನಿಖೆಯನ್ನು ಮೂಲೆಗುಂಪು ಮಾಡಿ ಇಡೀ ಪ್ರಕರಣದ ಸದ್ದಡಗಿಸುವ ಪ್ರಕ್ರಿಯೆಯಲ್ಲಿ ‘ಐಎಎಸ್ ಲಾಬಿ’ ಭಾರಿ ಪ್ರಭಾವ ಬೀರಿದೆ ಎನ್ನುವ ಆರೋಪಕ್ಕೆ ಈಗ ಕೊರತೆ ಇಲ್ಲ.

• ಅಧಿಕಾರಕ್ಕೆ ಕಚ್ಚಾಟ: ಪಟೇಲ್ ಎಚ್ಚರಿಕೆ

ಬೆಂಗಳೂರು, ಜುಲೈ 23– ಪಂಚಾಯತ್ ರಾಜ್ ಸಂಸ್ಥೆಗಳನ್ನು ಪ್ರವೇಶಿಸಿದವರು ಅಧಿಕಾರಶಾಹಿಯೊಂದಿಗೆ ಜಗಳ, ಕಚ್ಚಾಟದಲ್ಲಿ ತೊಡಗದೆ ಸಹಕಾರ, ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದು ಸೂಚಿಸಿದರು.

ಪಂಚಾಯತ್ ರಾಜ್ ಸಂಸ್ಥೆಗಳಲ್ಲಿರುವವರು ಕೇವಲ ಅಧಿಕಾರಕ್ಕಾಗಿ ಕಚ್ಚಾಡುವುದಾದರೆ ಅವರುಗಳ ವಿರುದ್ಧ ಕಠೋರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ರಾಜ್ಯ ಪಂಚಾಯತ್ ಪರಿಷತ್ ಎರಡನೇ ಸಭೆಯ ಅಧ್ಯಕ್ಷತೆ ವಹಿಸಿ ಅವರು ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 24-7-1973

• ಬೆಲೆ ಏರಿಕೆ ತಡೆಯಲು ಸರ್ಕಾರ ಅಸಮರ್ಥ

ನವದೆಹಲಿ, ಜುಲೈ 23– ದೇಶದಲ್ಲಿ ಕಳೆದ ಎರಡು ತಿಂಗಳಲ್ಲಿ ಅಗತ್ಯ ವಸ್ತುಗಳ ಬೆಲೆ ಹಿಂದೆಂದೂ ಕಾಣದಷ್ಟು ವೇಗವಾಗಿ ಏರಲು ಸರ್ಕಾರದ ಅರೆಮನಸ್ಸಿನ ಮತ್ತು ದುರ್ಬಲ ನೀತಿಗಳೇ ಕಾರಣ ಎಂದು ವಿರೋಧ ಪಕ್ಷದವರು ಇಂದು ಲೋಕಸಭೆಯಲ್ಲಿ ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳ ವಿರುದ್ಧ ಪ್ರಬಲವಾದ ಟೀಕಾಸ್ತ್ರಗಳ ಪ್ರಯೋಗದಿಂದ ದಾಳಿಯನ್ನು ಮಾಡಿದರು.

ಬೆಲೆಗಳ ಏರಿಕೆ ತಡೆಯಲು ಮತ್ತು ಆಹಾರಧಾನ್ಯ ಹಾಗೂ ವನಸ್ಪತಿ ತೈಲಗಳನ್ನು ನ್ಯಾಯಬೆಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ವಿಫಲವಾಗಿರುವುದಕ್ಕಾಗಿ ಸರ್ಕಾರವನ್ನು ಖಂಡಿಸಲು ಮಂಡಿಸಿದ ನಿಲುವಳಿ ಸೂಚನೆಯ ಚರ್ಚೆ ಕಾಲದಲ್ಲಿ ಸರ್ಕಾರವನ್ನು ವಿರೋಧ ಪಕ್ಷ ತರಾಟೆಗೆ ತೆಗೆದುಕೊಂಡಿತು.

• ಕೆಸರು ಬಂದು ಸಿಗಡಿ ಸಮೃದ್ಧಿ

ಮಂಗಳೂರು, ಜುಲೈ 23– ಕಡಲ ಕೆರೆಯಲ್ಲಿ ಕೆಸರು ಶೇಖರಣೆಯಾದರೆ ಮೀನುಗಾರರಿಗೆ ಅದೊಂದು ಶುಭ ಶಕುನ. ಹೀಗೆ ಕೆಸರು ಬಂದರೆ ಮತ್ಸ್ಯ ಫಸಲು ಸಮೃದ್ಧ ಎಂದು ಬೆಸ್ತರು ಬಹುಕಾಲದಿಂದ ನಂಬಿಕೊಂಡ ಬಂದಿದ್ದಾರೆ. ಪಶ್ಚಿಮ ಕರಾವಳಿಯಲ್ಲಿ ಇಂತಹ ಕೆಸರು ಕಾಣಿಸಿಕೊಂಡಿದ್ದು, ಇದು ಸಿಗಡಿ ಮೀನಿನ ಖಜಾನೆಯನ್ನೇ ಹೊತ್ತು ತಂದಿದೆ. ಉತ್ಪಾದನೆ ಹೆಚ್ಚಾಗಿ ಮಾರುಕಟ್ಟೆಯಲ್ಲಿ ಈಗ ಈ ಜಾತಿ ಮೀನಿನ ಬೆಲೆ ಕುಸಿದಿದೆ.

ನಮ್ಮ ಅನೇಕ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಬ್ರ್ಯಾಂಡ್ ಮೌಲ್ಯ ಇಲ್ಲವೇಕೆ?

ವಿದ್ಯಾರ್ಥಿಗಳ ಚಿತ್ತ ವಿದೇಶಿ ವಿ.ವಿ.ಯತ್ತ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಪ್ರತಿವರ್ಷ ಆಗಸ್ಟ್ ತಿಂಗಳಿನಲ್ಲಿ ದೇಶವು ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿ ಇರುವಾಗಲೇ ಸಾವಿರಾರು ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನಡಾ, ಫ್ರಾನ್ಸ್‌ನಂತಹ ದೇಶಗಳ ವಿಶ್ವವಿದ್ಯಾಲಯಗಳಿಗೆ ವಿಮಾನ ಏರುತ್ತಾರೆ. ಹಿಂದಿನ ವರ್ಷ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರವು ಲೋಕಸಭೆಗೆ ನೀಡಿದ ಮಾಹಿತಿಯಂತೆ, 2020, 2021 ಮತ್ತು 2022ರಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಿಗೆ ತೆರಳಿದ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಅನುಕ್ರಮವಾಗಿ 4.5 ಲಕ್ಷ, 4.4 ಲಕ್ಷ ಮತ್ತು 7.5 ಲಕ್ಷ. 2024ರಲ್ಲಿ ಈ ಸಂಖ್ಯೆ 18 ಲಕ್ಷ ಆಗಲಿದೆ ಎಂದು ಅಂದಾಜಿಸಲಾಗಿದೆ.


ಡಾಲರ್ ವಿರುದ್ಧ ಭಾರತದ ರೂಪಾಯಿಯ ಮೌಲ್ಯ ಕುಸಿಯುತ್ತಿರುವ ಪರಿಸ್ಥಿತಿಯಲ್ಲೂ ಈ ವಿದ್ಯಾರ್ಥಿಗಳು ಪ್ರಯಾಣ, ದಿನನಿತ್ಯದ ಬದುಕಿನ ಅಗತ್ಯ ಮತ್ತು ಅಧ್ಯಯನಕ್ಕಾಗಿ ಲಕ್ಷಾಂತರ ರೂಪಾಯಿಯ ವೆಚ್ಚವನ್ನು ಭರಿಸುತ್ತಿದ್ದಾರೆ. ಉದಾಹರಣೆಗೆ, 2018ರಲ್ಲಿ ಭಾರತೀಯ ವಿದ್ಯಾರ್ಥಿಗಳು ವಿದೇಶಗಳಲ್ಲಿ ಮಾಡಿದ ವೆಚ್ಚ 30 ಶತಕೋಟಿ ಡಾಲರ್‌ಗಳು, ಅಂದಿನ ವಿನಿಮಯ ದರದಲ್ಲಿ ಸುಮಾರು ₹ 2.08 ಲಕ್ಷ ಕೋಟಿ. ಅದೇ ವರ್ಷ ನಮ್ಮ ದೇಶದ ಎಂಟು ಐಐಟಿಗಳ ವಾರ್ಷಿಕ ಬಜೆಟ್ ₹ 13.9 ಸಾವಿರ ಕೋಟಿ! 2024ರ ವೇಳೆಗೆ ವಿದೇಶಗಳಲ್ಲಿ ವ್ಯಾಸಂಗ ಮಾಡಲಿರುವ 18 ಲಕ್ಷ ವಿದ್ಯಾರ್ಥಿಗಳು 80 ಶತಕೋಟಿ ಡಾಲರ್ ಅಥವಾ ಇಂದಿನ ದರದಲ್ಲಿ ಸುಮಾರು ₹ 6.55 ಲಕ್ಷ ಕೋಟಿ ವೆಚ್ಚ ಮಾಡಲಿದ್ದಾರೆ. ಕೇಂದ್ರ ಸರ್ಕಾರವು ಉನ್ನತ ಶಿಕ್ಷಣಕ್ಕೆ 2023- 24ರಲ್ಲಿ ಮೀಸಲಿಟ್ಟಿರುವ ಹಣ ₹ 44.09 ಸಾವಿರ ಕೋಟಿ!

ವಿದೇಶದಲ್ಲಿನ ವ್ಯಾಸಂಗ ಅತಿ ದುಬಾರಿಯಾದರೂ ಅಲ್ಲಿಗೆ ತೆರಳುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿರುವುದಕ್ಕೆ ಮುಖ್ಯ ಕಾರಣ, ಅಲ್ಲಿ ದೊರೆಯುವ ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಗುಣಮಟ್ಟದ ಶಿಕ್ಷಣ. ಅಂತಹ ಶಿಕ್ಷಣದಿಂದ ಉತ್ತಮವಾದ ಬದುಕನ್ನು ರೂಪಿಸಿಕೊಳ್ಳಬಹುದೆಂಬ ಭರವಸೆ. ಇದರೊಂದಿಗೆ ಅತ್ಯುತ್ತಮ ಮೂಲ ಸೌಕರ್ಯಗಳು, ಶ್ರೇಷ್ಠ ಪ್ರಾಧ್ಯಾಪಕರು, ನಮ್ಮ ದೇಶದಲ್ಲಿ ಲಭ್ಯವಿರದ ವಿಶಿಷ್ಟ ಕೋರ್ಸ್‌ಗಳು, ವಿದ್ಯಾರ್ಥಿವೇತನ, ಆರ್ಥಿಕ ನೆರವಿನ ಅವಕಾಶಗಳು, ಪದವಿ ನಂತರ ನಿರ್ದಿಷ್ಟ ಕಾಲದವರೆಗೆ ಅಲ್ಲಿಯೇ ಉಳಿದು ಕೆಲಸ ಮಾಡಬಲ್ಲ ಅವಕಾಶಗಳು, ಪ್ರಗತಿಪರ ಬಹುಸಂಸ್ಕೃತೀಯ ಪರಿಸರ, ಅಂತರರಾಷ್ಟ್ರೀಯ ಜೀವನಾನುಭವಗಳಿಗೆ ತೆರೆದುಕೊಳ್ಳುತ್ತಲೇ ಆಸಕ್ತಿಯ ಕ್ಷೇತ್ರದಲ್ಲಿ ಪರಿಣತಿ ಪಡೆಯುವ ವಿಶಿಷ್ಟ ಅವಕಾಶ ವಿದ್ಯಾರ್ಥಿಗಳನ್ನು ಇನ್ನಿಲ್ಲದ ಹಾಗೆ ಆಕರ್ಷಿಸುತ್ತದೆ. ರಾಷ್ಟ್ರೀಕೃತ ಹಾಗೂ ಖಾಸಗಿ ವಲಯಗಳ ಬ್ಯಾಂಕ್‌ಗಳಿಂದ ದೊರೆಯುವ ಶೈಕ್ಷಣಿಕ ಸಾಲವೂ ಮಹತ್ವಾಕಾಂಕ್ಷೆಯುಳ್ಳ ವಿದ್ಯಾರ್ಥಿಗಳಿಗೆ ನೆರವಾಗಿದೆ.

ನಮ್ಮ ದೇಶದಲ್ಲೂ ಈ ಎಲ್ಲ ಗುಣಾತ್ಮಕ ಅಂಶಗಳಿರುವ ಉನ್ನತ ಶಿಕ್ಷಣ ಸಂಸ್ಥೆಗಳಿದ್ದರೂ ಅವುಗಳ ಸಂಖ್ಯೆ ಮಾತ್ರ ಬೆರಳೆಣಿಕೆಯಷ್ಟು. ಐದಾರು ದಶಕಗಳ ಹಿಂದೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ; ಮದ್ರಾಸ್, ದೆಹಲಿ, ಮುಂಬೈ ಐಐಟಿಗಳಿಗಿದ್ದ ತಮ್ಮದೇ ಆದ ವಿಶಿಷ್ಟ ಬ್ರ್ಯಾಂಡ್ ಮೌಲ್ಯ ಇಂದಿಗೂ ಹಾಗೆಯೇ ಉಳಿದಿದೆ. ಅವುಗಳಲ್ಲಿ ಪ್ರವೇಶ ಪಡೆದು, ಅಲ್ಲಿ ವ್ಯಾಸಂಗ ಮಾಡುವುದು ಇಂದಿಗೂ ಬಹು ಪ್ರತಿಷ್ಠೆಯ ವಿಷಯ. ಆದರೆ ಈ ಐದಾರು ದಶಕಗಳಲ್ಲಿ ಅಂತಹ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಬಯಸುವ ವಿದ್ಯಾರ್ಥಿಗಳ ಸಂಖ್ಯೆ ಮಾತ್ರ ನೂರಾರು ಪಟ್ಟು ಹೆಚ್ಚಿದೆ. ಉದಾಹರಣೆಗೆ, 2022ರಲ್ಲಿ ದೇಶದ 23 ಐಐಟಿಗಳಿಗೆ ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 9 ಲಕ್ಷ. ಅಂತಿಮವಾಗಿ ಆಯ್ಕೆಯಾದವರು 16,290. ಶೇ 1.8ರಷ್ಟು ಮಾತ್ರ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ಅಭ್ಯರ್ಥಿಗಳು ಬರೆಯುವ ಕ್ಯಾಟ್ ಪರೀಕ್ಷೆಯ ಕಥೆಯೂ ಇದೇ. ಅತ್ಯಂತ ಕಠಿಣವಾದ, ಅತಿ ತೀವ್ರ ಸ್ಪರ್ಧೆಯಿರುವ ಈ ಪರೀಕ್ಷೆಗಳಲ್ಲಿ ಸಾವಿರಾರು ಪ್ರತಿಭಾವಂತರು ಆಯ್ಕೆಗೊಳ್ಳದೇ ನಿರಾಶರಾಗುತ್ತಾರೆ.

ಹಿಂದಿನ ಐದಾರು ದಶಕಗಳಲ್ಲಿ ಭಾರತೀಯ ವಿಜ್ಞಾನ ಸಂಸ್ಥೆ, ಐಐಟಿ, ಐಐಎಂಗಳಿಗೆ ಇರುವಂತಹ ಬ್ರ್ಯಾಂಡ್ ಮೌಲ್ಯವನ್ನು ಬೆಳೆಸಿಕೊಳ್ಳಲು ಉಳಿದ ಅನೇಕ ಉನ್ನತ ಶಿಕ್ಷಣ ಸಂಸ್ಥೆಗಳಿಗೇಕೆ ಸಾಧ್ಯವಾಗಿಲ್ಲ? ಶೈಕ್ಷಣಿಕ ಬ್ರ್ಯಾಂಡ್ ಎಂಬುದು ಬರೀ ವೈಭವೋಪೇತವಾದ ಕ್ಯಾಂಪಸ್, ದುಬಾರಿ ಸೌಕರ್ಯಗಳು, ಕಣ್ಸೆಳೆಯುವ ಲಾಂಛನ, ಶಬ್ದಾಲಂಕಾರ ಶೋಭಿತ ‘ಮಿಷನ್ ಸ್ಟೇಟ್‌ಮೆಂಟ್ಸ್’, ಪುಟಗಟ್ಟಲೆ ವರ್ಣರಂಜಿತ ಜಾಹೀರಾತುಗಳಿಂದ ಬರುವಂತಹದಲ್ಲ. ‘ವಿಶ್ವಾಸಾರ್ಹತೆ, ಶ್ರೇಷ್ಠತೆ, ಜ್ಞಾನಾರ್ಜನೆ ಮತ್ತು ನೈತಿಕತೆ’ ಶೈಕ್ಷಣಿಕ ಬ್ರ್ಯಾಂಡ್‌ನ ನಾಲ್ಕು ಪ್ರಮುಖ ಆಧಾರಸ್ತಂಭಗಳು. ಇವುಗಳನ್ನೇ ಪರಮಾದರ್ಶವನ್ನಾಗಿ ಮಾಡಿಕೊಂಡು, ಅಪಾರ ನಿಷ್ಠೆಯಿಂದ ಶ್ರಮಿಸದಿದ್ದರೆ ಯಾವುದೇ ಸಂಸ್ಥೆ ತನ್ನದೇ ಆದ ವಿಶಿಷ್ಟ ಬ್ರ್ಯಾಂಡನ್ನು ರೂಪಿಸಿಕೊಳ್ಳುವುದು ಸಾಧ್ಯವಿಲ್ಲ.

ನಮ್ಮ ದೇಶದಲ್ಲಿ ಹೊರನೋಟಕ್ಕೆ ಭವ್ಯವೆನಿಸುವ ಅನೇಕ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆ, ಸಂಶೋಧನೆ, ಮೂಲಸೌಕರ್ಯ, ಸಂಪನ್ಮೂಲಗಳಲ್ಲಿ ತೀವ್ರ ಕೊರತೆ ಬಹು ಸಾಮಾನ್ಯ. ಪ್ರಾಧ್ಯಾಪಕ, ಸಂಶೋಧಕರ ವಿದ್ಯಾರ್ಹತೆ, ಸಂಶೋಧನಾಸಕ್ತಿ, ಪ್ರಕಟಿತ ಸಂಶೋಧನಾ ಪ್ರಬಂಧಗಳ ಬಗ್ಗೆ ವಿವರಗಳು ಆಸಕ್ತ ಭಾವಿ ವಿದ್ಯಾರ್ಥಿಗಳಿಗೆ ದೊರೆಯುವುದಿಲ್ಲ. ಖಾಸಗಿ ವಲಯದಲ್ಲಿನ ಬಹುತೇಕ ಉನ್ನತ ಶಿಕ್ಷಣ ಸಂಸ್ಥೆಗಳು ವಾಣಿಜ್ಯೋದ್ದೇಶ ಸಂಸ್ಥೆಗಳ, ರಾಜಕಾರಣಿಗಳ ಮಾಲೀಕತ್ವದಲ್ಲಿ ಇರುವುದರಿಂದ ದೀರ್ಘಕಾಲಿಕ ಗುರಿ, ಉದ್ದೇಶ, ನೈತಿಕತೆಯ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ.



ಎಲ್ಲದಕ್ಕಿಂತ ಹೆಚ್ಚಾಗಿ ಜ್ಞಾನಾರ್ಜನೆಗೆ ಅಗತ್ಯವಾದ, ಕ್ಷೋಭೆರಹಿತ ಶಾಂತಿಯುತ ವಿದ್ವತ್ ವಾತಾವರಣವೇ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಇಲ್ಲವೆಂಬುದು ಅನೇಕ ಶಿಕ್ಷಣ ತಜ್ಞರ ಅಭಿಪ್ರಾಯ. ಅಷ್ಟೇ ಅಲ್ಲ, ಭಾರತ ಸರ್ಕಾರದ ಮಹಾಲೇಖಪಾಲರು ತಮ್ಮ ಹಲವಾರು ವರದಿಗಳಲ್ಲಿ, ಉನ್ನತ ಶಿಕ್ಷಣ ಕ್ಷೇತ್ರದ ಶೋಚನೀಯ ಪರಿಸ್ಥಿತಿಯನ್ನು ಮತ್ತೆ ಮತ್ತೆ ಎತ್ತಿ ತೋರಿದ್ದಾರೆ. ಅನೇಕ ವಿಶ್ವವಿದ್ಯಾಲಯಗಳಿಗೆ ಸ್ವಂತ ಕಟ್ಟಡವಿಲ್ಲ, ಪ್ರಯೋಗಶಾಲೆಯಿಲ್ಲ, ಯಾವ ಕೈಗಾರಿಕಾ ಸಂಸ್ಥೆಗಳೂ ಸಂಶೋಧನೆಯನ್ನು ಪ್ರಾಯೋಜಿಸಿಲ್ಲ. ಪೇಟೆಂಟ್ ದೊರೆತಿರುವ ಉದಾಹರಣೆಗಳಂತೂ ಬಹು ಕಡಿಮೆ. ಉನ್ನತ ಶಿಕ್ಷಣ ಕ್ಷೇತ್ರ ಮತ್ತು ವೈಜ್ಞಾನಿಕ ಸಂಶೋಧನೆಗಳಿಗೆ ಜಿಡಿಪಿಯ ಶೇ 6ರಷ್ಟು ಹಣ ವಿನಿಯೋಗಿಸಬೇಕೆಂದು ಶಿಕ್ಷಣ ತಜ್ಞರು, ವಿಜ್ಞಾನಿಗಳು ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದಾರೆ. ಆದರೆ ಸರ್ಕಾರ, ಒಟ್ಟಾರೆ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟ ಹಣವನ್ನು, 2015-2022ರ ಅವಧಿಯಲ್ಲಿ, ಜಿಡಿಪಿಯ ಶೇ 2.8ರಿಂದ ಶೇ 2.9ಕ್ಕೆ, ಅಂದರೆ ಶೇ 0.1ರಷ್ಟು ಹೆಚ್ಚಿಸಿದೆ!

ವಿದೇಶಿ ವಿಶ್ವವಿದ್ಯಾಲಯಗಳಿಗೆ ನಮ್ಮ ದೇಶದಲ್ಲಿ ಕ್ಯಾಂಪಸ್‌ಗಳನ್ನು ತೆರೆಯಲು ಅವಕಾಶ ನೀಡಿದಲ್ಲಿ, ಅಂತರರಾಷ್ಟ್ರೀಯ ಗುಣಮಟ್ಟದ ಶಿಕ್ಷಣ ಭಾರತದಲ್ಲಿಯೇ ದೊರೆತು, ನಮ್ಮ ವಿದ್ಯಾರ್ಥಿಗಳು ವಿದೇಶಗಳಿಗೆ ಹೋಗುವುದು ಕಡಿಮೆಯಾಗಿ, ದೇಶದಿಂದ ಹೊರಗೆ ಹರಿದು ಹೋಗುತ್ತಿರುವ ಅಪಾರ ಪ್ರಮಾಣದ ಹಣ ಇಲ್ಲಿಯೇ ಉಳಿಯುತ್ತದೆ ಎಂಬುದು ಸರ್ಕಾರದ ಚಿಂತನೆ. ಈ ಪರಿಕಲ್ಪನೆಯು 2005ರಷ್ಟು ಹಿಂದಿನದು. ಗುಜರಾತ್‌ನ ಗಾಂಧಿನಗರದ ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್‌ನಲ್ಲಿ, 359 ಹೆಕ್ಟೇರ್ ಪ್ರದೇಶದಲ್ಲಿ ರೂಪುಗೊಂಡಿರುವ ‘ಗಿಫ್ಟ್ ಸಿಟಿ’ಯಲ್ಲಿ ವಿದೇಶಿ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗೆ ಸಮಸ್ತ ಅನುಕೂಲಗಳನ್ನು ಕಲ್ಪಿಸಿ, ಪ್ರವೇಶಾತಿ, ನೇಮಕಾತಿ, ಶುಲ್ಕ, ಪಠ್ಯ ವಿಷಯ, ಬೋಧನಾ ಕ್ರಮ, ಲಾಭಾಂಶವನ್ನು ತಮ್ಮ ದೇಶಕ್ಕೆ ಕೊಂಡುಹೋಗುವ ಸ್ವಾತಂತ್ರ್ಯದಂತಹವನ್ನು ನೀಡಲಾಗಿದೆಯಾದರೂ ಇದುವರೆವಿಗೂ ಯಾವ ವಿದೇಶಿ ವಿಶ್ವವಿದ್ಯಾಲಯವೂ ಅಲ್ಲಿಗೆ ಬಂದಿಲ್ಲ.

ನಮ್ಮ ದೇಶಕ್ಕಿಂತ ಹೆಚ್ಚು ಆಕರ್ಷಕವಾದ ಆಹ್ವಾನ ನೀಡಿರುವ ಸಿಂಗಪುರ, ಮಲೇಷ್ಯಾ, ವಿಯೆಟ್ನಾಂ 20 ವರ್ಷಗಳಿಂದ ಪ್ರಯತ್ನಿಸುತ್ತಿದ್ದರೂ ಹಾರ್ವರ್ಡ್, ಯೇಲ್, ಪ್ರಿನ್ಸ್‌ಟನ್, ಸ್ಟಾನ್‌ಫರ್ಡ್‌ನಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಹೊರದೇಶಗಳಲ್ಲಿ ಒಂದೇ ಒಂದು ಕ್ಯಾಂಪಸ್ಸನ್ನೂ ಸ್ಥಾಪಿಸಿಲ್ಲ. ಅವುಗಳನ್ನು ಹೊರತುಪಡಿಸಿ, ಮುಂದೊಮ್ಮೆ ಇಲ್ಲಿಗೆ ಬರಬಹುದಾದ ಎರಡನೇ ದರ್ಜೆಯ ವಿದೇಶಿ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡುವ ಬದಲಿಗೆ, ನಮ್ಮಲ್ಲಿನ ಆಯ್ದ ಶಿಕ್ಷಣ ಸಂಸ್ಥೆಗಳಿಗೇ ಪ್ರೋತ್ಸಾಹ ನೀಡಿ ಎಂಬುದು ತಜ್ಞರ ಒತ್ತಾಯ.

ಈ ವರ್ಷ ಆಗಸ್ಟ್ ತಿಂಗಳ ವಲಸೆ ಪ್ರಾರಂಭವಾಗುವ ಸಮಯಕ್ಕಿಂತ ಮುಂಚೆ, ಇದೇ ತಿಂಗಳಿನಲ್ಲಿ ನಮ್ಮ ಪ್ರಧಾನಿಯವರು ಫ್ರಾನ್ಸ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ನಡೆದ ಮಾತುಕತೆಯಂತೆ, ಫ್ರಾನ್ಸ್‌ನಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ, ಶಿಕ್ಷಣ ಮುಗಿದ ನಂತರ ಐದು ವರ್ಷಗಳ ಕಾಲ ಅಲ್ಲಿಯೇ ನೆಲೆಸಿ, ಉದ್ಯೋಗ ಮಾಡುವ ಅವಕಾಶ ದೊರೆಯಲಿದೆ. ವಿದೇಶಿ ವಿಶ್ವವಿದ್ಯಾಲಯಗಳತ್ತ ಮುಖ ಮಾಡಿರುವ ನಮ್ಮ ವಿದ್ಯಾರ್ಥಿಗಳಿಗೆ ಇದು ಮತ್ತಷ್ಟು ಹುರುಪು ನೀಡುವ ಸಂತೋಷದ ಸುದ್ದಿ.

ಚುರುಮುರಿ



ಕಣ್ಣೀರು, ಮಾತೇ ಮಂತ್ರ!

• ಸುಮಂಗಲಾ

‘ನಮಗೊಂದು ಎರಡು ಎಕರೆ ಜಮೀನು ಇದ್ದಿದ್ದರೆ, ನಾವೂ ಟೊಮೆಟೊ ಹಾಕಿದ್ದರೆ... ಕೋಟ್ಯಧಿಪತಿಗಳಾಗತಿದ್ದಿವಿ...’ ಬೆಕ್ಕಣ್ಣ ಕನಸು ಕಾಣತೊಡಗಿತು. ‘ಕನಸಿನಲ್ಲೂ ಟೊಮೆಟೊ ಮುಟ್ಟಕ್ಕೆ ಆಗಂಗಿಲ್ಲ’ ನಾನು ನಿಟ್ಟುಸಿರುಬಿಟ್ಟೆ.

‘ಎಲ್ಲ ಕಾಂಗಿಗಳ ಕಿತಾಪತಿ... ಭಾಗ್ಯಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆಯಂಥ ಗ್ಯಾರಂಟಿ ಜಾರಿಗೆ ಬಂದಮ್ಯಾಗೆ ಮಂದಿ ಜೇಬಿನಾಗೆ ರೊಕ್ಕ ಉಳಿತೈತಿ ಅಂದ್ರು, ಈಗ ನೋಡಿದರೆ ಉಳಿಸಿದ್ದೆಲ್ಲ ಎರಡ್ ಕೆ.ಜಿ ಟೊಮೆಟೊ ತಗಳ್ಳಕ್ಕೆ ಸಾಲಂಗಿಲ್ಲ’.

‘ಟೊಮೆಟೊ ಬೆಳೆದ ರೈತರಿಗೆ ಅಪರೂಪಕ್ಕೆ ಒಳ್ಳೆ ಬೆಲೆ ಸಿಕ್ಕೈತೆಲು. ಬೆಲೆ ಇಲ್ಲದಿದ್ದಾಗ ರಸ್ತೆಗೆ ಸುರೀತಿದ್ದರಲ್ಲ, ಅದ್ಯಾರ ಕಿತಾಪತಿ?’

‘ನೋಡಾ... ರೈತ್ರು ಟೊಮೆಟೊ ಗಿಡ ನೆಟ್ಟಾಗ ಕಮಲಕ್ಕನ ಆಡಳಿತವಿತ್ತು ಹೌದಿಲ್ಲೋ. ಹಿಂಗಾಗಿ, ರೈತರಿಗೆ ಲಾಭ ಆಗಿದ್ದು ಕಮಲಕ್ಕನ ಕೃಪೆಯಿಂದ. ಈಗ ಗ್ರಾಹಕರು ಕೊಳ್ಳಬೇಕಿದ್ದರೆ ಕಾಂಗಿಗಳ ಕಾರುಬಾರು. ಹಿಂಗಾಗಿ ನಿಮಗೆ ಬೆಲೆಯೇರಿಕೆ ಬಿಸಿ ತಟ್ಟದರ, ಅದು ಕಾಂಗಿಗಳ ಕಿತಾಪತಿ. ಅಷ್ಟೇ ಅಲ್ಲ, ಇನ್ಮ್ಯಾಗೆ ಹಾಲು, ಆಲ್ಕೋಹಾಲು ಎರಡೂ ತುಟ್ಟಿಯಾಗತೈತಿ ಅನ್ನೂದು ಗ್ಯಾರಂಟಿನೇ’ ಬೆಕ್ಕಣ್ಣ ನಕ್ಕಿತು.

‘ಸರಿಯಪ್ಪ, ಈಗ ಮಣಿಪುರದಾಗೆ ಇಷ್ಟ್ ಹಿಂಸಾಚಾರ ನಡೆಯಾಕೆ ಹತ್ತೈತಲ್ಲ, ಅದ್ಯಾರ ಕಿತಾಪತಿ ಹಂಗಾರೆ?’ ಎಂದೆ.

‘ಅದ್ಯಾರ ಕಿತಾಪತಿಯಾಗಿದ್ದರೇನು... ನಮ್ ಮೋದಿಮಾಮ ತನ್ನ ಬಂಗಾರದಂಥ ಮೌನ ಮುರಿದು ಕೊನೆಗೂ ಬೆಳ್ಳಿಮಾತು ಆಡಲಿಲ್ಲೇನು? ಹಿಂಸಾಚಾರ ನೋಡಿ, ಎದಿಯೊಳಗ ಸಂಕಟ ಆಗಾಕಹತ್ತೈತಿ ಅಂತ ಕಣ್ಣಾಗೆ ನೀರು ಹಾಕ್ಯಾನಂದ್ರ, ಸಮಸ್ಯೆ ಬಗೆಹರಿದಂಗ ಅಂತ ತಿಳಕೋ’.

‘ಇಷ್ಟು ತಡವಾಗಿ ಆಡಿದ ಮಾತಿನಿಂದ ಏನುಪಯೋಗ? ಮದ್ಲು ಮಣಿಪುರದಾಗೆ ಹೆಣ್‌ಮಕ್ಕಳ ಬೆತ್ತಲೆ ಮೆರವಣಿಗೆ ಮಾಡ್ತಾರಲ್ಲ, ಅಂತಾದು ನಿಲ್ಲಿಸೂ ಪ್ರಯತ್ನ ಮಾಡಾಕೆ ವಿಶ್ವಗುರುವಿಗೆ ಹೇಳಲೇ’ ಎಂದು ಬೈದೆ. ಬೆಕ್ಕಣ್ಣನ ಚಹರೆಯೇ ಬದಲಾಯಿತು.

‘ಮನುಷ್ಯಜಾತಿವಳಗ ಗಂಡಸರು ಎದಕ್ಕ ಹೆಣ್ಣುಮಕ್ಕಳ ಮ್ಯಾಗೆ ಹಿಂತಾ ಪರಿ ಅತ್ಯಾಚಾರ, ದೌರ್ಜನ್ಯ ಮಾಡ್ತಾರಂತ ನನಗರ್ಥವೇ ಆಗವಲ್ಲದು. ನಮ್ಮ ಪ್ರಾಣಿಗಳ ಲೋಕದಾಗೆ ಹಿಂತಾದು ನಡೆಯಂಗಿಲ್ಲೇಳು’ ಎಂದು ಮೂತಿಗೆ ತಿವಿಯಿತು.

ಸಂಗತ

‘ಹೊರೆ’ ಇಳಿಯಲಿ, ಹಗುರಾಗಲಿ

ಮಕ್ಕಳು ಹೊತ್ತುಕೊಂಡಿರಬಹುದಾದ ಎಲ್ಲಾ ಬಗೆಯ ಹೊರೆಗಳನ್ನು ಒಂದು ದಿನದ ಮಟ್ಟಿಗಾದರೂ ತುಸು ಇಳಿಸಲು ‘ಸಂಭ್ರಮ ಶನಿವಾರ’ದಂತಹ ಕಾರ್ಯಕ್ರಮಗಳು ನೆರವಾಗುತ್ತವೆ

• ಡಾ. ಎಚ್.ಬಿ.ಚಂದ್ರಶೇಖರ್

ಪ್ರತಿ ತಿಂಗಳ ಮೂರನೇ ಶನಿವಾರ ಬ್ಯಾಗ್ ಹೊರೆ ಇಲ್ಲದೇ ಮಕ್ಕಳು ಖುಷಿಯಿಂದಿರಲು ರಾಜ್ಯದ ಎಲ್ಲಾ ಶಾಲೆಗಳಲ್ಲಿ ‘ಸಂಭ್ರಮ ಶನಿವಾರ’ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಇತ್ತೀಚೆಗೆ ಮೊದಲ ‘ಸಂಭ್ರಮ ಶನಿವಾರ’ದಂದು ಬೆಂಗಳೂರಿನ ಕೆಲ ಶಾಲೆಗಳಿಗೆ ಭೇಟಿ ನೀಡಿ ಚಟುವಟಿಕೆಗಳನ್ನು ಗಮನಿಸಿದೆ. ಬ್ಯಾಗ್ ಇಲ್ಲದೇ ಆರಾಮಾಗಿ ಕೈಬೀಸಿಕೊಂಡು ಬರಬೇಕು ಎಂಬ ಸೂಚನೆ ಇದ್ದಾಗ್ಯೂ ಕೆಲವು ಮಕ್ಕಳು ಬ್ಯಾಗ್ ತಂದಿದ್ದರು. ಈ ಬಗ್ಗೆ ಕೇಳಿದಾಗ ಅವರು ನೀಡಿದ ಉತ್ತರ ಕುತೂಹಲಕರವಾಗಿತ್ತು.

‘ಬ್ಯಾಗ್ ಇಲ್ಲದೇ ಇದ್ದರೆ ನಮಗೆ ಒಂಥರಾ ಆಗುತ್ತೆ. ಬ್ಯಾಗ್ ಬಿಡುವುದು ಕಷ್ಟ’ ಎಂದರು. ಮಕ್ಕಳ ಸಂಖ್ಯೆ ಹೆಚ್ಚಾಗಿರುವ ಶಾಲೆಗಳಲ್ಲಿ ಪಠ್ಯಪುಸ್ತಕ, ಪಾಠ ಬೋಧನೆಯಿಲ್ಲದೆ ಮಕ್ಕಳನ್ನು ಸೂಚಿತ ಚಟುವಟಿಕೆಗಳಲ್ಲಿ ವ್ಯವಸ್ಥಿತವಾಗಿ ತೊಡಗಿಸಲು ಶಿಕ್ಷಕರು ಪ್ರಯಾಸಪಡುತ್ತಿದ್ದರು. ದೊಡ್ಡವರಾಗಲೀ ಅಥವಾ ಚಿಕ್ಕವರಾಗಲೀ ತಾವು ಹೊತ್ತುಕೊಂಡಿರುವ ಹೊರೆಯನ್ನು ಇಳಿಸಲು ಮನಸ್ಸು ಮಾಡರು.

ಸದಾ ಭವಿಷ್ಯದ ಕುರಿತು ಆತಂಕ, ಚಿಂತೆ, ಇತರರ ಬಗ್ಗೆ ಅನುಮಾನ, ಮಾತ್ಸರ್ಯದಂತಹ ಹೊರೆಗಳನ್ನು ವಯಸ್ಕರಾದ ನಾವು ಸದಾ ಮನದೊಳಗೆ ಹೊತ್ತುಕೊಂಡಿರುತ್ತೇವೆ. ನಿತ್ಯ ಕೊಂಡೊಯ್ಯುವ ಲ್ಯಾಪ್‌ಟಾಪ್ ಹೊಂದಿದ ಚೀಲ, ಛತ್ರಿ ಅಥವಾ ವ್ಯಾನಿಟಿ ಬ್ಯಾಗ್ ನಂತಹವನ್ನು ಸದಾ ಜೊತೆಗೆ ತೆಗೆದುಕೊಂಡು ಹೋಗುವ ಅಭ್ಯಾಸ ಇರುವವರು, ಆ ವಸ್ತುಗಳ ಅವಶ್ಯಕತೆ ಇಲ್ಲದೇ ಇರುವಾಗಲೂ ಅವುಗಳನ್ನು ಬಿಡಲಾರರು. ಪ್ರಯಾಣದಲ್ಲಿ ನಾವೆಲ್ಲಾ ಗಮನಿಸಿದಂತೆ, ಕೆಲವರು ತಮ್ಮ ಕೈಲಿರುವ ಲಗೇಜು, ಸಾಮಾನುಗಳನ್ನು ಕೆಳಗಿರಿಸದೆ ಹೊತ್ತುಕೊಂಡೇ ಪ್ರಯಾಣಿಸುತ್ತಾರೆ. ಭೌತಿಕ, ಮಾನಸಿಕ, ಭಾವನಾತ್ಮಕ ಹೊರೆಯನ್ನು ಸದಾ ಹೊತ್ತು ತಿರುಗಿ ಅಭ್ಯಾಸ ಮಾಡಿಕೊಂಡ ವಯಸ್ಕರು, ಮಕ್ಕಳಿಗೂ ವಿವಿಧ ರೀತಿಯ ಹೊರೆಯನ್ನು ಸದ್ದಿಲ್ಲದೇ ಹೊರಿಸಿ, ಸಮಾಧಾನಪಟ್ಟುಕೊಳ್ಳುತ್ತಾರೆ.

ಪಠ್ಯಪುಸ್ತಕ, ನೋಟ್ ಪುಸ್ತಕ, ಜಾಮಿತ್ರ ಬಾಕ್ಸ್, ಊಟದ ಡಬ್ಬಿ, ನೀರು ಎಲ್ಲವನ್ನೂ ಹೊಂದಿದ ಚೀಲವನ್ನು ಮಕ್ಕಳು ನಿತ್ಯ ಶಾಲೆಗೆ ತೆಗೆದುಕೊಂಡು ಹೋಗುತ್ತಾರೆ. ಮಕ್ಕಳು ಕೊಂಡೊಯ್ಯುವ ಬ್ಯಾಗ್ ಅನ್ನು ‘ಭೌತಿಕ ಹೊರೆ’ ಎಂದು ಪರಿಭಾವಿಸುವುದಾದರೆ, ಕಲಿಯಬೇಕಾದ ಪಾಠ, ಶಿಕ್ಷಕರಿಗೆ ಒಪ್ಪಿಸಬೇಕಿರುವ ಪದ್ಯ, ನೆನಪಿಡಬೇಕಿರುವ ಗಣಿತದ ಸೂತ್ರದಂತಹವು ಮಾನಸಿಕ ಹೊರೆ ಎನಿಸಿಕೊಳ್ಳುತ್ತವೆ. ತನ್ನ ಜೊತೆಗಾರ ಗೆಳೆಯ, ಗೆಳತಿಯರು ತನ್ನಲ್ಲಿರುವ ನ್ಯೂನತೆಯ ಬಗ್ಗೆ ಮಾಡುವ ಅವಮಾನ, ಕಡಿಮೆ ಅಂಕ ತೆಗೆದಾಗ ‘ನೀನೊಬ್ಬ ದಡ್ಡ’ ಎನ್ನುವ ಮೂದಲಿಕೆ ಮಾತುಗಳು, ಕುಟುಂಬದ ಸದಸ್ಯರಲ್ಲಿರುವ ಸಂಘರ್ಷದಂತಹವು ಭಾವನಾತ್ಮಕ ಹೊರೆ ಎನಿಸಿಕೊಳ್ಳುತ್ತವೆ. ಮಕ್ಕಳು ಹೊತ್ತುಕೊಂಡಿರಬಹುದಾದ ಈ ಎಲ್ಲಾ ಹೊರೆಗಳನ್ನು ಇಳಿಸಿ, ಅವರಲ್ಲಿ ಸಂಭ್ರಮ ತರುವುದು ನಿಜಕ್ಕೂ ಸವಾಲೇ ಸರಿ.

ಕುತೂಹಲ, ಆಸಕ್ತಿ, ಸಂತಸ, ಯಾವಾಗಲೂ ಜೊತೆಗಿರುವ ನಗು, ಸದಾ ಒಂದಿಲ್ಲೊಂದು ಪ್ರಶ್ನೆಯನ್ನು ಕೇಳುವುದು, ಎಲ್ಲವನ್ನೂ ಮುಟ್ಟಿ ನೋಡಿ ಪರೀಕ್ಷಿಸುವ ವೈಜ್ಞಾನಿಕ ದೃಷ್ಟಿಕೋನದಂತಹ ಮಕ್ಕಳ ಸಹಜ ಗುಣಗಳು ಅವರು ಶಾಲೆಗೆ ಸೇರಿದ ನಂತರ ಒಂದೊಂದೇ ಕಡಿಮೆ ಆಗುತ್ತಾ ಸಂಪೂರ್ಣ ಇಲ್ಲವಾಗುತ್ತವೆ. ಅವುಗಳ ಜಾಗದಲ್ಲಿ ಒತ್ತಡ, ಭಯ, ಆತಂಕ ಮನೆ ಮಾಡುತ್ತವೆ. ಈ ಹೊರೆಗಳು ಮಕ್ಕಳ ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಮಕ್ಕಳ ಹೊರೆಯನ್ನು ಒಂದು ದಿನದ ಮಟ್ಟಿಗಾದರೂ ತುಸು ಇಳಿಸಲು ಸಂಭ್ರಮ ಶನಿವಾರದಂತಹ ಕಾರ್ಯಕ್ರಮಗಳು ನೆರವಾಗುತ್ತವೆ.

ಮಕ್ಕಳ ಹೊರೆಯನ್ನು ಹಗುರಗೊಳಿಸಿ, ಅವರ ಮನದಲ್ಲಿ ಒಂದಿಷ್ಟು ನೈಜ ನಗು, ಸಂತಸವನ್ನು ಸಂಭ್ರಮ ಶನಿವಾರದಂದು ಮರಳಿ ತರುವಂತೆ ಮಾಡಲು ಶಿಕ್ಷಕರು ಒಂದಷ್ಟು ಯೋಜನೆ, ಪೂರ್ವ ತಯಾರಿ ಮಾಡುವುದು ಅಗತ್ಯ. ಬ್ಯಾಗ್ ಇಲ್ಲದ ದಿನ ಮಕ್ಕಳಿಗೆ ಒಂದಷ್ಟು ಹೆಚ್ಚೆನಿಸುವಷ್ಟು ಉತ್ಸಾಹ ಇರುತ್ತದೆ. ಈ ಕಾರಣ ಗಲಾಟೆ, ಗದ್ದಲವೂ ಹೆಚ್ಚೇ ಎನ್ನಬಹುದು. ಆದರೆ ಗದ್ದಲದಲ್ಲಿ ಈ ಕಾರ್ಯಕ್ರಮ ಮುಗಿದುಹೋಗಬಾರದು.



ಚಿತ್ರಕಲೆ, ಹಾಡು, ಕತೆ ಹೇಳುವುದು, ಕೇಳುವುದು, ನೃತ್ಯ, ನಾಟಕ, ಮಣ್ಣಿನಿಂದ ಆಕೃತಿ ಮಾಡುವುದು, ಕವನ ರಚನೆ, ಪ್ರಯೋಗ ಮಾಡುವುದು, ಕೈತೋಟದಲ್ಲಿ ಕೆಲಸ ಮಾಡುವಂತಹ ಚಟುವಟಿಕೆಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಯಾವ ಚಟುವಟಿಕೆ ಇಷ್ಟ ಎಂಬುದನ್ನು ಶಿಕ್ಷಕರು ಮೊದಲು ಕಂಡುಕೊಳ್ಳಬೇಕು. ಮಕ್ಕಳು ತಮ್ಮ ಇಷ್ಟದ ಚಟುವಟಿಕೆಗಳಲ್ಲಿ ಖುಷಿಯಿಂದ ಭಾಗವಹಿಸುವಂತೆ ಸ್ಪಷ್ಟ ಆಯೋಜನೆ ಮಾಡಬೇಕು. ಇತರ ದಿನಗಳಿಗೆ ಹೋಲಿಸಿದಲ್ಲಿ ಅಂದು ಮಕ್ಕಳು ಎಷ್ಟು ಸಂತಸದಿಂದಿದ್ದರು ಎಂಬುದೇ ಈ ಯೋಜನೆಯ ಯಶಸ್ಸಿನ ಸೂಚಕ ಎನ್ನಬಹುದು. ಈ ಕುರಿತು ಮಕ್ಕಳಿಂದಲೇ ಮಾಹಿತಿ ಸಂಗ್ರಹಿಸಿ, ನಂತರದ ಸಂಭ್ರಮ ಶನಿವಾರದಂದು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು.

ಒಂದು ದಿನದ ಮಟ್ಟಿಗೆ ಮಕ್ಕಳ ಸಂಭ್ರಮವನ್ನು ಮರಳಿ ತರುವ ಯೋಜನೆ ಒಳ್ಳೆಯದೇ. ಇದಕ್ಕೂ ಮಿಗಿಲಾಗಿ, ಪ್ರತಿದಿನವೂ ಮಕ್ಕಳ ಸಂಭ್ರಮ, ಸಂತಸ ಕಸಿಯದೇ ಕುಗ್ಗಿಸದೇ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಬಹಳ ಪ್ರಮುಖವಾದ ಅಂಶವಾಗಿದೆ.

ಲೇಖಕ: ಹಿರಿಯ ಉಪನ್ಯಾಸಕ, ಡಯಟ್ ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಉಳಿಕೆ 50 ಪೈಸೆ ಯಾರಿಗೆ?

ಸರ್ಕಾರ ಪ್ರತಿಬಾರಿಯೂ ಹಾಲಿನ ಬೆಲೆಯನ್ನು ಲೀಟರಿಗೆ ₹ 3, ₹ 5 ಎಂದೆಲ್ಲ ಬೆಸ ಸಂಖ್ಯೆಯಲ್ಲಿಯೇ ಹೆಚ್ಚಿಸುತ್ತದೆ. ಅದಕ್ಕೆ ಕಾರಣವಾದರೂ ಏನು? ಈಗ 50 ಪೈಸೆಯು ಬಳಕೆಯಲ್ಲಿ ಇಲ್ಲದಿರುವುದರಿಂದ, ಅರ್ಧ ಲೀಟರ್ ತೆಗೆದುಕೊಳ್ಳುವಾಗ ₹ 1.50 ಹೆಚ್ಚಳಕ್ಕೆ ₹ 2 ಕೊಡಲೇಬೇಕಾಗುತ್ತದೆ. ಅಂದರೆ ಅರ್ಧ ಲೀಟರ್‌ಗೆ ₹ 2 ಆದರೆ ಒಂದು ಲೀಟರ್‌ಗೆ ₹ 4 ಹೆಚ್ಚಳವಾದಂತಾಯಿತಲ್ಲವೇ? ಈ 50 ಪೈಸೆ ಸಂಸ್ಥೆಗಂತೂ ಹೋಗುವುದಿಲ್ಲ. ಮಾರಾಟಗಾರರಿಗೆ ತಾನೇ ಲಾಭ?

ವಿ.ಪಾಂಡುರಂಗ, ಬೆಂಗಳೂರು

ಮಣಿಪುರ ಪ್ರಕರಣ ಆಘಾತಕಾರಿ

ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿ, ಲೈಂಗಿಕ ದೌರ್ಜನ್ಯ ಎಸಗಿರುವುದು ಆಘಾತಕಾರಿ. ಈ ರೀತಿ ದೌರ್ಜನ್ಯ ನಡೆಸಿರುವ ಪುರುಷ ಸಮಾಜಕ್ಕೆ ಧಿಕ್ಕಾರ. ಇಷ್ಟಾದರೂ ಅಲ್ಲಿನ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಸಕಾಲಕ್ಕೆ ಸೂಕ್ತ ಕ್ರಮ ಕೈಗೊಂಡಿಲ್ಲ. ಸುಪ್ರೀಂ ಕೋರ್ಟ್ ಈ ಪ್ರಕರಣದಲ್ಲಿ ಧ್ವನಿ ಎತ್ತಿರುವುದು ನಮ್ಮಂತಹ ಮಹಿಳೆಯರಿಗೆ ನೆಮ್ಮದಿ ತರುವ ಸಂಗತಿಯಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಹಾಗೂ ಮುಂದೆ ಎಂದೂ ಈ ರೀತಿಯ ಘಟನೆಗಳು ನಡೆಯದಂತೆ ಸರ್ಕಾರ ನೋಡಿಕೊಳ್ಳಬೇಕು.

ಶ್ವೇತಾ ಜಿ., ಹೊಸದುರ್ಗ

ನ್ಯಾಯಾಂಗ ತನಿಖೆ ದ್ವೇಷದ ರಾಜಕಾರಣ ಅಲ್ಲ

ರಾಜ್ಯ ಸರ್ಕಾರವು ಪಿಎಸ್‌ಐ ಹುದ್ದೆಗಳ ನೇಮಕಾತಿ ಹಗರಣವನ್ನು ನ್ಯಾಯಾಂಗ ತನಿಖೆಗೆ ವಹಿಸಿರುವುದು ಸ್ವಾಗತಾರ್ಹ. ಆದರೆ ಬಿಜೆಪಿ ಮುಖಂಡ ಬಸವರಾಜ ಬೊಮ್ಮಾಯಿ ಅವರು, ಇದೊಂದು ದ್ವೇಷದ ರಾಜಕಾರಣ ಎಂದು ಹೇಳಿರುವುದು ಪರೋಕ್ಷವಾಗಿ ಹಗರಣವನ್ನು ಒಪ್ಪಿಕೊಂಡಂತಿದೆ. ಈ ಹಿಂದೆ ಬೊಮ್ಮಾಯಿ ನೇತೃತ್ವದ ಸರ್ಕಾರ ಇದ್ದಾಗ ಪಿಎಸ್‌ಐ ಹುದ್ದೆಗಳ ನೇಮಕಾತಿ ಹಗರಣ ನಡೆಯಿತು. ಆಗ ವಿರೋಧ ಪಕ್ಷವಾದ ಕಾಂಗ್ರೆಸ್, ಹಗರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ವಿಧಾನಸಭೆಯಲ್ಲಿ ಪ್ರಬಲವಾಗಿ ಆಗ್ರಹಿಸಿತ್ತು. ಆದರೆ ಆಗಿನ ಸರ್ಕಾರವು ಹಗರಣದ ತನಿಖೆಯನ್ನು ಸಿಐಡಿಗೆ ವಹಿಸಿತು. ಎಡಿಜಿಪಿ ಮಟ್ಟದ ಅಧಿಕಾರಿಯನ್ನು ಬಂಧಿಸುವಷ್ಟು ದೊಡ್ಡ ಹಗರಣದಲ್ಲಿ ರಾಜಕೀಯ ವ್ಯಕ್ತಿಗಳು ಭಾಗಿಯಾಗಿರುವ ಬಗ್ಗೆ ಸೂಕ್ತ ತನಿಖೆ ನಡೆಸಲು ಸಿಐಡಿಗಿಂತ ನ್ಯಾಯಾಂಗ ತನಿಖೆಯೇ ಹೆಚ್ಚು ಸೂಕ್ತವಾಗಿದೆ.

ಆಂಜನೇಯ ಎನ್., ಕಸಿನಾಯಕನಹಳ್ಳಿ, ಮಧುಗಿರಿ

ಹಾಲು– ಆಲ್ಕೊಹಾಲು

ಆಲ್ಕೊಹಾಲಿನ ದರ ಆಗಿದೆ 20% ತುಟ್ಟಿ,
ಆಲ್ಕೊಹಾಲಿನಲ್ಲಿ ‘ಹಾಲೂ’ ಸೇರಿರುವುದರಿಂದ
ಬೇಜಾರು ಬೇಡವೆಂದಿರಬಹುದು
ಆಗುತ್ತಿದೆ ಹಾಲು ₹ 3ರಷ್ಟು ತುಟ್ಟಿ!

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ಉಚಿತ ಅರ್ಜಿ: ಇರಲಿ ಪಾರದರ್ಶಕತೆ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಗೃಹಜ್ಯೋತಿ ಹಾಗೂ ಗೃಹಲಕ್ಷ್ಮಿಗೆ ಆನ್‌ಲೈನ್ ಕೇಂದ್ರಗಳಲ್ಲಿ ಜನ ಉಚಿತವಾಗಿ ಅರ್ಜಿ ಸಲ್ಲಿಸಬಹುದೆಂದು ಸರ್ಕಾರ ಸುತ್ತೋಲೆ ಹೊರಡಿಸಿದೆ. ಆದರೆ ಈ ಸುತ್ತೋಲೆ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಈ ಯೋಜನೆಗಳಿಗೆ ಸಂಬಂಧಿಸಿದಂತೆ ಗ್ರಾಮ ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ, ಫಲಾನುಭವಿಗಳ ಪ್ರತಿ ಅರ್ಜಿಗೆ ಸರ್ಕಾರವೇ ₹ 20 ಶುಲ್ಕ ಪಾವತಿಸುತ್ತಿದೆ. ಆದರೂ ಸೇವಾ ಕೇಂದ್ರಗಳಲ್ಲಿ ಫಲಾನುಭವಿಗಳ ಅರ್ಜಿಗಳಿಗೆ ಐವತ್ತು, ಎಪ್ಪತ್ತು, ನೂರರಂತೆ ಹಣ ವಸೂಲಿ ಮಾಡಲಾಗುತ್ತಿದೆ.

ಇನ್ನು ಸರ್ಕಾರದ ಸಹಾಯವಾಣಿಯಲ್ಲಿಯೂ ಸಮರ್ಪಕ ಮಾಹಿತಿ ಸಿಗುತ್ತಿಲ್ಲ. ಮತ್ತೊಂದೆಡೆ, ಸರ್ಕಾರಿ ಸ್ವಾಮ್ಯದ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಪ್ರತಿ ಅರ್ಜಿಗೆ ಬೇಕಾಬಿಟ್ಟಿ ಹಣ ವಸೂಲಿ ಮಾಡುತ್ತಿರುವ ಆರೋಪ ಕೇಳಿಬರುತ್ತಿದೆ. ಸರ್ಕಾರ ಈ ದಿಸೆಯಲ್ಲಿ ಗಮನಹರಿಸಿ ಶೋಷಣೆ ತಪ್ಪಿಸಬೇಕಿದೆ.

ಲೋಹಿತ ಹಸೂರೆ, ಹೊನ್ನಿಹಳ್ಳಿ, ಹುಕ್ಕೇರಿ

ಶಾಲೆಯಲ್ಲೇಕೆ ಸಮಸ್ಯೆಗಳ ಸರಮಾಲೆ?

ರಾಜ್ಯದ ಬಹಳಷ್ಟು ಸರ್ಕಾರಿ ಶಾಲೆ ಮತ್ತು ಕಾಲೇಜು ಕಟ್ಟಡಗಳು ಶಿಥಿಲಾವಸ್ಥೆ ತಲುಪಿದ್ದು, ಸೋರುವ ಕೊಠಡಿಗಳಲ್ಲೇ ತರಗತಿಗಳನ್ನು ನಡೆಸಲಾಗುತ್ತಿದೆ ಎಂದು ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಹಲವಾರು ಕಡೆ ಶಾಲಾ- ಕಾಲೇಜು ಕಟ್ಟಡಗಳ ಚಾವಣಿ ಹಾಳಾಗಿರುತ್ತದೆ ಹಾಗೂ ಕಿಟಕಿಗಳು ಮುರಿದು ಬಿದ್ದಿರುತ್ತವೆ. ಶಾಲೆಗಳು ಮೂಲಸೌಕರ್ಯ ಕೊರತೆಯಿಂದ ಸಮಸ್ಯೆಗಳ ಸರಮಾಲೆಯನ್ನು ಹೊದ್ದುಕೊಂಡು ನಿಂತಿರುತ್ತವೆ. ಈ ಸ್ಥಿತಿಯು ಜನಪ್ರತಿನಿಧಿಗಳು ಮತ್ತು ಶಿಕ್ಷಣ ಇಲಾಖೆಯ ನಿರ್ಲಕ್ಷ್ಯವನ್ನು ಎತ್ತಿ ತೋರುತ್ತದೆ. ಮಳೆಗಾಲವನ್ನು ಗಮನದಲ್ಲಿ ಇರಿಸಿಕೊಂಡು ಸರ್ಕಾರವು ಬೇಸಿಗೆ ರಜೆ ಸಮಯದಲ್ಲಿ ಶಾಲೆಗಳ ಕಟ್ಟಡ ದುರಸ್ತಿಗೆ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಇಂತಹ ಯಾವುದೇ ಕ್ರಮಕ್ಕೆ ಮುಂದಾಗದಿದ್ದುದು ಶೋಚನೀಯ ಸಂಗತಿ.

ಈ ಕಾರಣದಿಂದಾಗಿ, ಸರ್ಕಾರಿ ಶಾಲೆಗಳಲ್ಲಿ ಹಾಜರಾತಿ ಕೊರತೆ ಉಂಟಾಗುತ್ತಿದೆ. ಮಕ್ಕಳ ದಾಖಲಾತಿಯೂ ಕಡಿಮೆಯಾಗುತ್ತಿದೆ. ಪಾಲಕರು ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸಲು ಮುಂದಾಗುತ್ತಿದ್ದಾರೆ. ಬಹುತೇಕ ಬಡ ಕುಟುಂಬಗಳ ಮಕ್ಕಳೇ ಅಭ್ಯಾಸ ಮಾಡುವ ಸರ್ಕಾರಿ ಶಾಲೆಯನ್ನು ವ್ಯವಸ್ಥಿತಗೊಳಿಸಲು ಶಿಕ್ಷಣ ಇಲಾಖೆ ಮತ್ತು ಜನಪ್ರತಿನಿಧಿಗಳು ಗಮನಹರಿಸಬೇಕು. ಅದಲ್ಲದೆ ರಾಜ್ಯ ಸರ್ಕಾರವು ಪ್ರಸಕ್ತ ಬಜೆಟ್‌ನಲ್ಲಿ, ಶಿಥಿಲಗೊಂಡ ಸರ್ಕಾರಿ ಶಾಲೆಗಳ ಕಟ್ಟಡ ದುರಸ್ತಿಗೆ ಹಣವನ್ನು ಮೀಸಲಿಟ್ಟಿದೆ. ಶಿಕ್ಷಣ ಇಲಾಖೆ ಆ ಹಣವನ್ನು ತೀರಾ ದುಃಸ್ಥಿತಿಯಲ್ಲಿರುವ ಎಲ್ಲ ಕಟ್ಟಡಗಳ ಜೀರ್ಣೋದ್ಧಾರಕ್ಕೆ ಬಳಸಿಕೊಳ್ಳಬೇಕು. ಕನ್ನಡ ಶಾಲೆಗಳ ಉಳಿವಿಗಾಗಿ ಕ್ರಮ ಕೈಗೊಳ್ಳಬೇಕು.

ಬಸವರಾಜ ನರಗಟ್ಟಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



• ಸುಕೃತ ಎಸ್.

ಏಕರೂಪ ನಾಗರಿಕ ಸಂಹಿತೆ

ಸಂವಿಧಾನ ರಚನಾ ಸಭೆಯಲ್ಲಿ ಬೇಕು, ಬೇಡಗಳ ಚರ್ಚೆ

ಏಕರೂಪ ನಾಗರಿಕ ಸಂಹಿತೆ ಬೇಕು ಮತ್ತು ಏಕೆ ಬೇಡ ಎಂಬುದು ಇತ್ತೀಚಿನ ಚರ್ಚೆಯಲ್ಲ. ಸ್ವತಂತ್ರ ಭಾರತದ ಸಂವಿಧಾನ ರಚಿಸುವಾಗಲೇ ಈ ಬಗ್ಗೆ ವ್ಯಾಪಕ ಚರ್ಚೆ ನಡೆದಿತ್ತು. ಭಾರತದ ಕರಡು ಸಂವಿಧಾನದ 35ನೇ ವಿಧಿಯಲ್ಲಿ, 'ಸರ್ಕಾರವು ಭಾರತದಾದ್ಯಂತ ಅನ್ವಯವಾಗುವಂತೆ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಪ್ರಯತ್ನಿಸಬೇಕು' ಎಂದು ಉಲ್ಲೇಖಿಸಲಾಗಿತ್ತು. 1948ರ ನವೆಂಬರ್ 23ರಂದು ನಡೆದ ಸಂವಿಧಾನ ರಚನಾ ಸಭೆಯ ಕಲಾಪದಲ್ಲಿ ಈ ವಿಧಿಯನ್ನು ಚರ್ಚೆಗೆ ಎತ್ತಿಕೊಳ್ಳಲಾಗಿತ್ತು. ಈ ವಿಧಿಗೆ ಹಲವು ತಿದ್ದುಪಡಿಗಳನ್ನು ಕೆಲವು ಸದಸ್ಯರು ಸೂಚಿಸಿದ್ದರು, ಈ ವಿಧಿ ಏಕೆ ಅಗತ್ಯ ಎಂದು ಕೆಲವು ಸದಸ್ಯರು ಪ್ರತಿಪಾದಿಸಿದ್ದರು. ಸುದೀರ್ಘವಾದ ಈ ಚರ್ಚೆಯ ಆಯ್ದ ಭಾಗಗಳು ಇಲ್ಲಿವೆ

'ಧಾರ್ಮಿಕ ವಿಚಾರದಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲ'

ವೈಯಕ್ತಿಕ ಕಾನೂನುಗಳು ಧರ್ಮ ಮತ್ತು ಸಂಸ್ಕೃತಿಯ ಭಾಗ. ವೈಯಕ್ತಿಕ ಕಾನೂನಿಗೆ ಧಕ್ಕೆ ತರುವುದು ಎಂದರೆ, ಅದು ವ್ಯಕ್ತಿಯ ಜೀವನಕ್ರಮದ ಮೇಲೆ ಪ್ರಹಾರ ನಡೆಸುವುದೇ ಆಗಿದೆ. ಈ ವೈಯಕ್ತಿಕ ಕಾನೂನುಗಳನ್ನು ಜನರು ಹಲವು ಪೀಳಿಗೆಗಳಿಂದ ಅನುಸರಿಸಿಕೊಂಡು ಬರುತ್ತಿದ್ದಾರೆ. ಜಾತ್ಯತೀತ ದೇಶವೊಂದನ್ನು ನಿರ್ಮಾಣ ಮಾಡಬೇಕು ಎಂದು ನಾವು ತೀರ್ಮಾನಿಸಿದ್ದೇವೆ. ಹೀಗಿರುವಾಗ, ಜಾತ್ಯತೀತ ದೇಶವೊಂದು ಜನರ ಜೀವನಕ್ರಮದಲ್ಲಿ, ಅವರ ಧರ್ಮ ಅನುಸರಣೆಯಲ್ಲಿ ಮಧ್ಯಪ್ರವೇಶಿಸುವುದು ತಪ್ಪಾಗುತ್ತದೆ. ನಾವು ಪ್ರಸ್ತಾಪಿಸಿರುವ ತಿದ್ದುಪಡಿಗಳು ಅಲ್ಪಸಂಖ್ಯಾತರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇವುಗಳು ಬಹುಸಂಖ್ಯಾತರಿಗೂ ಅನ್ವಯವಾಗುತ್ತವೆ. ಜೊತೆಗೆ, ಅಲ್ಪಸಂಖ್ಯಾತರ ಹಕ್ಕುಗಳನ್ನು ಬಹುಸಂಖ್ಯಾತರು ಒಪ್ಪಂದದ ಮೂಲಕವಾಗಿ ಕಾಪಾಡುತ್ತಿರುವಂಥ ಹಲವು ಉದಾಹರಣೆಗಳನ್ನು ಐರೋಪ್ಯ ದೇಶಗಳಲ್ಲಿ ಕಾಣಬಹುದಾಗಿದೆ.

ಈಗಾಗಲೇ ಇರುವ ವೈಯಕ್ತಿಕ ಕಾನೂನುಗಳನ್ನು ಉಳಿಸಿಕೊಳ್ಳಬೇಕು ಎಂಬುದು ನಮ್ಮ ಆಗ್ರಹ. ದೇಶದಲ್ಲಿ ಸೌಹಾರ್ದವನ್ನು ಕಾಪಾಡಬೇಕು ಎಂಬುದಕ್ಕಾಗಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿ ಮಾಡಬೇಕು ಎನ್ನುವುದು ಈ ವಿಧಿಯ ಉದ್ದೇಶ. ಆದರೆ ದೇಶದಲ್ಲಿ ಸೌಹಾರ್ದ ಉಳಿಸಬೇಕು ಎನ್ನುವುದಕ್ಕಾಗಿ ವೈಯಕ್ತಿಕ ಕಾನೂನುಗಳು ಸೇರಿದಂತೆ, ನಾಗರಿಕ ಕಾನೂನುಗಳನ್ನು ಏಕರೂಪಗೊಳಿಸುವ ಅಗತ್ಯ ಇಲ್ಲ. ಏಕರೂಪ ಕಾನೂನನ್ನು ಜಾರಿಗೊಳಿಸುವುದು, ವಾಸ್ತವದಲ್ಲಿ ಜನರ ನಡುವಣ ಸೌಹಾರ್ದವನ್ನೇ ಹಾಳುಗೆಡುವುತ್ತವೆ.

ಮೊಹಮ್ಮದ್ ಇಸ್ಮಾಯಿಲ್ ಖಾನ್, ಸಂವಿಧಾನ ರಚನಾ ಸಭೆಯಲ್ಲಿ ಮುಸ್ಲಿಂ ಲೀಗ್‌ನ ಯುನೈಟೆಡ್ ಪ್ರಾವಿನೆನ್ಸ್ ಪ್ರತಿನಿಧಿ

'ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆ'

ಏಕರೂಪ ನಾಗರಿಕ ಸಂಹಿತೆಯಿಂದ ಮುಸ್ಲಿಮರಿಗೆ ಧಕ್ಕೆಯಾಗುತ್ತದೆ ಎಂಬುದಕ್ಕಷ್ಟೇ ನನ್ನ ವಾದ ಸೀಮಿತವಾಗಿಲ್ಲ. ದೇಶದಲ್ಲಿರುವ ಧಾರ್ಮಿಕ ಕಾನೂನುಗಳು ಹಾಗೂ ನಾಗರಿಕ ಕಾನೂನುಗಳು, ದೇಶದ ಜನರ ಧಾರ್ಮಿಕ ನಂಬುಗೆ ಹಾಗೂ ಸಂಪ್ರದಾಯದಿಂದ ರೂಪುಗೊಂಡಿವೆ. ಇವು ದೇಶದಲ್ಲಿರುವ ಪ್ರತಿಯೊಂದು ಸಮುದಾಯಕ್ಕೂ, ಪ್ರತಿಯೊಂದು ಧರ್ಮಕ್ಕೂ ಅನ್ವಯವಾಗುತ್ತವೆ. ಏಕರೂಪ ಸಂಹಿತೆ ಜಾರಿಯಾಗಬೇಕು ಎಂದಾದರೆ, ಇಂಥ ಧಾರ್ಮಿಕ ಕಾನೂನುಗಳನ್ನು ಕೈಬಿಡಬೇಕಾಗುತ್ತದೆ.

ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಧರ್ಮವನ್ನು ಅನುಸರಿಸುವ, ಧರ್ಮವನ್ನು ಪ್ರಚಾರ ಮಾಡುವ ಸಮಾನ ಧಾರ್ಮಿಕ ಸ್ವಾತಂತ್ರ್ಯವನ್ನು ಸಂವಿಧಾನದ 19ನೇ ವಿಧಿ ನೀಡುತ್ತದೆ. 'ಧಾರ್ಮಿಕ ಆಚರಣೆಗಳೊಂದಿಗೆ ಗುರುತಿಸಿಕೊಂಡಿರುವ ಯಾವುದೇ ಆರ್ಥಿಕ, ರಾಜಕೀಯ ಮತ್ತು ಇತರೆ ಜಾತ್ಯತೀತ ಚಟುವಟಿಕೆಗಳನ್ನು ನಿರ್ಬಂಧಿಸುವ ಅಥವಾ ನಿಯಂತ್ರಿಸುವ ಸಂಬಂಧ ಈಗಾಗಲೇ ಇರುವ ಕಾನೂನುಗಳು ಮತ್ತು ಸರ್ಕಾರ ಮುಂದೆ ರಚಿಸಲಿರುವ ಕಾನೂನುಗಳ ಅನುಷ್ಠಾನಕ್ಕೆ 19ನೇ ವಿಧಿ ಅಡ್ಡಿಪಡಿಸುವುದಿಲ್ಲ' ಎಂದು 19ನೇ ವಿಧಿಯ ಎರಡನೇ ಉಪವಿಧಿಯಲ್ಲಿ ವಿವರಿಸಲಾಗಿದೆ. ಧಾರ್ಮಿಕ ಆಚರಣೆಗಳೊಂದಿಗೆ ನಂಟು ಹೊಂದಿರುವ ಆರ್ಥಿಕ, ರಾಜಕೀಯ ಮತ್ತು ಇತರೆ ಜಾತ್ಯತೀತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಕಾನೂನು ರಚಿಸುವುದಕ್ಕೆ ಮಾತ್ರ ಈ ವಿಧಿ ಅವಕಾಶ ನೀಡುತ್ತದೆ. ಸರ್ಕಾರ ಕಾನೂನು ರಚಿಸಬಹುದಾದ ಅಧಿಕಾರದ ವ್ಯಾಪ್ತಿಯಲ್ಲಿ ಏಕರೂಪ ನಾಗರಿಕ ಸಂಹಿತೆ ಇಲ್ಲ. ಹೀಗಿದ್ದೂ ಸರ್ಕಾರವು ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತಂದರೆ, ಕರಡು ಸಂವಿಧಾನದಲ್ಲಿ ಕೊಡಮಾಡಿರುವ ಧಾರ್ಮಿಕ ಸ್ವಾತಂತ್ರ್ಯವನ್ನು ಸರ್ಕಾರವೇ ಉಲ್ಲಂಘಿಸಿದಂತಾಗುತ್ತದೆ.

ಬ್ರಿಟಿಷರು ತಮ್ಮ 175 ವರ್ಷಗಳ ಆಳ್ವಿಕೆಯಲ್ಲಿ ನೋಂದಣಿ ಕಾಯ್ದೆ, ನಾಗರಿಕ ಪ್ರಕ್ರಿಯಾ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ, ದಂಡ ಸಂಹಿತೆ, ಸಾಕ್ಷ್ಯ ಕಾಯ್ದೆ ಸೇರಿ ಹಲವು ಕಾನೂನುಗಳನ್ನು ಜಾರಿಗೆ ತಂದಿದ್ದರು. ಆದರೆ, ಮದುವೆ, ಉತ್ತರಾಧಿಕಾರ ಸೇರಿದಂತೆ ವೈಯಕ್ತಿಕ ಕಾನೂನುಗಳಲ್ಲಿ ಅವರು ಹಸ್ತಕ್ಷೇಪ ಮಾಡಲಿಲ್ಲ. ಏಕರೂಪ ನಾಗರಿಕ ಸಂಹಿತೆಯನ್ನು ಸರ್ಕಾರ ಜಾರಿಗೆ ತರಬಹುದು ಎಂದು 35ನೇ ವಿಧಿ (ಈಗ 44ನೇ ವಿಧಿ) ಹೇಳುತ್ತದೆ. ಆ ಪ್ರಕಾರ ಸರ್ಕಾರವು ಎಲ್ಲಾ ವಿವಾಹಗಳೂ ನೋಂದಣಿಯಾಗಬೇಕು. ಇಲ್ಲದಿದ್ದರೆ ಮದುವೆಯು ಅಸಿಂಧು ಆಗುತ್ತದೆ ಎಂದು ಕಾನೂನು ಮಾಡುತ್ತದೆ ಎಂದಿಟ್ಟುಕೊಳ್ಳಿ. ಈಗಾಗಲೇ ವೈಯಕ್ತಿಕ ಕಾನೂನುಗಳ ಅನ್ವಯ ನಡೆದಿರುವ ವಿವಾಹಗಳು ಅಸಿಂಧುವಾಗುವುದಿಲ್ಲವೇ? ಆ ಮದುವೆಯು ಹೊಸ ಕಾನೂನುಗಳ ಅನ್ವಯ ನೋಂದಣಿ ಆಗಿಲ್ಲ ಎಂದಾದರೆ, ಆ ದಂಪತಿಯ ಮಕ್ಕಳು ಅನಾಥರಾಗಬೇಕೆ? – ವೈಯಕ್ತಿಕ ಕಾನೂನುಗಳನ್ನು ನಿರಾಕರಿಸಿದರೆ ಆಗುವ ಪರಿಣಾಮದ ಒಂದು ಉದಾಹರಣೆ ಇದು.

ವೈಯಕ್ತಿಕ ಕಾನೂನುಗಳಲ್ಲಿ ಕೆಲವು ಕೆಟ್ಟ ಆಚರಣೆಗಳು ಇವೆ. ಅವನ್ನು ಬದಲಾಯಿಸಬಹುದು. ಸಂಬಂಧಿತ ಜನರಿಂದ ಒಪ್ಪಿಗೆ ಪಡೆದುಕೊಂಡೇ, ಯಾವುದೇ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಆಗದಂತೇ ಜಾರಿಗೆ ತರಬೇಕು ಎನ್ನುವುದು ನಮ್ಮ ಆಗ್ರಹ.

ನಸೀರುದ್ದೀನ್ ಅಹಮ್ಮದ್
ಸಂವಿಧಾನ ರಚನಾ ಸಭೆಯಲ್ಲಿ ಪಶ್ಚಿಮ ಬಂಗಾಳದ ಪ್ರತಿನಿಧಿ



'ಒಟ್ಟು ಹಿತ ಮುಖ್ಯ, ಅಲ್ಪಸಂಖ್ಯಾತರದ್ದಲ್ಲ'

ಏಕರೂಪ ನಾಗರಿಕ ಸಂಹಿತೆಯ ಕುರಿತು ಈ ಹಿಂದೆಯೇ ಹಲವೆಡೆ, ಹಲವು ಸಮಿತಿಯ ಸಮ್ಮುಖದಲ್ಲಿ ಹಲವು ಬಾರಿ ಚರ್ಚೆ ನಡೆದಿದೆ. ಈ ಸಂಹಿತೆಯನ್ನು ವಿರೋಧಿಸಲು ಎರಡು ಕಾರಣಗಳನ್ನು ಮುಂದಿಡಲಾಗುತ್ತಿದೆ. ಇದು ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ ಎಂಬುದು ಮೊದಲನೆಯ ಕಾರಣ. ಈ ಸಂಹಿತೆಯು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆಗೆ ಕಾರಣವಾಗಲಿದೆ ಎಂಬುದು ಎರಡನೆಯ ಕಾರಣ.

ಸಮಾಜದ ಕಲ್ಯಾಣಕ್ಕಾಗಿ ಮತ್ತು ಸುಧಾರಣೆ ಕಾರಣಕ್ಕಾಗಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸಬಾರದು ಎಂದಿದ್ದ ಅಂಶವನ್ನು 19ನೇ ವಿಧಿಯಿಂದ ತೆಗೆದುಹಾಕಲಾಗಿದೆ. ಆದ್ದರಿಂದ, ಸಾಮಾಜಿಕ ಕಲ್ಯಾಣ ಅಥವಾ ಸುಧಾರಣೆಯ ಕಾರಣಕ್ಕಾಗಿ ಸರ್ಕಾರವು ಯಾವುದೇ ಕಾನೂನುಗಳನ್ನು ರೂಪಿಸಬಹುದು ಎಂಬುದನ್ನು ಈ ಸಂಸತ್ತು ಒಪ್ಪಿಕೊಂಡಿದೆ.

ಏಕರೂಪ ನಾಗರಿಕ ಸಂಹಿತೆಯು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆಗೆ ಕಾರಣವಾಗುತ್ತದೆ ಎನ್ನುವ ವಾದವನ್ನು ಮಂಡಿಸಲಾಗುತ್ತಿದೆ. ಯಾವುದೇ ಆಧುನಿಕ ಮುಸ್ಲಿಂ ರಾಷ್ಟ್ರದಲ್ಲೂ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡುವಾಗ ಅಲ್ಲಿನ ಅಲ್ಪಸಂಖ್ಯಾತರ ವೈಯಕ್ತಿಕ ಕಾನೂನುಗಳನ್ನು ಪರಿಗಣನೆಗೆ ತೆಗೆದುಕೊಂಡೇ ಇಲ್ಲ. ಟರ್ಕಿ ಹಾಗೂ ಈಜಿಪ್ಟ್ ದೇಶಗಳ ಉದಾಹರಣೆಗಳನ್ನೇ ನೋಡಿ. ಇಲ್ಲಿರುವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಹಕ್ಕು ನೀಡಲಾಗಿಲ್ಲ.

ಬ್ರಿಟಿಷ್ ಆಡಳಿತದಲ್ಲಿ ದೇಶದಲ್ಲಿ ಷರಿಯಾ ಕಾನೂನು ಜಾರಿಗೊಳಿಸಲಾಗಿತ್ತು. ಆಗ ಮುಸ್ಲಿಂ ಧರ್ಮದ ಖೋಜಾ ಹಾಗೂ ಕುಚಿ ಮೆಮನ್ ಎನ್ನುವ, ಮುಸ್ಲಿಮರಲ್ಲೇ ಅಲ್ಪಸಂಖ್ಯಾತರಾದ ಸಮುದಾಯದವರು ಅಸಮಾಧಾನಗೊಂಡಿದ್ದರು. ಖೋಜಾ ಹಾಗೂ ಕುಚಿ ಮೆಮನ್‌ಗಳು ಹಿಂದೂ ಧರ್ಮದಿಂದ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡವರು. ಮತಾಂತರಗೊಂಡ ನಂತರವೂ ಅವರು ಹಿಂದೂ ಆಚರಣೆಗಳನ್ನೇ ಅನುಸರಿಸುತ್ತಿದ್ದರು. ಈ ಎರಡು ಅಲ್ಪಸಂಖ್ಯಾತ ಸಮುದಾಯಗಳೂ ಸೇರಿ ಎಲ್ಲಾ ಮುಸ್ಲಿಮರ ಮೇಲೆ ಷರಿಯಾ ಕಾನೂನನ್ನು ಹೇರಲಾಯಿತು. ಅದನ್ನು ವಿರೋಧಿಸಲು ಈ ಸಮುದಾಯಗಳಿಗೆ ಧೈರ್ಯ ಸಾಲಲಿಲ್ಲ. ಆದ್ದರಿಂದ ಷರಿಯಾ ಕಾನೂನನ್ನೇ ಪಾಲಿಸಿಕೊಂಡು ಬಂದರು. ಷರಿಯಾ ಕಾನೂನು ಇಡೀ ಮುಸ್ಲಿಂ ಧರ್ಮದ ಮೇಲೆ ಜಾರಿ ಆಗಬೇಕು ಎಂಬುದು ಅಂದಿನ ಆಡಳಿತದಲ್ಲಿದ್ದ ಕೆಲವು ಮುಸ್ಲಿಂ ಸದಸ್ಯರ ಅಪೇಕ್ಷೆಯಾಗಿತ್ತು. ಹಾಗಾದರೆ, ಆ ಅಲ್ಪಸಂಖ್ಯಾತರ ಹಕ್ಕುಗಳ ಕಥೆ ಏನಾಯಿತು?

ಬೇರೆ ಬೇರೆ ಸಮುದಾಯಗಳನ್ನು ಸೇರಿಸಿಕೊಂಡು ಒಂದು ಧರ್ಮವನ್ನು ಮಾಡಿಕೊಳ್ಳುತ್ತೀರಿ ಎಂದಾದರೆ, ಆ ಎಲ್ಲಾ ಸಮುದಾಯಗಳ ಒಟ್ಟು ಹಿತವನ್ನು ಪರಿಗಣಿಸಬೇಕಾಗುತ್ತದೆಯೇ ಹೊರತು ಆ ಧರ್ಮದ ಯಾವುದೇ ಒಂದು ಸಮುದಾಯದ ಹಿತವನ್ನಲ್ಲ. ಈ ರೀತಿ ನೋಡುವುದಾದರೆ, ಏಕರೂಪ ನಾಗರಿಕ ಸಂಹಿತೆಯನ್ನು ಅಲ್ಪಸಂಖ್ಯಾತರ ಮೇಲಿನ ದಬ್ಬಾಳಿಕೆ ಎಂದು ಹೇಳಲಾಗದು.

ಐರೋಪ್ಯ ದೇಶಗಳನ್ನೇ ನೋಡಿ. ಜಗತ್ತಿನ ಯಾವ ದೇಶದಿಂದಾದರೂ ಜನರು ಐರೋಪ್ಯ ದೇಶಗಳಿಗೆ ಹೋಗಿ ನೆಲೆಸಬಹುದು. ಆದರೆ, ಅವರು ಆ ದೇಶದ ಏಕರೂಪ ನಾಗರಿಕ ಸಂಹಿತೆಯನ್ನೇ ಪಾಲಿಸಬೇಕು. ಇದು ಅಲ್ಲಿನ ಅಲ್ಪಸಂಖ್ಯಾತರಿಗೂ ಅನ್ವಯವಾಗುತ್ತದೆ. ಕಾಲಾನುಕ್ರಮದಲ್ಲಿ ನಮ್ಮ ದೇಶದ ಎಲ್ಲ ಜನರ ಜೀವನ ಕ್ರಮವು ಒಂದೇ ಆಗಬೇಕು; ಜಾತ್ಯತೀತವಾಗಬೇಕು. ಈ ದಿಸೆಯಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಯಾವ ರೀತಿಯಲ್ಲಿ ಜಾರಿ ಮಾಡಬಹುದು ಎಂಬುದಷ್ಟೇ ನಮ್ಮ ಚರ್ಚೆ ಆಗಬೇಕು.


ವೈಯಕ್ತಿಕ ಕಾನೂನಿಗೂ ಧರ್ಮಕ್ಕೂ ಸಂಬಂಧ ಏನು ಎನ್ನುವುದೇ ನನ್ನ ಅರ್ಥವ್ಯಾಪ್ತಿಗೆ ನಿಲುಕದ್ದಾಗಿದೆ. ನಮ್ಮ ಧರ್ಮದಿಂದ ವೈಯಕ್ತಿಕ ಕಾನೂನುಗಳನ್ನು ಬೇರ್ಪಡಿಸಬೇಕು. ಅವನ್ನು ಧರ್ಮದಿಂದ ದೂರ ಇರಿಸಬೇಕು. ಹಿಂದೂ ಕಾನೂನಿನ ಕರಡನ್ನೇ ಉದಾಹರಣೆಯಾಗಿ ನೋಡೋಣ. ಈ ಕರಡಿನಲ್ಲಿರುವ ಹಲವು ಅಂಶಗಳು ಮನು, ಯಾಜ್ಞವಲ್ಕ್ಯ ಅಥವಾ ಯಾವುದೇ ಋಷಿಗಳ ಅಭಿಪ್ರಾಯಗಳಿಗೆ ವಿರುದ್ಧವಾಗಿಯೇ ಇವೆ. ನಮ್ಮ ಸಮಾಜವು ಆಧುನಿಕಗೊಳ್ಳುತ್ತಿದೆ. ಪ್ರತಿ ಹೆಜ್ಜೆಯಲ್ಲಿಯೂ ನಾವೆಲ್ಲರೂ ಒಂದುಗೂಡಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಹೀಗೆ ದೇಶ ಒಗ್ಗಟ್ಟಾಗುವಲ್ಲಿ ಯಾವ ಧಾರ್ಮಿಕ ಸ್ವಾತಂತ್ರ್ಯವೂ ಅಡ್ಡಿಯಾಗಬಾರದು. ನಮ್ಮ ಧಾರ್ಮಿಕ ಆಚರಣೆಗಳು ನಮ್ಮ ಇಡೀ ಜೀವನಕ್ರಮವನ್ನು ಆವರಿಸಿಕೊಂಡಿವೆ ಎಂದು ಹೇಳಲಾಗುತ್ತಿದ್ದರೂ, ಈಗ ನಾವು ಅವನ್ನು ಹಿಂದಿಕ್ಕಬೇಕಾಗಿದೆ. ಈ ಎಲ್ಲವೂ ಧಾರ್ಮಿಕ ವಿಷಯಗಳಲ್ಲ, ಬದಲಿಗೆ ಇವು ಜಾತ್ಯತೀತ ವಿಷಯಗಳು ಎಂದು ನಾವು ಅರಿತುಕೊಳ್ಳಬೇಕಿದೆ.

ಕನ್ಹಯ್ಯಾಲಾಲ್ ಮಾಣೆಕ್‌ಲಾಲ್ ಮುನ್ಷಿ,
ಸಂವಿಧಾನ ರಚನಾ ಸಭೆಯಲ್ಲಿ ಬಾಂಬೆ ಕ್ಷೇತ್ರದ ಪ್ರತಿನಿಧಿ

ಆಧಾರ: ಲೋಕಸಭೆಯ ಡಿಜಿಟಲ್ ಗ್ರಂಥಾಲಯದ 'ಸಂವಿಧಾನ ರಚನಾ ಸಭೆಯ ಸಂಸದೀಯ ಚರ್ಚೆಗಳು'

ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆ: ಮುಂದುವರಿಯುತ್ತದೆ

ಸಿನಿ ಬಿಟ್ಸ್



'ಕಂಗುವ' ಟೀಸರ್‌ನಲ್ಲಿ ಸೂರ್ಯ ಜ್ವಾಲೆ

ತಮಿಳು ನಟ ಸೂರ್ಯ ಅಭಿನಯದ 'ಕಂಗುವ' ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. 3ಡಿ ಗ್ರಾಫಿಕ್ಸ್‌ನೊಂದಿಗಿನ ಕಾಡು, ಬೆಂಕಿಯಿಂದ ರಾಕ್ಷಸ ಲೋಕವನ್ನೇ ಸುಟ್ಟು ಭಸ್ಮ ಮಾಡುವ ವಿಭಿನ್ನ ಪಾತ್ರದಲ್ಲಿ ಸೂರ್ಯ ಕಾಣಿಸಿಕೊಂಡಿದ್ದಾರೆ. ಇದೊಂದು ಶಿಷ್ಟ ಮತ್ತು ದುಷ್ಟರ ನಡುವಿನ ಯುದ್ಧದ ಕಥೆ ಎಂಬುದು ಟೀಸರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

'ಸಿಂಗಂ', 'ಪರುತ್ತಿವೀರನ್' ಮುಂತಾದ ಜನಪ್ರಿಯ ಚಿತ್ರಗಳನ್ನು ನಿರ್ಮಿಸಿರುವ ಕೆ.ಇ.ಜ್ಞಾನವೇಲ್ ರಾಜ, ತಮ್ಮ ಸ್ಟುಡಿಯೋ ಗ್ರೀನ್ ಸಂಸ್ಥೆಯಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ರಜನಿಕಾಂತ್ ಅವರ 'ಅಣ್ಣಾತ್ತೆ' ಸೇರಿದಂತೆ ಹಿಟ್ ಸಿನಿಮಾಗಳನ್ನು ನೀಡಿದ್ದ ಶಿವ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರೀಕರಣ ಪ್ರಗತಿಯಲ್ಲಿದ್ದು, 2024ರಲ್ಲಿ ಜಗತ್ತಿನಾದ್ಯಂತ 10 ಭಾಷೆಗಳಲ್ಲಿ ಏಕಕಾಲಕ್ಕೆ ಚಿತ್ರ ಬಿಡುಗಡೆಯಾಗಲಿದೆ.

ಬಾಲಿವುಡ್‌ನ ಜನಪ್ರಿಯ ನಟಿ ದಿಶಾ ಪಟಾಣಿ ಈ ಚಿತ್ರದ ಮೂಲಕ ತಮಿಳು ಚಿತ್ರರಂಗಕ್ಕೆ ಎಂಟ್ರಿ ಕೊಡುತ್ತಿದ್ದಾರೆ. 'ರಾಕ್ ಸ್ಟಾರ್' ಎಂದೇ ಜನಪ್ರಿಯರಾಗಿರುವ ದೇವಿ ಶ್ರೀ ಪ್ರಸಾದ್ ಸಂಗೀತ ಸಂಯೋಜನೆ, ವೆಟ್ರಿ ಪಳನಿಸ್ವಾಮಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಅನಿರುದ್ಧ್‌ಗೆ ಜೊತೆಯಾದ ನಿಧಿ ಸುಬ್ಬಯ್ಯ, ರೆಚೆಲ್ ಡೇವಿಡ್

ನಟ ಅನಿರುದ್ಧ್ ಜತ್ಕರ್ ಕಿರುತೆರೆಯಿಂದ ಮತ್ತೆ ಹಿರಿತೆರೆಯತ್ತ ಹೊರಳಿದ್ದಾರೆ. ಇತ್ತೀಚೆಗಷ್ಟೇ ವಿಜಯ್ ರಾಘವೇಂದ್ರ ಅವರ 'ರಾಘು' ಚಿತ್ರಕ್ಕೆ ಆ್ಯಕ್ಷನ್-ಕಟ್ ಹೇಳಿದ್ದ ಎಂ.ಆನಂದರಾಜ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಚಿತ್ರದಲ್ಲಿ ಅನಿರುದ್ಧ್ ನಾಯಕರಾಗಿ ನಟಿಸುತ್ತಿದ್ದಾರೆ. ಇತ್ತೀಚೆಗಷ್ಟೇ ಮೈಸೂರಿನ ಡಾ||ವಿಷ್ಣುವರ್ಧನ್ ಸ್ಮಾರಕದಲ್ಲಿ ಭಾರತಿ ವಿಷ್ಣುವರ್ಧನ್ ಚಿತ್ರಕ್ಕೆ ಚಾಲನೆ ನೀಡಿ ಶುಭಹಾರೈಸಿದರು.

ಅನಿರುದ್ಧ್ ಅವರಿಗೆ ನಾಯಕಿಯರಾಗಿ ನಿಧಿ ಸುಬ್ಬಯ್ಯ ಹಾಗೂ 'ಲವ್ ಮಾಕ್ಟೇಲ್ 2' ಖ್ಯಾತಿಯ ರೆಚೆಲ್ ಡೇವಿಡ್ ಕಾಣಿಸಿಕೊಳ್ಳುತ್ತಿದ್ದಾರೆ. ಆಗಸ್ಟ್ 10ರಿಂದ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಬೆಂಗಳೂರು, ತುಮಕೂರು ಹಾಗೂ ಮಂಗಳೂರಿನಲ್ಲಿ ಚಿತ್ರೀಕರಣ ನಡೆಯಲಿದೆ.

ದಮ್ಮಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಉದಯಲೀಲಾ ಛಾಯಾಗ್ರಹಣ, ವಿಜೇತ್ ಚಂದ್ರ ಸಂಕಲನ, ರಿತ್ವಿಕ್ ಮುರಳಿಧರ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಶರತ್ ಲೋಹಿತಾಶ್ವ, ಕೆ.ಎಸ್ ಶ್ರೀಧರ್, ಶಿವಮಣಿ ಮುಂತಾದವರು ತಾರಾಬಳಗದಲ್ಲಿದ್ದಾರೆ



ನಿಧಿ ಸುಬ್ಬಯ್ಯ, ಅನಿರುದ್ಧ್ ಹಾಗೂ ರೆಚೆಲ್ ಡೇವಿಡ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕೆಲವು ವ್ಯಕ್ತಿಗಳು ಯಾವುದಕ್ಕೋ (ಯಾವುದಕ್ಕೆ ಎಂಬುದಕ್ಕೆ ವಿಡಿಯೊದಲ್ಲಿ ಸ್ಪಷ್ಟತೆ ಇಲ್ಲ) ಕಲ್ಲೆಸೆಯುತ್ತಿರುವ ದೃಶ್ಯವಿರುವ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಕೊಳ್ಳಲಾಗುತ್ತಿದೆ. 'ಕೇರಳದಲ್ಲಿ ಮುಸ್ಲಿಮರು ಹಿಂದೂಗಳ ಬಂಗಲೆಗಳ ಮೇಲೆ ಕಲ್ಲು ಎಸೆಯುತ್ತಿದ್ದಾರೆ. ಕಾಶ್ಮೀರದಂತೆ ಕೇರಳದಿಂದಲೂ ಹಿಂದೂಗಳನ್ನು ಓಡಿಸಲು ಹೀಗೆ ಮಾಡುತ್ತಿದ್ದಾರೆ' ಎಂಬ ಬರಹವನ್ನು ಹಂಚಿಕೊಳ್ಳಲಾಗುತ್ತಿದೆ. ಕೆಲವರು ಈ ಘಟನೆಯು ಮಲಪ್ಪುರದಲ್ಲಿ ನಡೆದಿದೆ ಎಂದು ಹೇಳಿದ್ದಾರೆ. ಕಲ್ಲೆಸೆದ ನಂತರ 'ಅಲ್ಲಾಹು ಅಕ್ಬರ್' ಎಂದು ಮುಸ್ಲಿಂ ಯುವಕರು ಕೂಗುತ್ತಿದ್ದಾರೆ ಎಂದೂ ಹೇಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಈ ವಿಡಿಯೊವು 2016ರ ಆಗಸ್ಟ್ 15ರಿಂದಲೂ ಯೂಟ್ಯೂಬ್‌ನಲ್ಲಿದೆ. ಈ ಘಟನೆಯು ಕೇರಳದ ಕೊಯಿಕ್ಕೋಡ್ ಜಿಲ್ಲೆಯ ನಾದಾಪುರದಲ್ಲಿ ನಡೆದಿದೆ. ಮುಸ್ಲಿಂ ಲೀಗ್ ಹಾಗೂ ಸಿಪಿಎಂ ಕಾರ್ಯಕರ್ತರ ಮಧ್ಯೆ ನಡೆದ ಜಗಳ ಇದಾಗಿದೆ. ಮುಸ್ಲಿಂ ಲೀಗ್‌ನ ಕಾರ್ಯಕರ್ತರೊಬ್ಬರನ್ನು ಸಿಪಿಎಂ ಕಾರ್ಯಕರ್ತರೊಬ್ಬರು ಹತ್ಯೆ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಈ ಘಟನೆ ನಡೆದಿದೆ. ಬಿಜೆಪಿ, ಕಾಂಗ್ರೆಸ್ ಹಾಗೂ ಸಿಪಿಎಂ ಕಾರ್ಯಕರ್ತರ ಮನೆಗಳ ಮೇಲೂ ಕಲ್ಲುತೂರಾಟ ನಡೆದಿದೆ. ಈ ಸಂಬಂಧ 50 ಮಂದಿಯನ್ನು ಬಂಧಿಸಲಾಗಿದೆ. ಈ ಬಗ್ಗೆ ಕೇರಳದ 'ಮನೋರಮಾ' ಪತ್ರಿಕೆ ವರದಿ ಮಾಡಿದೆ. ಆದ್ದರಿಂದ ಈ ಘಟನೆಯು ಕೋಮು ದ್ವೇಷದ ಕಾರಣದಿಂದ ನಡೆದಿದ್ದಲ್ಲ, ಬದಲಿಗೆ ರಾಜಕೀಯ ದ್ವೇಷದಿಂದ ನಡೆದಿದ್ದು ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದೃಷ್ಟಿ ಸೂಕ್ಷ್ಮ

ಕಷ್ಟ ಜೀವದ ಪಾಕ, ಕಷ್ಟ ಧರ್ಮವಿವೇಕ |
ಎಷ್ಟೆಷ್ಟು ನೀತಿಯುಕ್ತಿಗಳ ಬಗೆದಡೆಯುಂ ||
ಇಷ್ಟಷ್ಟು ನಿನ್ನೊಳ್ ಒಳತಿಳಿವಿಲ್ಲದಿರೆ ನಷ್ಟ |
ದೃಷ್ಟಿ ಸೂಕ್ಷ್ಮಗಮುವೆ ಗತಿಯೊ – ಮಂಕುತಿಮ್ಮ ||
933 ||

ಪದ-ಅರ್ಥ: ಬಗೆದಡೆಯುಂ = ಅರಿತದೆಯೂ, ನಿನ್ನೊಳ್ = ನಿನ್ನಲ್ಲಿ, ಒಳತಿಳಿವಿಲ್ಲದಿರೆ = ಒಳತಿಳಿವು + ಇಲ್ಲದಿರೆ.

ವಾಚ್ಯಾರ್ಥ: ಜೀವ ಪಕ್ವತೆಯನ್ನು ಪಡೆಯುವುದು ಕಷ್ಟ, ಧರ್ಮದ ವಿವೇಕ ಅರ್ಥವಾಗುವುದು ಕಷ್ಟ. ಎಷ್ಟೇ ನೀತಿ ಯುಕ್ತಿಗಳನ್ನು ಓದಿ, ಕೇಳಿ ತಿಳಿದರೂ, ನಿನ್ನಲ್ಲಿ ಆಂತರ್ಯದ ತಿಳಿವು ಇಲ್ಲದಿದ್ದರೆ ವ್ಯರ್ಥ. ದೃಷ್ಟಿಯಲ್ಲಿ ಸೂಕ್ಷ್ಮತೆಯೇ ಬಾಳಿಗೆ ಗತಿ.

ವಿವರಣೆ: ಜೀವ ಕಷ್ಟದ ಬೆಂಕಿಯಲ್ಲಿ ಹಾದು ಬಂದಾಗ ಪಕ್ವವಾಗುತ್ತದೆ ಎಂದು ಹೇಳುತ್ತಾರೆ. ಅದು ಸರಿಯಲ್ಲ. ಪ್ರಪಂಚದಲ್ಲಿ ಲಕ್ಷಾಂತರ ಜನ ನಿತ್ಯ ಬದುಕಿನ ಬೆಂಕಿಯಲ್ಲಿ ಬೇಯುತ್ತಾರೆ. ಆದರೆ ಎಲ್ಲರೂ ದೊಡ್ಡವರಾಗುವುದಿಲ್ಲ. ಸಾಮಾನ್ಯವಾಗಿ ಡಾ. ದ.ರಾ ಬೇಂದ್ರೆಯವರನ್ನು ಪರಿಚಯಿಸುವಾಗ, "ಬೆಂದರೆ ಬೇಂದ್ರೆಯಾಗುತ್ತಾರೆ" ಎಂದು ಹೇಳುವುದು ಕ್ಲೀಷೆಯಾಗಿತ್ತು. ಆ ಮಾತಿಗೆ ಕಾರಣ ಅವರು ಬದುಕಿನುದ್ದಕ್ಕೂ ಕಂಡ ಸಮಸ್ಯೆಗಳ, ದುಃಖದ ಸರಪಳಿ. ಹಾಗೆ ಅವರು ಬೆಂದು ಬಂದದ್ದರಿಂದ ಅವರೊಬ್ಬ ವರಕವಿಗಳಾದರು ಎನ್ನುವುದು ಆ ಮಾತಿನ ಅರ್ಥ. ಅವರಿಗೂ ಆ ಮಾತು ಕೇಳಿ ಕೇಳಿ ಬೇಸರವಾಗಿದ್ದಿರಬೇಕು. ಒಂದು ಕಾರ್ಯಕ್ರಮದಲ್ಲಿ ಒಬ್ಬರು ಅದೇ ಮಾತು ಹೇಳಿದರು, ಬೆಂದರೆ ಬೇಂದ್ರೆಯಾಗ್ತಾರೆ". ತಕ್ಷಣ ಬೇಂದ್ರೆ ಸಿಡಿದೆದ್ದರು. "ನಿನ್ನ ತಲೀ. ಒಳಗ ಹಸಿ ಇದ್ದರ ಬೇಯತಾರ. ಇಲ್ಲದಿದ್ದರ ಸುಟ್ಟು ಬೂದಿಯಾಗ್ತಾರ". ಎಂಥ ಸರಿಯಾದ ಮಾತು! ಒಳಗೆ ಹಸಿ ಇದ್ದರೆ, ಅಂದರೆ ಒಳಗೆ ಶಕ್ತಿ ಇದ್ದರೆ, ತಿಳಿವಿದ್ದರೆ ಬದುಕು ಬೆಂದು ಪಾಕವಾಗುತ್ತದೆ. ಅದಿಲ್ಲದಿದ್ದರೆ ಸುಟ್ಟು ಬೂದಿಯಾಗುತ್ತದೆ. ಕಗ್ಗದ ಮಾತು ಅದು. ಜೀವ ಪಾಕವಾಗುವುದು ಕಷ್ಟ.

ಧರ್ಮ ವಿವೇಕವಂತೂ ಇನ್ನೂ ಕಷ್ಟ. ಯಾವುದು ತಪ್ಪು ಎಂದು ತಿಳಿದುಕೊಂಡು, ತಮ್ಮ ಮನಸ್ಸನ್ನು ತಾವೇ ನಿಯಂತ್ರಿಸಿಕೊಳ್ಳುವ ಸಾಮರ್ಥ್ಯವೇ ವಿವೇಕ. ಈ ವಿವೇಕ ಗ್ರಂಥಗಳ ಓದಿನಿಂದ, ಕೇಳಿದ ಪ್ರವಚನಗಳಿಂದ ಬರುವುದಲ್ಲ. ರಾವಣನೇನು ಸಾಮಾನ್ಯ ಜ್ಞಾನಿಯೇ? ಸರ್ವಶಾಸ್ತ್ರಗಳನ್ನು ತಿಳಿದವನು. ಆದರೆ ವಿವೇಕವಿಲ್ಲದೆ ನಾಶವಾದ. ದುರ್ಯೋಧನನಿಗೆ ಧರ್ಮದ ಜ್ಞಾನ ಇರಲಿಲ್ಲವೆ? ಇತ್ತು, ಆದರೆ ವಿವೇಕವಿರಲಿಲ್ಲ. ಅದಕ್ಕೇ ಹೇಳಿದ, "ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿ, ಜಾನಾಮಿ ಅಧರ್ಮಂ ನ ಚ ಮೇ ನಿವೃತ್ತಿ". ಧರ್ಮ ಯಾವುದು ಎಂಬುದು ತಿಳಿದಿದೆ ಆದರೆ ಅದು ನನ್ನ ಪ್ರವೃತ್ತಿಯಲ್ಲ. ಅಧರ್ಮ ಯಾವುದೆಂಬುದೂ ಗೊತ್ತಿದೆ ಆದರೆ ನನಗೆ ಅದರಿಂದ ಬಿಡುಗಡೆ ಇಲ್ಲ. ಅದಕ್ಕೇ ಕಗ್ಗ ಹೇಳುತ್ತದೆ, ಎಷ್ಟು ನೀತಿಪಾಠಗಳನ್ನು ಕೇಳಿ ಕಲಿತಿದ್ದರೂ, ವಿವೇಕದೃಷ್ಟಿ ಸೂಕ್ಷ್ಮವಾಗಿಲ್ಲದಿದ್ದರೆ ಬದುಕಿಗೆ ಶ್ರೇಯಸ್ಸಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜುಲೈ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಶುದ್ಧ ಷಷ್ಠಿ ಗಂ. 13-43, ನಕ್ಷತ್ರ: ಹಸ್ತ ಗಂ. 22-12 ಯೋಗ: ಶಿವ ಗಂ. 14-51, ಕರಣ: ತೈತಿಲ, ಗಂ. 13-43, ಕರ್ಕಾಟಕ ಮಾಸದ 07 ನೇ ದಿನ,
ಮಳೆನಕ್ಷತ್ರ: ಪುಷ್ಯ 2. ರಾಹುಕಾಲ : ಬೆಳಗ್ಗೆ 07-30 - 09-00, ಸೂರ್ಯೋದಯ : 06-17
ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 05 ಮೊಹರಮ್
ಅದೃಷ್ಟ ಸಂಖ್ಯೆ : 7, 4

ಮೇಷ: ಜೀವನದ ವಿಶೇಷ ದಿನದ ಪ್ರಯುಕ್ತವಾಗಿ ವೃದ್ಧರ ಸೇವೆ ಮಾಡಿ. ಶ್ರೀಕೃಷ್ಣನ ಸ್ಮರಣೆ ನಿರಂತರವಾಗಿ ಮಾಡುವುದರಿಂದ ಬಂದಿರುವಂಥ ಸಕಲ ದುರಿತಗಳು ದೂರವಾಗುವುದು.

ವೃಷಭ: ವೈಯಕ್ತಿಕ ಕಾರ್ಯಗಳನ್ನು ಸಾಧಿಸಿಕೊಳ್ಳಲು ವಾಮಮಾರ್ಗವನ್ನು ಹಿಡಿಯುವುದು ಸರಿಯಲ್ಲ. ಆರೋಗ್ಯದಲ್ಲಿ ಸುಧಾರಣೆ ಕಾಣುವುದು. ಧಾರ್ಮಿಕ ಕಾರ್ಯಕ್ಕೆ ಹಣವ್ಯಯವಾಗುವುದು.

ಮಿಥುನ: ಅವಿವಾಹಿತರಿಗೆ ಕುಟುಂಬದವರು ನೋಡುವ ಯಾವ ಸಂಬಂಧಗಳು ಸಹ ಸರಿ ಹೋಗದಿರಬಹುದು. ಭೂ ವ್ಯವಹಾರದಲ್ಲಿ ಉತ್ತಮ ಲಾಭ. ಇಷ್ಟ ಬಂಧುಗಳಿಂದ ವಿಶೇಷ ವಸ್ತು ಉಡುಗೊರೆಯ ರೂಪದಲ್ಲಿ ದೊರೆಯುವುದು.

ಕರ್ಕಾಟಕ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಬಂದಿರುವ ಸಲಹೆ ಸರಿಯಾದದ್ದಾಗಿದೆ. ಮಕ್ಕಳ ಆರೋಗ್ಯದ ಏರುಪೇರಿನಿಂದಾಗಿ ಮಾನಸಿಕವಾಗಿ ಕಿರಿಕಿರಿ ವಾತಾವರಣ ಇರಲಿದೆ.

ಸಿಂಹ: ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣದಲ್ಲಿ ಉತ್ತಮವಾದ ಯಶಸ್ಸನ್ನು ಕಾಣುವರು. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಮನೆಯಲ್ಲಿ ಆಗಾಗ ಅಶಾಂತಿಯ ವಾತಾವರಣ ಸೃಷ್ಟಿಯಾಗಬಹುದು.

ಕನ್ಯಾ: ಅಧಿಕ ಥಂಡಿಯ ವಾತಾವರಣದಿಂದಾಗಿ ಮನೆಯಲ್ಲಿರುವ ಸೂಕ್ಷ್ಮ ವ್ಯಕ್ತಿಯ ನಿಗಾವಹಿಸುವುದು ನಿಮ್ಮ ಪ್ರಮುಖ ಕಾರ್ಯವಾಗುವುದು. ದುರ್ಗಾ ದೇವಿಯನ್ನು ಆರಾಧಿಸಿದಲ್ಲಿ ಶುಭವು ಪ್ರಾಪ್ತಿಯಾಗುವುದು.

ತುಲಾ: ಸೇತುವೆ ನಿರ್ಮಾಣಕ್ಕೆ ಗುತ್ತಿಗೆ ಸಿಗಬಹುದು ಅಥವಾ ಕಾರ್ಮಿಕರಾಗುವ ಅವಕಾಶ ಸಿಗಬಹುದು. ಕಷ್ಟ ಕಾರ್ಪಣ್ಯಗಳ ಜೀವನದ ನಡುವೆ ಮಗನು ಹೊಸ ತಲೆನೋವನ್ನು ತರುವಂಥ ಸಾಧ್ಯತೆ ಇದೆ.

ವೃಶ್ಚಿಕ: ಇಷ್ಟವಿಲ್ಲದ ಸಂಬಂಧವನ್ನು ಹೊತ್ತು ತಂದ ಮಗಳ ಮೇಲೆ ಕೋಪ ಸಹಜವಾದರೂ ಸಹ ಜೀವನ ಆಕೆಯದ್ದು ಎಂಬಂಥ ಮಾತನ್ನು ಅರ್ಥೈಸಿಕೊಳ್ಳುವುದು ಸೂಕ್ತ. ನಿಮ್ಮ ನಿಷ್ಠೆ ಹಾಗೂ ಸತ್ಯದ ಮಾರ್ಗಕ್ಕೆ ಉತ್ತಮ ಫಲವಿದೆ.

ಧನು: ಕನ್ನಡ ಅಥವಾ ಮಾತೃಭಾಷೆಯ ಸಾಹಿತ್ಯದಲ್ಲಿ ಸಂಶೋಧನೆ ನಡೆಸುತ್ತಿರುವವರಿಗೆ ಸಮ್ಮಾನವಾಗುವ ಸಾಧ್ಯತೆ ಇದೆ. ನಿಮ್ಮನ್ನು ಅವಲಂಬಿಸಿಕೊಂಡು ಕೆಲಸ ಮಾಡುತ್ತಿರುವವರನ್ನು ಕಡೆಗಣಿಸುವಂತೆ ಮಾಡುವುದು ಸರಿಯಲ್ಲ.

ಮಕರ: ಅಂತರ್ಮುಖಿಗಳೇ ಆದರೂ ಅತಿಥಿಗಳನ್ನು ಶಿಷ್ಟಾಚಾರಕ್ಕಾಗಿ ಸತ್ಕರಿಸಲೇಬೇಕಾಗುತ್ತದೆ. ಗುರು ಹಾಗು ದೇವತಾ ಪ್ರಾರ್ಥನೆ ಮಾಡಿ ಹೊಸ ಕಾರ್ಯಗಳನ್ನು ಆರಂಭಿಸಿ.


ಕುಂಭ: ಹೊಸ ಜವಾಬ್ದಾರಿಗಳು ನೀವು ಅಂದುಕೊಂಡಷ್ಟು ಸುಲಭವಾಗಿಲ್ಲದೇ ಇರುವುದರಿಂದ ಹೊಂದಿಕೊಳ್ಳಲು ಅಧಿಕ ಪರಿಶ್ರಮ ಬೇಕಾಗುತ್ತದೆ. ವಿದ್ಯಾಭ್ಯಾಸದಲ್ಲಿ ಹಲವಾರು ಅಡೆತಡೆಗಳು ಬರುತ್ತವೆ.

ಮೀನ: ಕುಟುಂಬದಲ್ಲಿನ ನೂತನ ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ. ಪರ್ವತಾರೋಹಣ ಮಾಡುವ ಸಾಧ್ಯತೆ ಇದೆ. ಪುಸ್ತಕ ಮುದ್ರಕ ಹಾಗು ಮಾರಾಟಗಾರರಿಗೆ ಅಧಿಕವಾದ ಕೆಲಸ ಇರುತ್ತದೆ.

ಪದಬಂಧ 5389 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಂಡಾಯವನ್ನು ಹೀಗೂ ಹೇಳುವರು (3)
4.ಪುಸ್ತಕದ ಮೇಲು ಹೊದಿಕೆ (4)
6.ಹಿಡಿತದಿಂದ ಖರ್ಚು ಮಾಡುವಿಕೆ (4)
8.ಮೋಕ್ಷ ಮಾಡಿಸಿಕೊಂಡ ಕನ್ನೆ ಉಲ್ಟಾ ಕಾಣುತ್ತಿದೆ (3)
11.ನನಸಲ್ಲ! ಇದು ಸ್ವಪ್ನ (3)
13.ಪುರದಲ್ಲೇ ದೊರೆತ ಸನ್ಮಾನ (4)
17.ಇದು ಚಿಲ್ಲರೆ ಹಣ (4)
18.ಇರುಳಿಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1.ನಿಯಮಾನುಸಾರವಾದುದು (3)
2.ತಾಳ ಹಾಕುತ್ತಾ ಹೂಡಿದ ಸಂಪು (4)
3.ತಿರುಗಿದಾಗ ವ್ಯಕ್ತವಾದ ದುಃಖ (3)
5.ಗೆಳೆಯನೇಕೋ ತಿರುಗಿದ್ದಾನೆ (2)
7.ವಿಪುಲ ಎನ್ನುವುದಕ್ಕೆ ಪರ್ಯಾಯ ಪದ (3)
9.ಕನ್ನ ಹಾಕಿ ಕದ್ದೊಯ್ದ ಚಿನ್ನ (3)
10.ಕಾಂತಿ ಇಲ್ಲಿ ಕಾಣುತ್ತಿದೆ (3)
12.ದೇವತೆ ಮತ್ತು ರಾಕ್ಷಸರು ಒಟ್ಟಾಗಿದ್ದಾರೆ (4)
14.ಲಟ್ಟಣಿಗೆಯನ್ನು ಹೀಗೂ ಹೇಳುವರು (3)
15.ನಗರವಿಲ್ಲಿ ಉಲ್ಟಾ ಕಾಣುತ್ತಿದೆಯಲ್ಲಾ? (2)
16.ಕೋರೆಗಳನ್ನುಳ್ಳದ್ದು (3)



5388ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶೃಂಖಲವೃತ್ತಿ
4.ತರಬೇತಿ 5.ಷಹರು
7.ಪದಕ 9.ಯಥಾರ್ಥ
12.ವದನ 13.ಸಮಾರೋಪ
15.ಲೋಕವ್ಯವಹಾರ
ಮೇಲಿಂದ ಕೆಳಕ್ಕೆ:
1.ವಿದೂಷಕ 2.ತ್ರಿತ
3.ಪ್ರತಿಭೆ 6.ಉಗ್ರಾಣಲಯ
7.ಪದಾರ್ಥ 8.ಕಲರವ
10.ವನಚರ 11.ಕೆಸರು
14.ಪಲೋ

ಸುಡೊಕು 5775


4		7		8			2	
								8
6		5		9		4		
	2		6				3	5
5		3	2		1	8		9
	1				9		4	2
	6			2				
		8	9					7
	5			3	4		9	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5774 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಅಮೆರಿಕ ಕಂಪನಿ ತೆಕ್ಕೆಗೆ ಅದಾನಿ ಕ್ಯಾಪಿಟಲ್, ಹೌಸಿಂಗ್ ?



ಬೆಂಗಳೂರು (ರಾಯಿಟರ್ಸ್): ಅದಾನಿ ಕ್ಯಾಪಿಟಲ್ ಮತ್ತು ಅದಾನಿ ಹೌಸಿಂಗ್‌ನಲ್ಲಿ ಶೇಕಡ 90ರಷ್ಟು ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳುವ ಒಪ್ಪಂದಕ್ಕೆ ಬರಲಾಗಿದೆ ಎಂದು ಅಮೆರಿಕದ ಹೂಡಿಕೆ ಸಂಸ್ಥೆ ಬೇನ್ ಕ್ಯಾಪಿಟಲ್ ಭಾನುವಾರ ಹೇಳಿದೆ.

ಕಂಪನಿಗಳಲ್ಲಿ ಇರುವ ಅದಾನಿ ಕುಟುಂಬದ ಅಷ್ಟೂ ಖಾಸಗಿ ಹೂಡಿಕೆಗಳನ್ನು ಖರೀದಿ ಮಾಡಲಾಗುತ್ತಿದೆ ಎಂದು ಅದು ತಿಳಿಸಿದೆ.

ಅದಾನಿ ಕ್ಯಾಪಿಟಲ್‌ನ ಸಿಇಒ ಗೌರವ್ ಗುಪ್ತಾ ಅವರ ಬಳಿ ಶೇ 10ರಷ್ಟು ಷೇರು ಇರಲಿದ್ದು, ಅವರು ಸಿಇಒ ಆಗಿಯೇ ಮುಂದುವರಿಯಲಿದ್ದಾರೆ ಎಂದು ಬೇನ್ ಹೇಳಿದೆ.

ಅದಾನಿ ಕ್ಯಾಪಿಟಲ್‌ನಲ್ಲಿ ₹984 ಕೋಟಿ ಹೂಡಿಕೆ ಮಾಡುವುದಾಗಿಯೂ ಅದು ಹೇಳಿದೆ. ಹೆಚ್ಚುವರಿಯಾಗಿ ಪರಿವರ್ತಿಸಲಾಗದ ಸಾಲಪತ್ರಗಳ ರೂಪದಲ್ಲಿ ₹410 ಕೋಟಿ ನೀಡುವುದಾಗಿ ತಿಳಿಸಿದೆ. ಅದಾನಿ ಕ್ಯಾಪಿಟಲ್, ಅದಾನಿ ಸಮೂಹದ ಬ್ಯಾಂಕೇತರ ಹಣಕಾಸು ಸಂಸ್ಥೆ ಆಗಿದ್ದು, 2017ರಲ್ಲಿ ಕಾರ್ಯಾಚರಣೆ ಆರಂಭಿಸಿದೆ.

ಈ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಖರೀದಿ ವಹಿವಾಟು ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆ ಮಾಡಲಾಗಿದೆ.

'ಬೇನ್'ನಂತಹ ಅರ್ಹ ಹೂಡಿಕೆದಾರ ಖರೀದಿಗೆ ಮುಂದಾಗಿರುವುದು ಸಂತೋಷ ನೀಡಿದೆ. ವಹಿವಾಟು ಹಲವುಪಟ್ಟು ಏರಿಕೆ ಕಾಣಲು ಇದು ನೆರವಾಗಲಿದೆ ಎಂದು ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಹೇಳಿದ್ದಾರೆ.

'ಬಂದ್ ಆಗಲಿವೆ ವಿಷ ಹೊರಸೂಸುವ ಕಾರ್ಖಾನೆಗಳು'

ಪ್ರಜಾವಾಣಿ ವಾರ್ತೆ

ಬೀದರ್: 'ಬೀದರ್, ಹುಮನಾಬಾದ್ ತಾಲ್ಲೂಕಿನ ರಾಸಾಯನಿಕ ಕಾರ್ಖಾನೆಗಳಿಂದ ನೆಲ, ಜಲ ವಿಷವಾಗುತ್ತಿದೆ ಎಂಬ ಮಾಹಿತಿ ಇದೆ. ಸಾಬೀತಾದರೆ ಅಂತಹ ಕಾರ್ಖಾನೆಗಳನ್ನು ಬಂದ್ ಮಾಡಲು ಆದೇಶ ಹೊರಡಿಸಲಾಗುವುದು' ಎಂದು ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

'ರಾಸಾಯನಿಕ ಕಾರ್ಖಾನೆಗಳಿಂದ ಸಂಸ್ಕರಣೆ ಮಾಡದೆ ವಿಷಕಾರಿ ತ್ಯಾಜ್ಯ ಬಿಡುತ್ತಿರುವ ಬಗ್ಗೆ ವರದಿಗಳಿವೆ. ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ವಿಷಕಾರಕ ತ್ಯಾಜ್ಯ ಬಿಡುತ್ತಿದ್ದರೆ ಅವುಗಳನ್ನು ಮುಚ್ಚಿಸಲಾಗುವುದು. ರಾಜ್ಯದಲ್ಲಿ ಇಂತಹ ಕಾರ್ಖಾನೆಗಳಿಗೆ ಪ್ರೋತ್ಸಾಹ ಸಿಗುವುದಿಲ್ಲ' ಎಂದು ತಿಳಿಸಿದರು.

'13 ಗ್ರಾಮಗಳ ನೆಲ, ಜಲ ವಿಷ' ಶೀರ್ಷಿಕೆ ಅಡಿ 'ಪ್ರಜಾವಾಣಿ' ಇದೇ 21ರಂದು ವರದಿ ಪ್ರಕಟಿಸಿತ್ತು.

ಸಾಲ ಪಾವತಿ ಬಳಿಕ ಈ ಕೆಲಸ ಮಾಡಿ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಗೃಹಸಾಲ ಎಂಬುದು ಒಂದು ದೊಡ್ಡ ಆರ್ಥಿಕ ಜವಾಬ್ದಾರಿ. ಮನೆ ಸಾಲ ಮಾಡುವಾಗ ಹೇಗೆ ಅಳೆದು ತೂಗಿ, ಲೆಕ್ಕಾಚಾರ ಮಾಡಿ ಮುಂದುವರಿಯುತ್ತೀರೋ, ಹಾಗೆಯೇ ಸಾಲ ಮರುಪಾವತಿ ಕೊನೆಗೊಳಿಸುವಾಗಲೂ ಎಚ್ಚರಿಕೆಯ ಕೆಲವು ಹೆಜ್ಜೆಗಳನ್ನು ಇಡಬೇಕಾಗುತ್ತದೆ. ಗೃಹಸಾಲ ಪೂರ್ತಿಯಾಗಿ ಕಟ್ಟಿದ ಬಳಿಕ ಯಾವೆಲ್ಲ ಕ್ರಮಗಳನ್ನು ಅನುಸರಿಸಬೇಕು? ಬ್ಯಾಂಕಿನಿಂದ ಯಾವ ದಾಖಲೆಗಳನ್ನು ಪಡೆದುಕೊಳ್ಳಬೇಕು? ಸೂಕ್ತ ದಾಖಲೆಗಳನ್ನು ಪಡೆಯದಿದ್ದರೆ ಏನಾಗುತ್ತದೆ? ಬನ್ನಿ ಈ ಎಲ್ಲ ವಿಚಾರಗಳ ಬಗ್ಗೆ ತಿಳಿಯೋಣ.

1. ಅಸಲಿ ದಾಖಲೆ ಹಿಂಪಡೆಯಿರಿ: ಗೃಹಸಾಲ ನೀಡುವಾಗ ಬ್ಯಾಂಕ್ ನಿಮ್ಮ ಮನೆಯ ಮೂಲ ದಾಖಲೆಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿರುತ್ತದೆ. ಮನೆ ಸಾಲ ಮರುಪಾವತಿ ಪೂರ್ಣಗೊಳಿಸಿದ ಕೂಡಲೇ ಮಾಡಬೇಕಾದ ಮೊದಲ ಕೆಲಸವೆಂದರೆ ನಿಮ್ಮ ಪ್ರಮಾಣೀಕೃತ ದಾಖಲೆಗಳನ್ನು ಹಿಂಪಡೆಯುವುದು. ಸೇಲ್ ಡೀಡ್, ಟೈಟಲ್ ಡೀಡ್, ಸಾಲದ ಒಪ್ಪಂದ ಪತ್ರ, ಪವರ್ ಆಫ್ ಅಟಾರ್ನಿ, ಮನೆಯ ಖಾತೆ, ತೆರಿಗೆ ಪಾವತಿ ರಶೀದಿಗಳು, ಎನ್‌ಕಂಬರೆನ್ಸ್ ಸರ್ಟಿಫಿಕೇಟ್, ಮನೆಗೆ ಮಾಡಿಸಿರುವ ವಿಮಾ ಪಾಲಿಸಿ... ಹೀಗೆ ಸಾಲ ಪಡೆಯುವ ವೇಳೆ ಬ್ಯಾಂಕಿಗೆ ನೀಡಿದ್ದ ಎಲ್ಲ ದಾಖಲೆಗಳನ್ನು ವಾಪಸ್ ಪಡೆದುಕೊಳ್ಳಬೇಕು. ಕೊಟ್ಟಿದ್ದ ದಾಖಲೆಗಳು ಸುಸ್ಥಿತಿಯಲ್ಲಿವೇ ಎನ್ನುವುದನ್ನು ವಾಪಸ್ ಪಡೆಯುವಾಗ ದೃಢಪಡಿಸಿಕೊಳ್ಳಬೇಕು. ನಿಯಮದ ಪ್ರಕಾರ, ಸಾಲ ಪಾವತಿಸಿದ 15 ದಿನಗಳ ಒಳಗಾಗಿ ಬ್ಯಾಂಕ್, ಸಾಲ ಮರುಪಾವತಿ ಮಾಡಿದ ಗ್ರಾಹಕನಿಗೆ ಮೂಲ ದಾಖಲೆಗಳನ್ನು ಹಿಂದಿರುಗಿಸಬೇಕು.

2. ಬ್ಯಾಂಕಿನಿಂದ ಎನ್‌ಡಿಸಿ ಪಡೆಯಿರಿ: ಗೃಹ ಸಾಲ ಮರುಪಾವತಿಯಾದ ಬಳಿಕ ಬ್ಯಾಂಕಿನಿಂದ 'ನೋ ಡ್ಯೂ ಸರ್ಟಿಫಿಕೆಟ್' (ಅಂದರೆ, ಸಾಲದ ಯಾವುದೇ ಕಂತು ಇನ್ನು ಬಾಕಿ ಇಲ್ಲ) – ಎನ್‌ಡಿಸಿ – ಪಡೆದುಕೊಳ್ಳಬೇಕು. ನೀವು ಸಂಪೂರ್ಣ ಸಾಲವನ್ನು ಮರುಪಾವತಿ ಮಾಡಿದ್ದೀರಿ. ಮುಂದೆ ಯಾವುದೇ ಮೊತ್ತ ಪಾವತಿಯ ಅಗತ್ಯವಿಲ್ಲ ಎಂದು ಬ್ಯಾಂಕ್ ನಿಮಗೆ ಪ್ರಮಾಣಪತ್ರ ಕೊಡುತ್ತದೆ. ಈ ಪ್ರಮಾಣಪತ್ರ ನೀಡಿದ ಬಳಿಕ ಬ್ಯಾಂಕಿಗೆ ನಿಮ್ಮ ಆಸ್ತಿಯ ಮೇಲೆ ಯಾವುದೇ ಹಕ್ಕಿರುವುದಿಲ್ಲ. ಎನ್‌ಡಿಸಿ ಪಡೆಯುವಾಗ ಅದರಲ್ಲಿರುವ ಸಾಲ ಮರುಪಾವತಿಯ ಒಟ್ಟು ಮೊತ್ತ, ಸಾಲ ಮರುಪಾವತಿ ಮಾಡಿದವರ ಹೆಸರು, ವಿಳಾಸ, ಸಾಲದ ಕಂತು ಆರಂಭವಾದ ದಿನ ಮತ್ತು ಕೊನೆಗೊಂಡ ದಿನ ಸೇರಿದಂತೆ ಪೂರಕ ವಿವರಗಳು ಸರಿ ಇವೆಯೇ ನೋಡಿಕೊಳ್ಳಿ.

3. ಒಡೆತನದ ಹಕ್ಕು ನಿಮ್ಮ ಹೆಸರಿಗೆ ಮಾಡಿಕೊಳ್ಳಿ: ಗೃಹಸಾಲ ನೀಡುವಾಗ, ಸಾಲ ಪಡೆದ ವ್ಯಕ್ತಿಯ ಆಸ್ತಿಯ ಒಡೆತನದ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ. ಸಾಲದ ನಿಗದಿತ ಕಂತುಗಳನ್ನು ಒಂದೊಮ್ಮೆ ಪಾವತಿಸದಿದ್ದರೆ ಆಸ್ತಿ ಮಾರಾಟ ಮಾಡಿ ಸಾಲದ ಹಣ ಪಡೆದುಕೊಳ್ಳುವ ಹಕ್ಕು ಬ್ಯಾಂಕಿಗೆ ಇರುತ್ತದೆ. ಒಡೆತನದ ಹಕ್ಕನ್ನು ಬದಲಾಯಿಸದಿದ್ದರೆ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಲು ಬರುವುದಿಲ್ಲ. ಹಾಗಾಗಿ ಸಾಲ ಮರುಪಾವತಿ ಬಳಿಕ ಬ್ಯಾಂಕ್ ಪ್ರತಿನಿಧಿಯ ಜೊತೆಗೆ ನೀವು ಸಂಬಂಧಪಟ್ಟ ಉಪ ನೋಂದಣಾಧಿಕಾರಿ ಕಚೇರಿಗೆ ಭೇಟಿ ನೀಡಿ ಒಡೆತನದ ಹಕ್ಕನ್ನು ಬದಲಿಸಿಕೊಳ್ಳಬಹುದು.

4. ಖಾಲಿ ಚೆಕ್ ವಾಪಸ್ ಪಡೆದುಕೊಳ್ಳಿ: ಸಾಲ ಕೊಡುವ ಸಂದರ್ಭದಲ್ಲಿ ಬ್ಯಾಂಕಿನವರು ಖಾಲಿ ಚೆಕ್‌ಗಳಿಗೆ ಸಹಿ ಮಾಡಿಸಿಕೊಂಡಿರುತ್ತಾರೆ. ಒಂದೊಮ್ಮೆ ಸಾಲದ ಮಾಸಿಕ ಕಂತು ಪಾವತಿಸದಿದ್ದರೆ ಸಹಿ ಮಾಡಿದ ಚೆಕ್‌ಗಳನ್ನು ಬಳಸಿ ಹಣ ವಸೂಲಿ ಮಾಡಬಹುದು ಎನ್ನುವುದು ಇಲ್ಲಿನ ಲೆಕ್ಕಾಚಾರ. ಹಾಗಾಗಿ ಸಾಲ ಮರುಪಾವತಿಯ ಬಳಿಕ, ಸಹಿ ಮಾಡಿರುವ ಖಾಲಿ ಚೆಕ್‌ಗಳನ್ನು ವಾಪಸ್ ಪಡೆದು ಅವನ್ನು ಹರಿದುಹಾಕುವುದು ಉತ್ತಮ. ಇದರಿಂದ ಚೆಕ್‌ಗಳ ಸಂಭಾವ್ಯ ದುರ್ಬಳಕೆ ತಡೆಯಬಹುದು.

5. ಕ್ರೆಡಿಟ್ ಸ್ಕೋರ್ ಪರಿಷ್ಕರಣೆ: ಸಾಲ ಪಡೆದುಕೊಂಡಾಗ ನಾವು ಸರಿಯಾಗಿ ಮಾಸಿಕ ಕಂತುಗಳನ್ನು ಪಾವತಿ ಮಾಡುತ್ತಿದ್ದೇವೆಯೋ ಎನ್ನುವುದನ್ನು ಕ್ರೆಡಿಟ್ ಬ್ಯೂರೋಗಳು ಪರಿಶೀಲನೆ ಮಾಡಿ ಕ್ರೆಡಿಟ್ ಸ್ಕೋರ್ ನೀಡುತ್ತವೆ. ಹಾಗಾಗಿ ಸಾಲ ಮರುಪಾವತಿ ಮಾಡಿದ ನಂತರ ಕ್ರೆಡಿಟ್ ರಿಪೋರ್ಟ್‌ನಲ್ಲಿ ಸಾಲ ಮರುಪಾವತಿಯಾಗಿರುವ ಮಾಹಿತಿ ಪರಿಷ್ಕರಣೆ ಆಗಿದೆಯಾ ಎಂಬುದನ್ನು ನೋಡಿಕೊಳ್ಳಿ. ಸಾಲ ಮರುಪಾವತಿಯ ವಿಚಾರ ಕ್ರೆಡಿಟ್ ಬ್ಯೂರೋಗಳಿಗೆ ಬ್ಯಾಂಕುಗಳ ಮೂಲಕ ಗೊತ್ತಾಗುತ್ತದೆ. ಸಾಲ ಪಾವತಿ ಕೊನೆಯಾದ ಸುಮಾರು 1 ತಿಂಗಳ ಬಳಿಕ ಕ್ರೆಡಿಟ್ ರಿಪೋರ್ಟ್‌ನಲ್ಲಿ ಸಾಲ ಮರುಪಾವತಿಯ ವಿಚಾರದ ಉಲ್ಲೇಖವಿರಬೇಕು. ಒಂದೊಮ್ಮೆ ಅದು ಆಗಿರದಿದ್ದರೆ, ಕ್ರೆಡಿಟ್ ರಿಪೋರ್ಟ್‌ನಲ್ಲಿರುವ ತಪ್ಪುಗಳನ್ನು ಸಂಬಂಧಪಟ್ಟ ಬ್ಯೂರೋಗಳಿಗೆ ವರದಿ ಮಾಡಿ ಸರಿಪಡಿಸಿಕೊಳ್ಳಿ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಸತತ ನಾಲ್ಕನೇ ವಾರವೂ ಗೂಳಿ ಓಟ



ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಾರವೂ ಗಳಿಕೆ ಕಂಡಿವೆ. ಜುಲೈ 21ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ದಾಖಲೆ ಮಟ್ಟದ ಏರಿಕೆ ಕಂಡಿವೆ. 66,684 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.94ರಷ್ಟು ಗಳಿಸಿಕೊಂಡಿದೆ. 19,745 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.92ರಷ್ಟು ಜಿಗಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲಿ ಉತ್ತಮ ಸಾಧನೆ, ಉತ್ತಮ ಮುಂಗಾರು ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 4ರಷ್ಟು, ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 3ರಷ್ಟು, ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 2.8ರಷ್ಟು, ನಿಫ್ಟಿ ಫಾರ್ಮಾ ಮತ್ತು ಎನರ್ಜಿ ಸೂಚ್ಯಂಕಗಳು ತಲಾ ಶೇ 2ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಐ.ಟಿ ಸೂಚ್ಯಂಕ ಶೇ 3.5ರಷ್ಟು ಕುಸಿದಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,115.26 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹776.69 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಯುನೈಟೆಡ್ ಸ್ಪಿರಿಟ್ಸ್, ಕೋಟಕ್ ಮಹೀಂದ್ರ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಲಾರ್ಸನ್ ಆ್ಯಂಡ್ ಟೂಬ್ರೊ, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಸೇರಿ ಪ್ರಮುಖ ಕಂಪನಿಗಳು ಗಳಿಸಿಕೊಂಡಿವೆ. ರಿಲಯನ್ಸ್, ಇನ್ಫೊಸಿಸ್, ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ, ಶ್ರೀ ಸಿಮೆಂಟ್ಸ್ ಕುಸಿತ ಕಂಡಿವೆ.

ಮುನ್ನೋಟ: ಈ ವಾರ ಬಜಾಜ್ ಆಟೊ, ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ಏಷ್ಯನ್ ಪೇಂಟ್ಸ್, ಕೆನರಾ ಬ್ಯಾಂಕ್, ಐಡಿಬಿಐ, ಎಕ್ಸಿಸ್ ಬ್ಯಾಂಕ್, ರಿಲ್ಯಾಕ್ಸೊ, ಟಿವಿಎಸ್ ಮೋಟಾರ್, ಬಜಾಜ್ ಆಟೊ, ಜೆಕೆ ಪೇಪರ್, ಎಚ್‌ಡಿಎಫ್‌ಸಿ ಎಎಂಸಿ, ಟಾಟಾ ಸ್ಟೀಲ್, ಸಿಯೆಟ್ ಲಿ., ಗ್ರೀನ್ ಪ್ಲೈ, ನೆಸ್ಲೆ ಇಂಡಿಯಾ, ಟಾಟಾ ಮೋಟರ್ಸ್, ಸಿಪ್ಲಾ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳ ಜೊತೆಗೆ ದೇಶಿಯ ಬೆಳವಣಿಗೆಗಳು ಹಾಗೂ ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

'ಟೆಸ್ಲಾಗೆಂದೇ ವಿಶೇಷ ನೀತಿ ಇಲ್ಲ'



ನವದೆಹಲಿ (ಪಿಟಿಐ): ದೇಶದಲ್ಲಿ ಟೆಸ್ಲಾ ಕಂಪನಿಗೆ ಉತ್ತೇಜನ ನೀಡುವ ಸಂಬಂಧ ಪ್ರತ್ಯೇಕವಾದ ನೀತಿ ರೂಪಿಸುವ ಕುರಿತು ಸರ್ಕಾರವು ಯಾವುದೇ ಚಿಂತನೆ ನಡೆಸಿಲ್ಲ ಎಂದು ಸರ್ಕಾರದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸದ್ಯ ಇರುವ ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಅಡಿ ಟೆಸ್ಲಾ ಕಂಪನಿಯೂ ಅರ್ಜಿ ಸಲ್ಲಿಸಬಹುದು. ನೀತಿಯು ಎಲ್ಲರಿಗೂ ಸಮನಾಗಿ ಇರಲಿದೆ. ಟೆಸ್ಲಾ ಕಂಪನಿಗೆ ವಿಶೇಷ ಆದ್ಯತೆ ನೀಡುವ ಆಲೋಚನೆ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

20 ಗಿಗಾವಾಟ್ ಸಾಮರ್ಥ್ಯದ ಸುಧಾರಿತ ಕೆಮಿಸ್ಟ್ರಿ ಸೆಲ್ ತಯಾರಿಕೆಗಾಗಿ ಪಿಎಲ್‌ಐ ಯೋಜನೆ ಅಡಿ ಅವಕಾಶ ನೀಡುವುದಾಗಿ ಕೇಂದ್ರ ಸರ್ಕಾರವು ಕಳೆದವಾರ ಘೋಷಿಸಿದೆ. ಈ ಸಂಬಂಧ ಬೃಹತ್ ಕೈಗಾರಿಕೆಗಳ ಸಚಿವಾಲಯವು ಕೈಗಾರಿಕಾ ವಲಯದ ಪ್ರತಿನಿಧಿಗಳೊಂದಿಗೆ ಸೋಮವಾರ ಚರ್ಚೆ ನಡೆಸಲಿದೆ.

ಟೆಸ್ಲಾ ಕಂಪನಿಯ ಪ್ರತಿನಿಧಿಗಳು ಕಳೆದ ತಿಂಗಳು ಭಾರತಕ್ಕೆ ಭೇಟಿ ನೀಡಿದ್ದು, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವನ್ನೂ ಒಳಗೊಂಡು ವಿವಿಧ ಸಚಿವಾಲಯಗಳ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ.

ಟ್ವಿಟರ್ ಲೋಗೊ ಬದಲು?



ಇಲಾನ್ ಮಸ್ಕ್

ಬೆಂಗಳೂರು (ರಾಯಿಟರ್ಸ್): ಟ್ವಿಟರ್ ಲೋಗೊ ಬದಲಿಸಲು ಚಿಂತನೆ ನಡೆಸುತ್ತಿರುವುದಾಗಿ ಕಂಪನಿಯ ಮುಖ್ಯಸ್ಥ ಇಲಾನ್ ಮಸ್ಕ್ ಹೇಳಿದ್ದಾರೆ.

ಮಿನುಗುತ್ತಿರುವ 'X' ಚಿತ್ರವನ್ನು ಮಸ್ಕ್ ಪೋಸ್ಟ್ ಮಾಡಿದ್ದಾರೆ. ಆದರೆ ಹೆಚ್ಚಿನ ಮಾಹಿತಿ ನೀಡಿಲ್ಲ. ಈ ಕುರಿತು ಪ್ರತಿಕ್ರಿಯೆಯನ್ನೂ ಕಂಪನಿ ನೀಡಿಲ್ಲ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಪ್ರಯಾಣಿಕನಿಗೆ ಎದೆನೋವು ಆಸ್ಪತ್ರೆಗೆ ಬಸ್ ಕೊಂಡೊಯ್ದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ



ಬಸ್‌ನಲ್ಲಿಯೇ ಪ್ರಯಾಣಿಕನನ್ನು ಆಸ್ಪತ್ರೆಗೆ ದಾಖಲಿಸಿದ ಸಿಬ್ಬಂದಿ

ಹುಳಿಯಾರು: ಎದೆ ನೋವಿನಿಂದ ಅಸ್ವಸ್ಥರಾದ ಪ್ರಯಾಣಿಕರೊಬ್ಬರಿಗೆ ಚಿಕಿತ್ಸೆ ಕೊಡಿಸಲು ಭಾನುವಾರ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮತ್ತು ನಿರ್ವಾಹಕಿ ಬಸ್ ಅನ್ನು ನೇರವಾಗಿ ಆಸ್ಪತ್ರೆಗೆ ಕೊಂಡೊಯ್ದರು.

ಹೊಸದುರ್ಗದಿಂದ ಬೆಂಗಳೂರಿಗೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ 65 ವರ್ಷದ ವ್ಯಕ್ತಿ ತೀವ್ರ ಎದೆ ನೋವಿನಿಂದ ಕುಸಿದು ಬಿದ್ದರು.

ಇದನ್ನು ಗಮನಿಸಿದ ನಿರ್ವಾಹಕಿ ರಾಣಿ ಅವರು ವಿಷಯವನ್ನು ಚಾಲಕ ಕಂಸಾರಪ್ಪ ಗಮನಕ್ಕೆ ತಂದರು. ಇಬ್ಬರೂ ಪ್ರಯಾಣಿಕರೊಂದಿಗೆ ಚರ್ಚಿಸಿ ಅವಳಗೆರೆ ಗ್ರಾಮದಿಂದ ನೇರವಾಗಿ ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಬಸ್ ತೆಗೆದುಕೊಂಡು ಹೋದರು.

ಮಾರ್ಗಮಧ್ಯೆ ಎಲ್ಲಿಯೂ ಬಸ್ ನಿಲ್ಲಿಸದೆ ಚಾಲಕ ವೇಗವಾಗಿ ಆಸ್ಪತ್ರೆ ತಲುಪಿದರೂ ಪ್ರಯಾಣಿಕನ ಪ್ರಾಣ ಉಳಿಸಿಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ.

ಆಸ್ಪತ್ರೆಗೆ ದಾಖಲಿಸಿ ತುರ್ತು ಚಿಕಿತ್ಸೆ ನೀಡಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಪ್ರಯಾಣಿಕ ತೀವ್ರ ಹೃದಯಾಘಾತದಿಂದ ಮೃತಪಟ್ಟರು. ಅವರು ಹೊಸದುರ್ಗದಿಂದ ಬೆಂಗಳೂರಿಗೆ ಟಿಕೆಟ್ ಪಡೆದಿದ್ದರು ಎಂದು ನಿರ್ವಾಹಕಿ ರಾಣಿ ತಿಳಿಸಿದ್ದಾರೆ.

ಮಧ್ಯಪ್ರದೇಶ: ದಲಿತ ವ್ಯಕ್ತಿ ಮೇಲೆ ಮಲ ಎಸೆತ

ಛತ್ತರ್‌ಪುರ (ಪಿಟಿಐ): ಗ್ರೀಸ್ ಹತ್ತಿದ್ದ ಕೈಯಿಂದ ಆಕಸ್ಮಿಕವಾಗಿ ಸ್ಪರ್ಶಿಸಿದ್ದಕ್ಕಾಗಿ ದಲಿತ ವ್ಯಕ್ತಿಯ ಮುಖ ಮತ್ತು ಮೈಮೇಲೆ ಮಲ ಎಸೆದಿರುವ ಅಮಾನುಷ ಕೃತ್ಯ ಮಧ್ಯಪ್ರದೇಶದ ಛತ್ತರ್‌ಪುರ ಜಿಲ್ಲೆಯಲ್ಲಿ ನಡೆದಿದೆ.

ಸಂತ್ರಸ್ತ ದಶರಥ ಅಹಿರ್‌ವಾರ್ ಶನಿವಾರ ಪೊಲೀಸರಿಗೆ ದೂರು ನೀಡಿದ್ದು, ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರಿದ ಆರೋಪಿ ರಾಮ್‌ಕೃಪಾಲ್ ಪಟೇಲ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಪಟೇಲ್ ಜಾತಿ ಆಧಾರಿತವಾಗಿ ನಿಂದಿಸಿದರು. ಶುಕ್ರವಾರ ಪಂಚಾಯಿತಿ ಕರೆದು ದೂರು ನೀಡಿದೆ. ಆದರೆ ಅಲ್ಲಿ ನನಗೇ ₹600 ದಂಡ ವಿಧಿಸಿದರು' ಎಂದು ಆರೋಪಿಸಿದ್ದಾರೆ.

'ಪಟೇಲ್ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಮಹಮ್ಮದ್ ಸಿಂಗ್ ಬಘೇಲ್ ತಿಳಿಸಿದ್ದಾರೆ.

ಸ್ಫೋಟಕ್ಕೆ ಸಂಚು: ಜುನೇದ್ ವಿರುದ್ಧ ಎನ್‌ಐಎ ಲುಕ್ ಔಟ್ ನೋಟಿಸ್?

ಸಂಚುಕೋರನ ಬಂಧನಕ್ಕೆ ತಯಾರಿ

ಪ್ರಜಾವಾಣಿ ವಾರ್ತೆ



ಜುನೇದ್ ಅಹಮ್ಮದ್

ಬೆಂಗಳೂರು: ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ಜುನೇದ್ ಅಹಮ್ಮದ್ ಬಂಧನಕ್ಕೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತಯಾರಿ ಆರಂಭಿಸಿದ್ದು, ಸದ್ಯದಲ್ಲೇ ಲುಕ್ ಔಟ್ ನೋಟಿಸ್ ಹೊರಡಿಸುವ ಸಾಧ್ಯತೆ ಇದೆ.

ಹೆಬ್ಬಾಳ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ್ದ ಸಿಸಿಬಿ ಪೊಲೀಸರು, ಜುನೇದ್ ಸಹಚರರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ, ಹಾಗೂ ಮೊಹಮ್ಮದ್ ಉಮರ್‌ನನ್ನು ಈಗಾಗಲೇ ಬಂಧಿಸಿದ್ದಾರೆ.

ಬಂಧಿತ ಆರೋಪಿಗಳಿಗೆ ನಿರ್ದೇಶನ ನೀಡುತ್ತಿದ್ದ ಜುನೇದ್, ದುಬೈಗೆ ಹೋಗಿ ತಲೆಮರೆಸಿಕೊಂಡಿದ್ದಾನೆ. ಈತನನ್ನು ಬಂಧಿಸಲು ಕಾನೂನು ಕ್ರಮ ಕೈಗೊಳ್ಳುವಂತೆ ಸಿಸಿಬಿ ಪೊಲೀಸರು, ಎನ್‌ಐಎ ಸಹಾಯ ಕೋರಿದ್ದಾರೆ. ಇದೇ ಕಾರಣಕ್ಕೆ ಎನ್‌ಐಎ ಅಧಿಕಾರಿಗಳು, ಲುಕ್ ಔಟ್ ನೋಟಿಸ್ ಹೊರಡಿಸಲಿದ್ದಾರೆ.

'ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಟಿ. ನಾಸೀರ್‌ಗೆ ಆಪ್ತನಾಗಿದ್ದ ಜುನೇದ್, ತನ್ನ ಸಹಚರರ ಮೂಲಕ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ. ವಿದೇಶದಲ್ಲಿದ್ದುಕೊಂಡು ಸಹಚರರಿಗೆ ಅಗತ್ಯವಿದ್ದ ಹಣ ಹಾಗೂ ಸ್ಫೋಟಕಗಳನ್ನು ಪೂರೈಕೆ ಮಾಡುತ್ತಿದ್ದನೆಂಬ ಸಂಗತಿ ಗೊತ್ತಾಗಿದೆ. ಹೀಗಾಗಿ, ಜುನೇದ್‌ನನ್ನು ಬಂಧಿಸಲು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲುಕ್ ಔಟ್ ನೋಟಿಸ್ ಹೊರಡಿಸಿದ ನಂತರ, ಎಲ್ಲ ವಿಮಾನ ನಿಲ್ದಾಣ ಹಾಗೂ ವಿದೇಶಿ ಪೊಲೀಸರಿಗೆ ಮಾಹಿತಿ ರವಾನೆಯಾಗಲಿದೆ. ನಂತರ, ವಿದೇಶದ ಪೊಲೀಸರ ಮೂಲಕ ಜುನೇದ್‌ನನ್ನು ಕಸ್ಟಡಿಗೆ ಪಡೆಯಲು ಪ್ರಯತ್ನಿಸಲಾಗುವುದು' ಎಂದು ತಿಳಿಸಿವೆ.

ವಿಧ್ವಂಸಕ ಕೃತ್ಯಕ್ಕೆ ವಿದೇಶಿಗರ ದೇಣಿಗೆ

'ದುಬೈ ಹಾಗೂ ಇತರೆ ದೇಶದಲ್ಲಿರುವ ಕೆಲವರು, ಭಾರತದಲ್ಲಿ ವಿಧ್ವಂಸಕ ಕೃತ್ಯ ಎಸಗಲು ದೇಣಿಗೆ ನೀಡುತ್ತಿರುವ ಮಾಹಿತಿ ಇದೆ. ಅದೇ ಹಣವನ್ನು ಜುನೇದ್, ಭಾರತದಲ್ಲಿರುವ ತನ್ನ ಸಹಚರರಿಗೆ ನೀಡುತ್ತಿದ್ದನೆಂಬ ಸಂಗತಿಯೂ ಬಂಧಿತ ಆರೋಪಿಗಳ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದುಬೈನಿಂದಲೇ ಸಹಚರರ ಜೊತೆ ಮಾತನಾಡುತ್ತಿದ್ದ ಜುನೇದ್, ಭಾರತದಲ್ಲಿರುವ ಕೆಲ ಶಂಕಿತರ ಮೂಲಕ ಕಾರು ಹಾಗೂ ರೈಲಿನಲ್ಲಿ ಸಹಚರರಿಗೆ ಸ್ಫೋಟಕಗಳನ್ನು ಕಳುಹಿಸುತ್ತಿದ್ದ. ಅದೇ ಸ್ಫೋಟಕಗಳನ್ನು ಸಹಚರರು, ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ರಾಜ್ಯದಲ್ಲಿ ಮತ್ತಷ್ಟು ಕಡೆ ಸ್ಫೋಟಕಗಳನ್ನು ಸಂಗ್ರಹಿಸಿಟ್ಟಿರುವ ಅನುಮಾನವಿದೆ. ಜುನೇದ್‌ನನ್ನು ಬಂಧಿಸಿ ವಿಚಾರಣೆ ನಡೆಸಿದ ಬಳಿಕವೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ. ಜೊತೆಗೆ, ಟಿ. ನಾಸೀರ್ ವಿಚಾರಣೆಗೆ ಪ್ರಕ್ರಿಯೆ ಆರಂಭಿಸಲಾಗಿದೆ. ಇದಕ್ಕೆ ನ್ಯಾಯಾಲಯದಿಂದ ಅನುಮತಿ ಪಡೆಯಬೇಕಿದೆ' ಎಂದು ಹೇಳಿವೆ.

108 ಅಡಿ ಶ್ರೀರಾಮನ ಪಂಚಲೋಹ ಮೂರ್ತಿ ಪ್ರತಿಷ್ಠಾಪನೆಗೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ರಾಘವೇಂದ್ರಸ್ವಾಮಿಗಳ ಮಠದಿಂದ 108 ಅಡಿ ಎತ್ತರದ ಶ್ರೀರಾಮದೇವರ ಪಂಚಲೋಹದ ಮೂರ್ತಿ ನಿರ್ಮಾಣಕ್ಕೆ ಭಾನುವಾರ ಕೇಂದ್ರದ ಗೃಹ ಖಾತೆ ಸಚಿವ ಅಮಿತ್ ಶಾ ಅವರು ವರ್ಚುವಲ್ ಆಗಿ ಶಂಕುಸ್ಥಾಪನೆ ಮಾಡಿದರು.

ಭಾನುವಾರ ಬೆಳಿಗ್ಗೆ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು, ಶ್ರೀರಾಮ ಪಂಚಲೋಹ ಮೂರ್ತಿ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿದರು. ನಂತರ ಅಮಿತ್ ಶಾ ಅವರು ಸಾಂಕೇತಿಕವಾಗಿ ಶಂಕುಸ್ಥಾಪನೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, 'ಹಿಂದೂ ಸಂಸ್ಕೃತಿಯಲ್ಲಿ 108 ಸಂಖ್ಯೆ ಅತ್ಯಂತ ಪವಿತ್ರವಾಗಿದೆ. 108 ಅಡಿ ಎತ್ತರದ ಶ್ರೀರಾಮನ ಪಂಚಲೋಹದ ಮೂರ್ತಿ ನಿರ್ಮಿಸಲು ಮಂತ್ರಾಲಯದ ಮಠವು ಮುಂದಾಗಿರುವ ಶ್ಲಾಘನೀಯ' ಎಂದು ಹೇಳಿದರು.

'ಪವಿತ್ರವಾದ ತುಂಗಾಭದ್ರಾ ನದಿ ತೀರದಲ್ಲಿ ರಾಘವೇಂದ್ರ ಸ್ವಾಮಿಗಳು ನೆಲೆಸಿದ್ದಾರೆ. ಇದೀ ನದಿಯ ಹಂಚಿನಲ್ಲಿ ಇದೀಗ ಶ್ರೀರಾಮ ದೇವರ 108 ಅಡಿ ಉದ್ದದ ಮೂರ್ತಿ ಪ್ರತಿಷ್ಠಾಪಿಸುತ್ತಿದ್ದು, ಮುಂದಿನ ದಿನಗಳಲ್ಲಿ ಈ ಮೂರ್ತಿ ಸನಾತನ ಧರ್ಮವನ್ನು ಎಲ್ಲೆಡೆ ಪಸರಿಸಲಿ' ಎಂದು ಹಾರೈಸಿದರು.

ಅನುಗ್ರಹ ಸಂದೇಶ ನೀಡಿದ ಸುಬುಧೇಂದ್ರ ತೀರ್ಥರು 'ಮರ್ಯಾದಾ ಪುರುಷೋತ್ತಮ ದಂಡಕಾರಣ್ಯ ವಾಸದ ಸಮಯದಲ್ಲಿ ಅವರ ಪಾದಸ್ಪರ್ಶದಿಂದ ಈ ಪ್ರದೇಶ ಪವಿತ್ರಗೊಂಡಿದೆ' ಎಂದರು.

'ಶ್ರೀರಾಮ ಕುಳಿತುಕೊಂಡ ಶಿಲೆಯಲ್ಲಿಯೇ ಮೂಲ ಬೃಂದಾವನವನ್ನು ನಿರ್ಮಿಸಲಾಗಿದೆ. ಉದ್ಯಾನ ಹಾಗೂ ಸನಾತನ ಧರ್ಮ, ಹಿಂದೂ ಸಂಸ್ಕೃತಿಯನ್ನು ಬಿಂಬಿಸುವ ಕಟ್ಟಡ ನಿರ್ಮಿಸಲು ಸಂಕಲ್ಪ ಮಾಡಲಾಗಿದೆ' ಎಂದರು.

ದಲ್ಲಾಳಿಗಳಿಗೆ ಪ್ರವೇಶ ಇಲ್ಲ ಕೆಐಎಡಿಬಿ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗಾಗಿ ಭೂಮಿ ಕಳೆದುಕೊಂಡ ರೈತರ ಪರವಾಗಿ ಕೆಐಎಡಿಬಿ ಕೇಂದ್ರ ಕಚೇರಿ ಮತ್ತು ವಲಯ ಕಚೇರಿಗಳಲ್ಲಿ ಕಾಣಿಸಿಕೊಳ್ಳುವ ದಲ್ಲಾಳಿಗಳು ಹಾಗೂ ಅವರ ಜೊತೆ ಕೈಜೋಡಿಸುವ ಅಧಿಕಾರಿ– ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಎಚ್ಚರಿಕೆ ನೀಡಿರುವ ಬೆನ್ನಲ್ಲೇ, ಈ ಸಂಬಂಧ ಸುತ್ತೋಲೆ ಹೊರಡಿಸಲಾಗಿದೆ.

ಕೆಐಎಡಿಬಿ ಕಚೇರಿಗಳಲ್ಲಿ ಸಂತ್ರಸ್ತ ರೈತರ ಪರವಾಗಿ ಮತ್ತು ಕೈಗಾರಿಕಾ ನಿವೇಶನಗಳು ಮಂಜೂರಾಗಿರುವ ಉದ್ಯಮಿಗಳ ಅಥವಾ ನಿವೇಶನದಾರರ ಹೆಸರಿನಲ್ಲಿ ಕೆಲವು ಅನಪೇಕ್ಷಿತ ವ್ಯಕ್ತಿಗಳು ಓಡಾಡುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಜಮೀನು ಕಳೆದುಕೊಂಡ ರೈತರು ಅಥವಾ ಕಾನೂನುಬದ್ಧ ವಾರಸುದಾರರು ಮಾತ್ರ ಕಚೇರಿಗಳಿಗೆ ಭೇಟಿ ನೀಡಿ ಅಹವಾಲು ಸಲ್ಲಿಸಬಹುದಾಗಿದೆ ಎಂದು ಅವರು ಹೇಳಿದ್ದಾರೆ.

ಸುತ್ತೋಲೆಯನ್ನು ಕೆಐಎಡಿಬಿ ಕಚೇರಿಗಳಲ್ಲಿ ಕೂಡಲೇ ಕಡ್ಡಾಯವಾಗಿ ಪ್ರದರ್ಶಿಸಬೇಕು. ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವ ಶಕ್ತಿಗಳಿಗೆ ಅಂಕುಶ ಹಾಕಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಮಣಿಪುರ ಹಿಂಸಾಚಾರ: ಶಾಂತಿ ಪುನರ್ ಸ್ಥಾಪನೆಗೆ ಶ್ರಮಿಸುತ್ತಿರುವ ರಕ್ಷಣಾ ಪಡೆ ಅಧಿಕಾರಿಗಳ ಅಭಿಪ್ರಾಯ

ಸುಳ್ಳು ಸುದ್ದಿ ಎಂಬ ಪೆಡಂಭೂತ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಹಿಂಸಾಚಾರವು ತನ್ನ ಕಬಂಧಬಾಹು ವಿಸ್ತರಿಸುತ್ತಿರುವ ಹಿಂದೆ ಸುಳ್ಳು ಸುದ್ದಿಗಳು ಹಾಗೂ ಪ್ರಚೋದನಕಾರಿ ಸುದ್ದಿಗಳ ಪಾಲು ದೊಡ್ಡದಿದೆ ಎಂದು ಸಂಘರ್ಷ ಪೀಡಿತ ನೆಲದಲ್ಲಿ ಶಾಂತಿ ಪುನರ್ ಸ್ಥಾಪನೆಗೆ ಶ್ರಮಿಸುತ್ತಿರುವ ರಕ್ಷಣಾ ಪಡೆಯ ಅಧಿಕಾರಿಗಳು ಹೇಳಿದ್ದಾರೆ.

ಸುಳ್ಳು ಸುದ್ದಿ ಎಂಬ ಪೆಡಂಭೂತದ ಹಾವಳಿಯಿಂದ ಸಂಘರ್ಷ ಉಲ್ಬಣಿಸಿರುವುದಕ್ಕೆ ಅವರು ಹಲವು ಘಟನೆಗಳನ್ನು ನಿದರ್ಶನವಾಗಿ ಉಲ್ಲೇಖಿಸಿದ್ದಾರೆ. ಮೇ 4ರಂದು ಕಾಂಗ್ಪೊಕ್ಪಿ ಜಿಲ್ಲೆಯಲ್ಲಿ ಕುಕಿ ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಕೃತ್ಯ ನಡೆದಿದೆ. ಆದರೆ, ಈ ಬಗ್ಗೆ ಚುರಚಂದಪುರದಲ್ಲಿ ಮಹಿಳೆಯರನ್ನು ಹತ್ಯೆ ಮಾಡಲಾಗಿದೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಯಿತು. ಇದು ಇಂಫಾಲ್ ಕಣಿವೆ ಪ್ರದೇಶದ ವ್ಯಾಪ್ತಿಯಲ್ಲಿ ಹರಿದಾಡಿದ್ದರಿಂದ ಹಿಂಸಾಚಾರ ಉಲ್ಬಣಕ್ಕೆ ಮೂಲ ಕಾರಣವಾಯಿತು ಎಂದು ವಿವರಿಸಿದ್ದಾರೆ.

ಆದರೆ, ಮಹಿಳೆಯರ ಹತ್ಯೆ ಸುದ್ದಿಯ ಬೆನ್ನುಹತ್ತಿದ ಪೊಲೀಸರು, ಇಂಫಾಲ್‌ನಲ್ಲಿ ಮಹಿಳೆಯೊಬ್ಬರ ಕೊಲೆಯಾಗಿರುವುದನ್ನು ಪತ್ತೆ ಹಚ್ಚಿದರು. ಆ ವೇಳೆಗಾಗಲೇ ಕಣಿವೆ ಪ್ರದೇಶದ ಜಿಲ್ಲೆಗಳಲ್ಲಿ ಸುಳ್ಳು ಸುದ್ದಿ ಹರಡಿದ್ದರಿಂದ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿತು ಎಂದಿದ್ದಾರೆ.

ಇದಕ್ಕೆ ಪರಿಹಾರ ಹುಡುಕಲು ಹೊರಟ ಸರ್ಕಾರವು, ಕಾಳ್ಗಿಚ್ಚಿನಂತೆ ಹಬ್ಬುವ ಸುಳ್ಳು ಸುದ್ದಿಗಳನ್ನು ನಿಯಂತ್ರಿಸಲು ಮೇ 3ರಂದು ರಾಜ್ಯದಾದ್ಯಂತ ಇಂಟರ್‌ನೆಟ್ ಸೇವೆ ಬಳಕೆಗೆ ನಿರ್ಬಂಧ ಹೇರಿತು. ಇದಕ್ಕೆ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳಿಂದ ಆಕ್ಷೇಪವೂ ವ್ಯಕ್ತವಾಯಿತು. ಕೊನೆಗೆ, ಈ ವಿಷಯವು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಅಂಗಳ ತಲುಪಿದ್ದು ಉಂಟು.

ಸ್ಥಳೀಯ ಪತ್ರಿಕೆಗಳು ಕೂಡ ಸುಳ್ಳು ಸುದ್ದಿಗಳು ಹಾಗೂ ಏಕಮುಖವಾಗಿ ಸುದ್ದಿ ಪ್ರಕಟಿಸುವುದರಲ್ಲಿ ಪೈಪೋಟಿಗೆ ಬಿದ್ದಿವೆ. ಇದು ಕೂಡ ಹಿಂಸಾಚಾರ ನಿಯಂತ್ರಣಕ್ಕೆ ಸವಾಲಾಗಿ ಪರಿಣಮಿಸಿದೆ. ಇದಕ್ಕೆ ಕಡಿವಾಣ ಹಾಕಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಇದಕ್ಕೆ ಇತ್ತೀಚೆಗೆ ಸ್ಥಳೀಯ ಪ್ರಮುಖ ಪತ್ರಿಕೆಯಲ್ಲಿ ಪ್ರಕಟಗೊಂಡ ಸುಳ್ಳು ಸುದ್ದಿಯನ್ನು ಅವರು ಉದಾಹರಣೆ ನೀಡುತ್ತಾರೆ.

‘ಚಂದೇಲ್ ಜಿಲ್ಲೆಯ ಕ್ವಾಥಾ ಗ್ರಾಮದಲ್ಲಿರುವ ಅತಿದೊಡ್ಡ ಬುಡಕಟ್ಟು ಸಮುದಾಯದ ಮೇಲೆ ದಾಳಿ ನಡೆಸಲು ಬೇರೊಂದು ಬುಡಕಟ್ಟಿಗೆ ಸೇರಿದ ಶಸ್ತ್ರಸಜ್ಜಿತ ಪುರುಷರ ಗುಂಪೊಂದು ಯೋಜನೆ ರೂಪಿಸಿದೆ ಎಂದು ವರದಿ ಪ್ರಕಟಿಸಿತ್ತು. ಸ್ಥಳೀಯ ಪೊಲೀಸರು ಇದರ ಮಾಹಿತಿ ಮೇರೆಗೆ ಸ್ಥಳವನ್ನು ಜಾಲಾಡಿದಾಗ ಅದೊಂದು ಸುಳ್ಳು ಸುದ್ದಿ ಎಂಬುದು ಗೊತ್ತಾಯಿತು’ ಎಂದು ಅಧಿಕಾರಿಗಳು ವಿವರಿಸುತ್ತಾರೆ.

ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಯಾವುದೇ ಹಳ್ಳಿಯನ್ನು ಧ್ವಂಸಗೊಳಿಸುವ ಸಂಚು ನಡೆದಿಲ್ಲ’ ಎಂದು ಪೊಲೀಸರು ಹೇಳಿಕೆ ಬಿಡುಗಡೆಗೊಳಿಸಿದ್ದಾರೆ. ಜೊತೆಗೆ, ಸೂಕ್ಷ್ಮ ವಿಚಾರಗಳ ಬಗ್ಗೆ ಸುದ್ದಿ ಪ್ರಕಟಿಸುವ ಮೊದಲು ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕು ಎಂದು ಪತ್ರಿಕೆಗಳಿಗೂ ಕೋರಿದ್ದಾರೆ.



ದೌರ್ಜನ್ಯಕ್ಕೆ ಸಿಲುಕಿರುವ ಬುಡಕಟ್ಟು ಸಮುದಾಯದ ಮಹಿಳೆಯರ ಸಂಕಷ್ಟ ಆಲಿಸಲು ಭಾನುವಾರ ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಾಲೀವಾಲ್ ಅವರು, ಇಂಫಾಲ್‌ಗೆ ಭೇಟಿ ನೀಡಿದರು —ಪಿಟಿಐ ಚಿತ್ರ

ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಭೇಟಿ

ಇಂಫಾಲ್ (ಪಿಟಿಐ): ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರದಿಂದ ತತ್ತರಿಸಿರುವ ಮಣಿಪುರಕ್ಕೆ ಭಾನುವಾರ ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಾಲೀವಾಲ್ ಭೇಟಿ ನೀಡಿದ್ದಾರೆ.

ನಗ್ನ ಮೆರವಣಿಗೆ ಪ್ರಕರಣದ ಸಂತ್ರಸ್ತೆಯರ ಭೇಟಿಗೆ ನಿರ್ಧರಿಸಿದ್ದ ಸ್ವಾತಿ ಅವರಿಗೆ ಸುರಕ್ಷತೆಯ ನೆಪವೊಡ್ಡಿ ಮಣಿಪುರ ರಾಜ್ಯ ಸರ್ಕಾರವು ಅನುಮತಿ ನೀಡಲು ನಿರಾಕರಿಸಿತ್ತು. ಸರ್ಕಾರದ ಈ ನಡೆಗೆ ಅವರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಅವರು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರಿಗೆ ಪತ್ರ ಬರೆದಿದ್ದರು. ಸರ್ಕಾರದ ಹಗ್ಗಜಗ್ಗಾಟದ ನಡುವೆ ಕೊನೆಗೂ ಆಯೋಗದ ತಂಡವು ಸಂಘರ್ಷ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲು ಅನುಮತಿ ಸಿಕ್ಕಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸ್ವಾತಿ ಅವರು, ‘ರಾಜಕೀಯ ಮಾಡಲು ನಾನು ಇಲ್ಲಿಗೆ ಬಂದಿಲ್ಲ. ನೊಂದವರಿಗೆ ಸಹಾಯಹಸ್ತ ಚಾಚಲು ಬಂದಿದ್ದೇನೆ’ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಅವರು ಇಲ್ಲಿಗೆ ಭೇಟಿ ನೀಡಿ ಮಹಿಳೆಯರ ನೋವು ಆಲಿಸಬೇಕು ಎಂದು ಮನವಿ ಮಾಡಿದರು.

‘ಕಾನೂನು ಮತ್ತು ಸುವ್ಯವಸ್ಥೆ ದೃಷ್ಟಿಯಿಂದ ನನಗೆ ಈ ಮೊದಲು ಸರ್ಕಾರ ಅನುಮತಿ ನಿರಾಕರಿಸಿದ್ದು ನಿಜ. ಈ ಬಗ್ಗೆ ಚರ್ಚಿಸಿದ ಬಳಿಕ ಇಂಫಾಲ್‌ಗೆ ಬಂದಿದ್ದೇನೆ. ಬಿರೇನ್ ಸಿಂಗ್ ಜೊತೆಗೆ ಚರ್ಚಿಸಿ ಅವರೊಟ್ಟಿಗೆಯೇ ಇಬ್ಬರು ಸಂತ್ರಸ್ತೆಯರನ್ನು ಭೇಟಿ ಮಾಡಲು ನಿರ್ಧರಿಸಿದ್ದೇನೆ’ ಎಂದು ಸ್ವಾತಿ ಟ್ವೀಟ್ ಮಾಡಿದ್ದಾರೆ.

‘ಕಣಿವೆ ರಾಜ್ಯದಲ್ಲಿ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ ಸಹಿಸಲಾರದೆ ಹಲವು ಮಹಿಳೆಯರು ಸುರಕ್ಷತೆ ಅರಸಿ ದೆಹಲಿಗೆ ಬಂದಿದ್ದಾರೆ. ಅವರ ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ ನಿಮ್ಮೊಂದಿಗೆ ಚರ್ಚಿಸಬೇಕಿದೆ. ಇದಕ್ಕೆ ಅವಕಾಶ ನೀಡಬೇಕು’ ಎಂದು ಬಿರೇನ್ ಸಿಂಗ್ ಅವರಿಗೆ ಬರೆದಿರುವ ಪತ್ರವನ್ನು ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

‘ವಿಸ್ತೃತ ಚರ್ಚೆಗೆ ಸರ್ಕಾರ ಸಿದ್ಧ’

ನವದೆಹಲಿ (ಪಿಟಿಐ): ಮಣಿಪುರ ಹಿಂಸಾಚಾರದ ಬಗ್ಗೆ ಸಂಸತ್‌ನಲ್ಲಿ ಚರ್ಚೆಗೂ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿಕೆ ನೀಡಬೇಕು ಎಂದು ಪ್ರತಿಪಕ್ಷಗಳು ಬಿಗಿಪಟ್ಟು ಹಿಡಿದಿವೆ.

ಮಹಿಳೆಯರ ನಗ್ನ ಮೆರವಣಿಗೆ ವಿಡಿಯೊ ಬಹಿರಂಗಗೊಂಡ ಬಳಿಕ ಕೇಂದ್ರ ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವಿನ ವಾಕ್ಸಮರವು ಕಲಾಪವನ್ನು ಅಕ್ಷರಶಃ ನುಂಗಿ ಹಾಕಿದೆ. ಸೋಮವಾರ ನಡೆಯುವ ಅಧಿವೇಶನದಲ್ಲಿ ಪ್ರತಿಪಕ್ಷಗಳು ಜಂಟಿ ಹೋರಾಟಕ್ಕೆ ಅಣಿಯಾಗಿದ್ದು, ಸುಗಮವಾಗಿ ಕಲಾಪ ನಡೆಸುವುದು ಸರ್ಕಾರಕ್ಕೆ ಸವಾಲಾಗಿದೆ. ವಿಪಕ್ಷಗಳ ಈ ಧೋರಣೆಗೆ ಕೇಂದ್ರವು ಅಸಮಾಧಾನ ವ್ಯಕ್ತಪಡಿಸಿದ್ದು, ಪ್ರಧಾನಿ ಅವರ ಬದಲಿಗೆ ಗೃಹ ಸಚಿವ ಅಮಿತ್ ಶಾ ಸಂಘರ್ಷದ ಬಗ್ಗೆ ವಿಸ್ತೃತ ಹೇಳಿಕೆ ನೀಡಲಿದ್ದಾರೆ. ಮಹಿಳೆಯರನ್ನು ವಿವಸ್ತ್ರಗೊಳಿಸಿ ಮೆರವಣಿಗೆ ನಡೆಸಿದ ಪ್ರಕರಣವನ್ನು ರಾಜಕೀಯಗೊಳಿಸಬಾರದು ಎಂದು ಕೋರಿದೆ.

‘ಕಣಿವೆ ರಾಜ್ಯದ ಸದ್ಯದ ಸ್ಥಿತಿಗತಿ ಬಗ್ಗೆ ಸರ್ಕಾರವು ಸಂಸತ್‌ನಲ್ಲಿ ಸುದೀರ್ಘ ಚರ್ಚೆಗೆ ಸಿದ್ಧವಿದೆ. ಇದಕ್ಕೆ ಪ್ರತಿಪಕ್ಷಗಳ ನಾಯಕರು ಕೂಡ ಸಹಕರಿಸಬೇಕು’ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಮನವಿ ಮಾಡಿದ್ದಾರೆ.

ಸೇಡಿಗೆ ಪ್ರತಿ ಸೇಡು

ಪ್ರಜಾವಾಣಿ ವಾರ್ತೆ

ಗುವಾಹಟಿ: ಇಬ್ಬರು ಮಹಿಳೆಯರ ನಗ್ನ ಮೆರವಣಿಗೆಯ ಹೇಯಕೃತ್ಯ ಸೇರಿದಂತೆ ಹಲವು ಬೀಭತ್ಸ ದಾಳಿಗಳಿಗೆ ಮಣಿಪುರ ಮೂಕಸಾಕ್ಷಿಯಾಗಿದೆ. ಮೈತೇಯಿ ಮತ್ತು ಕುಕಿ ಸಮುದಾಯದ ನಡುವಣ ಜನಾಂಗೀಯ ಹಿಂಸಾಚಾರ ಆರಂಭವಾಗಿ ಮೂರು ತಿಂಗಳು ಉರುಳಿವೆ. ಆದರೆ, ಈ ಸಮುದಾಯಗಳ ನಡುವಿನ ಸೇಡಿನ ಮನಸ್ಥಿತಿ ಮಾತ್ರ ನಿಂತಿಲ್ಲ.

ದ್ವೇಷದ ಬಣ್ಣ ಮೆತ್ತಿಕೊಂಡು ಎಸಗಿದ ಹೀನಕೃತ್ಯಗಳಲ್ಲಿ ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಜೂನ್ 6ರಂದು ಸಂಭವಿಸಿದ ಮೂವರ ಸಜೀವ ದಹನವೂ ಒಂದಾಗಿದೆ. ಕುಕಿ ವ್ಯಕ್ತಿಯನ್ನು ವಿವಾಹವಾಗಿದ್ದ ಮೈತೇಯಿ ಮಹಿಳೆ, ಆಕೆಯ ಪುತ್ರ ಮತ್ತು ಸಂಬಂಧಿಕರೊಬ್ಬರು ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಮೈತೇಯಿ ಗುಂಪು ಬೆಂಕಿ ಹಚ್ಚಿತ್ತು.

ಕಾಕ್ಚಿಂಗ್ ಜಿಲ್ಲೆಯ ಸೆರೋ ಗ್ರಾಮದಲ್ಲಿ ಮೇ 28ರಂದು ಕುಕಿ ಸಮುದಾಯಕ್ಕೆ ಸೇರಿದ ಗುಂಪು ಮೈತೇಯಿ ಸಮುದಾಯಕ್ಕೆ ಸೇರಿದ 80 ವರ್ಷದ ವೃದ್ಧೆಯನ್ನು ಮನೆಯಲ್ಲಿ ಕೂಡಿ ಹಾಕಿ ಬೆಂಕಿ ಹಚ್ಚಿತ್ತು. ವೃದ್ಧೆಯ ಪತಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾರೆ.

ಜುಲೈ 3ರಂದು ಕುಕಿ ಜನರು ಹೆಚ್ಚಿರುವ ಚುರಚಂದಪುರ ಜಿಲ್ಲೆಯ ಹಳ್ಳಿಯೊಂದರಲ್ಲಿ ಕುಕಿ ಯುವಕನ ಶಿರಚ್ಛೇದ ಮಾಡಲಾಗಿತ್ತು. ಜೂನ್ 6ರಂದು ಇಂಫಾಲ್‌ನಲ್ಲಿ ಕುಕಿ ಸಮುದಾಯಕ್ಕೆ ಸೇರಿದ ಮಾನಸಿಕ ಅಸ್ವಸ್ಥೆಯನ್ನು ವಾಹನದಲ್ಲಿ ಕರೆತಂದ ಇಬ್ಬರು ಮೈತೇಯಿ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆಗೈದಿದ್ದರು.

ಮೈತೇಯಿ ಪ್ರಭಾವವಿರುವ ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಜುಲೈ 15ರಂದು ನಾಗಾ ಸಮುದಾಯದ ಮಧ್ಯ ವಯಸ್ಸಿನ ಮಹಿಳೆಯನ್ನು ಕೊಲೆ ಮಾಡಿ ಆಕೆಯ ಮುಖವನ್ನು ವಿರೂಪಗೊಳಿಸಲಾಗಿತ್ತು.

‘ಹಿಂಸಾಚಾರ ಹೆಚ್ಚಳಕ್ಕೆ ಕೇಂದ್ರದ ನಿಷ್ಕ್ರಿಯತೆಯೇ ಕಾರಣವಾಗಿದೆ. ಬೆತ್ತಲೆ ಮೆರವಣಿಗೆ ಕೃತ್ಯವು ಮಾನವ ಹಕ್ಕುಗಳ ಉಲ್ಲಂಘನೆ’ ಎಂದು ಮಾನವ ಹಕ್ಕುಗಳ ಹೋರಾಟಗಾರ ಸುಹಾಸ್ ಚಕ್ಮಾ ಹೇಳುತ್ತಾರೆ.

ಮಣಿಪುರಕ್ಕೆ ವಾಪಸ್: ಮಿಜೋರಾಂನಲ್ಲಿ ಸುರಕ್ಷತೆಯ ಭೀತಿ ಎದುರಿಸುತ್ತಿದ್ದ 41 ಮೈತೇಯಿ ಜನರು ಮಣಿಪುರಕ್ಕೆ ಮರಳಿದ್ದಾರೆ. ನಗ್ನ ಮೆರವಣಿಗೆ ವಿಡಿಯೊ ಬಹಿರಂಗಗೊಂಡಿದ್ದರಿಂದ ಮಿಜೋರಾಂ ತೊರೆಯುವಂತೆ ಉಗ್ರರ ಗುಂಪು ಮೈತೇಯಿ ಜನರಿಗೆ ಬೆದರಿಕೆವೊಡ್ಡಿದೆ.

ಕರ್ನಾಟಕ: ಲಿಂಗಾನುಪಾತ ಕುಸಿತ

ನವದೆಹಲಿ: ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕರ್ನಾಟಕ ಸೇರಿದಂತೆ ದೇಶದ ಎಂಟು ರಾಜ್ಯಗಳಲ್ಲಿ ಲಿಂಗಾನುಪಾತದ ಪ್ರಮಾಣ ಗಣನೀಯವಾಗಿ ಕುಸಿದಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಸಚಿವಾಲಯದ ವರದಿ ಹೇಳಿದೆ.

ಕರ್ನಾಟಕ, ದೆಹಲಿ, ಪಂಜಾಬ್, ತಮಿಳುನಾಡು, ಪಶ್ಚಿಮ ಬಂಗಾಳ, ಬಿಹಾರ ಮತ್ತು ಹರಿಯಾಣದಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಕುಸಿದಿರುವುದು ಆತಂಕ ಮೂಡಿಸಿದೆ. ಕರ್ನಾಟಕದಲ್ಲಿ 2020–21ರಲ್ಲಿ 1,000 ಪುರುಷರಿಗೆ 949 ಮಹಿಳೆಯರು ಇದ್ದರು. 2021–22ರಲ್ಲಿ ಮಹಿಳೆಯರ ಸಂಖ್ಯೆ 940ಕ್ಕೆ ಕುಸಿದಿತ್ತು. 2022–23ರಲ್ಲಿ 945 ಮಹಿಳೆಯರು ಇದ್ದಾರೆ. ಈ ಅವಧಿಯಲ್ಲಿ ಸ್ತ್ರೀಯರ ಸಂಖ್ಯೆ ಕೊಂಚ ಏರಿಕೆಯಾಗಿದೆ ಎಂದು ವರದಿ ವಿವರಿಸಿದೆ.

ಜೆಸಿಬಿ ಆಪರೇಟರ್‌ಗೆ ಒಲಿದ ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಕಣ್ಣೂರು (ಕೇರಳ)(ಪಿಟಿಐ): ರಾತ್ರಿ ವೇಳೆ ಜೆಸಿಬಿ ಆಪರೇಟರ್ ಕೆಲಸ, ಬೆಳಿಗ್ಗೆ ಮನೆ ಮನೆಗೆ ದಿನಪತ್ರಿಕೆ ಹಾಕುವ ಕಾಯಕ, ಬಿಡುವಿನ ಸಮಯದಲ್ಲಿ ಬರವಣಿಗೆಯ ಗೀಳು... ಇದು ಕೇರಳ ಸಾಹಿತ್ಯ ಕ್ಷೇತ್ರದ ಉದಯೋನ್ಮುಖ ತಾರೆ ಅಖಿಲ್ ಕೆ. ದಿನಚರಿ.

ಕುಟುಂಬವನ್ನು ಪೋಷಿಸುವ ಸಲುವಾಗಿ ಅರ್ಧದಲ್ಲೇ ಶಿಕ್ಷಣವನ್ನು ಮೊಟಕುಗೊಳಿಸಿರುವ 28 ವರ್ಷದ ಅಖಿಲ್ ಅವರು ಕೇರಳ ಸಾಹಿತ್ಯ ಅಕಾಡೆಮಿ ನೀಡುವ ವಾರ್ಷಿಕ ಪ್ರಶಸ್ತಿಗೆ ಈಚೆಗೆ ಭಾಜನರಾಗಿದ್ದಾರೆ. ಅಖಿಲ್ ಅವರ ಸಣ್ಣ ಕಥೆಗಳ ಸಂಗ್ರಹ ‘ನೀಲಚಡಯನ್’ ಕೃತಿಗೆ ಈ ಪುರಸ್ಕಾರ ಲಭಿಸಿದೆ.

‘ನನ್ನನ್ನು ಗುರುತಿಸಿ, ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತಸ ತಂದಿದೆ. ನಾನು ಪ್ರಶಸ್ತಿ ನಿರೀಕ್ಷಿಸಿರಲಿಲ್ಲ’ ಎಂದು ಅಖಿಲ್ ಪಿಟಿಐಗೆ ತಿಳಿಸಿದ್ದಾರೆ.

‘ಪ್ಲಸ್ –ಟು (ಪಿಯುಸಿ) ಬಳಿಕ ಶಿಕ್ಷಣ ಮುಂದುವರಿಸಬೇಕೆಂಬ ಹಂಬಲವಿತ್ತು. ಆದರೆ ಬದುಕಿನ ಜಂಜಾಟದ ನಡುವೆ ಅದು ಕೈಗೂಡಿಲ್ಲ. ತಂದೆ,ತಾಯಿ, ಅಜ್ಜಿ ಮತ್ತು ತಮ್ಮನನ್ನು ಸಲಹುವ ಜವಾಬ್ದಾರಿ ನನ್ನ ಹೆಗಲ ಮೇಲಿದೆ’ ಎಂದೂ ಅವರು ತಮ್ಮ ಸಂಕಷ್ಟಗಳನ್ನು ಸ್ಮರಿಸಿಕೊಂಡಿದ್ದಾರೆ. ಅಖಿಲ್ ಅವರ ತಾಯಿ ಕೂಡ ದಿನಗೂಲಿ ನೌಕರಿ ಮಾಡುತ್ತಾರೆ.


‘ರಾತ್ರಿ ವೇಳೆ ಬಿಡುವಿನ ಸಮಯದಲ್ಲಿ ನನ್ನ ಕಲ್ಪನೆಗಳಲ್ಲಿ ಮೂಡಿ ಬರುವ ಕಥೆಗಳನ್ನು ಹೇಳಲಾರಂಭಿಸಿದೆ. ದಿನನಿತ್ಯದ ಬದುಕಿನ ಅನುಭವಗಳನ್ನೇ ಆಧಾರವಾಗಿಟ್ಟುಕೊಂಡು ಕಥೆಗಳನ್ನು ಹೆಣೆಯುತ್ತೇನೆ. ಇದರ ಪರಿಣಾಮವಾಗಿಯೇ ‘ನೀಲಚಡಯನ್’ ಕೃತಿ ಹೊರಬಂದಿದೆ’ ಎಂದು ಅವರ ತಿಳಿಸಿದ್ದಾರೆ. ಕೇರಳದ ಇಡುಕ್ಕಿಯಲ್ಲಿ ಪತ್ತೆಯಾಗಿರುವ ಗಾಂಜಾ ತಳಿಯ ಗಿಡಕ್ಕೆ ‘ನೀಲಚಡಯನ್’ ಎನ್ನುತ್ತಾರೆ. ಈ ಹೆಸರನ್ನು ಕೃತಿಯ ಶೀರ್ಷಿಕೆಯಾಗಿ ಬಳಸಿದ್ದೇನೆ ಎಂದಿದ್ದಾರೆ.

'₹20 ಸಾವಿರ ಪಾವತಿಸಿದರೆ ಪುಸ್ತಕ ಪ್ರಕಟಿಸುತ್ತೇವೆ ಎಂಬ ಜಾಹೀರಾತನ್ನು ಫೇಸ್‌ಬುಕ್‌ನಲ್ಲಿ ಗಮನಿಸಿ, ನಾನು ಉಳಿತಾಯ ಮಾಡಿದ್ದ ₹10,000 ಹಾಗೂ ತಾಯಿ ನೀಡಿದ ₹10,000 ಪಾವತಿಸಿ ಈ ಪುಸ್ತಕ ಪ್ರಕಟಿಸಿದ್ದೆ. ಆಗ ಅದು ಆನ್‌ಲೈನ್ ಮೂಲಕ ಮಾತ್ರವೇ ಮಾರಾಟವಿತ್ತು’ ಎಂದಿದ್ದಾರೆ.

ಆರಂಭದಲ್ಲಿ ಪುಸ್ತಕಗಳು ಮಾರಾಟವಾಗಲಿಲ್ಲ. ಚಿತ್ರಕಥೆಗಾರ ಬಿಪಿನ್ ಚಂದ್ರನ್ ಅವರು ಪುಸ್ತಕದ ಕುರಿತು ಫೇಸ್‌ಬುಕ್‌ನಲ್ಲಿ ಬರೆದ ಬಳಿಕ ಜನರಿಂದ ಬೇಡಿಕೆ ಬಂತು. ಇದೀಗ ಈ ಪುಸ್ತಕದ ಎಂಟನೇ ಆವೃತ್ತಿ ಮುದ್ರಣದಲ್ಲಿದೆ ಎಂದಿದ್ದಾರೆ.

‘ಒಳ್ಳೆಯ ವಿಷಯದ ಬಗ್ಗೆಯೇ 40ಕ್ಕೂ ಹೆಚ್ಚು ಪಟ್ಟು ಚರ್ಚೆ’

ಮುಂಬೈ (ಪಿಟಿಐ): ‘ದೇಶದಲ್ಲಿ ಇದೀಗ ಕೆಟ್ಟ ವಿಷಯಗಳಿಂತ ಒಳ್ಳೆಯ ವಿಚಾರಗಳ ಬಗ್ಗೆಯೇ 40ಕ್ಕೂ ಹೆಚ್ಚು ಪಟ್ಟು ಚರ್ಚೆ ನಡೆಯುತ್ತಿದೆ’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘ ಚಾಲಕ ಮೋಹನ್ ಭಾಗವತ್ ಭಾನುವಾರ ಇಲ್ಲಿ ತಿಳಿಸಿದರು.



ಮೋಹನ್ ಭಾಗವತ್

ಇಲ್ಲಿನ ಕಾಂದಿವಲೀ ಉತ್ತರ ಉಪನಗರದಲ್ಲಿ ಆಸ್ಪತ್ರೆಯೊಂದರ ಉದ್ಘಾಟನೆ ಬಳಿಕ ಮಾತನಾಡಿದ ಅವರು ‘ನಕಾರಾತ್ಮಕ ವಿಷಯಗಳ ಚರ್ಚೆಯನ್ನೇ ಹಲವು ಬಾರಿ ಕೇಳಿರುತ್ತೀರಿ. ಆದರೆ ನಾವು ದೇಶದ ಉದ್ದಗಲಕ್ಕೂ ಸಂಚರಿಸಿ ನೋಡಿದಾಗ ನಮಗೆ, ಭಾರತದಲ್ಲಿ ನಡೆಯುತ್ತಿರುವ ಕೆಟ್ಟ ವಿಷಯಗಳಿಗಿಂತಲೂ; ಒಳ್ಳೆಯ ವಿಚಾರದ ಕುರಿತ ಚರ್ಚೆಯನ್ನೇ 40 ಪಟ್ಟು ಹೆಚ್ಚು ಕೇಳುತ್ತಿದ್ದೇವೆ’ ಎಂದು ಹೇಳಿದರು.

‘ದೇಶದ ಇಂದಿನ ಉತ್ಕರ್ಷಕ್ಕೆ ಸರ್ಕಾರದ ನೀತಿ ಮತ್ತು ಸರ್ಕಾರದಲ್ಲಿರುವ ಜವಾಬ್ದಾರಿಯುತ ವ್ಯಕ್ತಿಗಳ ಕೆಲಸವೇ ಕಾರಣ. ಕೆಲವು ವ್ಯಕ್ತಿಗಳು ಏನನ್ನೂ ಮಾಡದಿರುವುದರಿಂದ ಕೆಲವೊಂದು ಕೆಲಸ ಸುಗಮವಾಗಿ ನಡೆಯುತ್ತಿವೆ. ಅವರೇನಾದರು ಕೆಲಸ ಮಾಡಿದರೆ ಸಮಸ್ಯೆಗಳೇ ಎದುರಾಗುತ್ತವೆ’ ಎಂದರು.

‘ಭಾರತದ ವೈಭವವನ್ನು ನೋಡಬೇಕೆನ್ನುವ ಜನರ ಅಪೇಕ್ಷೆ ಇದೀಗ ಹೆಚ್ಚಿದೆ. ಅದರಂತೆ ಬೆಳವಣಿಗೆಯೂ ನಡೆದಿದೆ. ಆದರೆ ನಾವಿನ್ನೂ ಶಕ್ತಿಶಾಲಿಗಳಾಗಿಲ್ಲ. ನಮ್ಮ ಏಳ್ಗೆಯನ್ನು ಬಯಸದವರೂ ಇದ್ದಾರೆ. ಪ್ರಸ್ತುತ ಸಮಾಜಕ್ಕೆ ಊಟ–ಬಟ್ಟೆ–ಸೂರಷ್ಟೇ ಪ್ರಮುಖವಾಗಿ ಉಳಿದಿಲ್ಲ. ಶಿಕ್ಷಣ–ಆರೋಗ್ಯವೂ ಅತ್ಯಗತ್ಯವಾಗಿದೆ’ ಎಂದು ಅವರು ಹೇಳಿದರು.

ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸಮಾರಂಭದಲ್ಲಿದ್ದರು.

ವಿವಾದಕ್ಕೀಡಾದ ‘ಓಪನ್‌ಹೈಮರ್’ ದೃಶ್ಯ

ನವದೆಹಲಿ(ಪಿಟಿಐ): ಜಗತ್ತಿನ ಮೊದಲ ಅಣುಬಾಂಬ್‌ನ ಪಿತಾಮಹ ಎಂದೇ ಕರೆಯಲಾಗುವ ಅಮೆರಿಕದ ಭೌತಶಾಸ್ತ್ರಜ್ಞ, ರಾಬರ್ಟ್ ಓಪನ್‌ಹೈಮರ್ ಜೀವನಾಧಾರಿತ ಸಿನಿಮಾ ‘ಓಪನ್‌ಹೈಮರ್’ ಶುಕ್ರವಾರ ಜಗತ್ತಿನಾದ್ಯಂತ ಬಿಡುಗಡೆಯಾಗಿದ್ದು, ಅದರ ದೃಶ್ಯವೊಂದು ಭಾರತದಲ್ಲಿ ವಿವಾದಕ್ಕೀಡಾಗಿದೆ.

ಕ್ರಿಸ್ಟೋಫರ್ ನೊಲಾನ್ ನಿರ್ದೇಶದ ಈ ಚಿತ್ರದ ದೃಶ್ಯವೊಂದರಲ್ಲಿ ಓಮನ್‌ಹೈಮರ್ ಪಾತ್ರಧಾರಿ ಕಿಲಿಯನ್ ಮಾರ್ಫಿ ಲೈಂಗಿಕ ಕ್ರಿಯೆಯ ವೇಳೆ ಸಂಸ್ಕೃತದ ಸಾಲುಗಳನ್ನು ಹೇಳುತ್ತಾರೆ. ಈ ಸಾಲುಗಳು ಭಗವದ್ಗೀತೆಯದ್ದು ಎಂದು ಹೇಳಲಾಗಿದ್ದು, ದೃಶ್ಯವನ್ನು ಕತ್ತರಿಸಬೇಕು ಎಂಬ ಆಗ್ರಹಗಳು ಕೇಳಿ ಬಂದಿವೆ. ಚಿತ್ರದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲೂ ತೀವ್ರ ಚರ್ಚೆಗಳು ನಡೆಯುತ್ತಿವೆ.

ನಿರ್ದೇಶಕ ನೊಲಾನ್ ಅವರಿಗೆ ಬಹಿರಂಗ ಪತ್ರ ಬರೆದಿರುವ ಕೇಂದ್ರದ ಮಾಹಿತಿ ಆಯುಕ್ತ ಉದಯ್ ಮಹುರ್‌ಕರ್, 'ವಿವಾದಿತ ದೃಶ್ಯವು ಹಿಂದುತ್ವದ ಮೇಲಿನ ದಾಳಿ. ನಿರ್ದಿಷ್ಟ ದೃಶ್ಯವನ್ನು ಸಿನಿಮಾದಿಂದ ತೆಗೆದು ಹಾಕಬೇಕು' ಎಂದು ಒತ್ತಾಯಿಸಿದ್ದಾರೆ. ಚಿತ್ರ ಬಿಡುಗಡೆಯಾಗಲು ಅವಕಾಶ ನೀಡಿದ ಕೇಂದ್ರ ಸೆನ್ಸಾರ್ ಮಂಡಳಿಯ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ರಾಬರ್ಟ್ ಓಪನ್‌ಹೈಮರ್ ಅವರು ಸಂಸ್ಕೃತ ಕಲಿತಿದ್ದರು. ಭಗವದ್ಗೀತೆಯಿಂದ ಪ್ರೇರಿತರಾಗಿದ್ದರು. ಹಿಂದೊಮ್ಮೆ ಸಂದರ್ಶನವೊಂದರಲ್ಲಿ ಮಾತನಾಡಿದ್ದ ಅವರು, 'ಅಣ್ವಸ್ತ್ರ ಕಂಡು ಹಿಡಿದ ಕೂಡಲೇ ‘ನಾನೀಗ ಜಗತ್ತಿನ ಪಾಲಿನ ಮೃತ್ಯು’ ಎಂದು ಅನಿಸಿತ್ತು. ಆ ಚಿಂತನೆಯ ಮೂಲ ಹಿಂದೂ ಪವಿತ್ರ ಗ್ರಂಥವಾಗಿತ್ತು’ ಎಂದಿದ್ದರು.

ಚಿತ್ರ ಭಾರತದಲ್ಲಿ ಈ ವರೆಗೆ ₹30 ಕೋಟಿ ಗಳಿಕೆ ಕಂಡಿದೆ. ಸಿನಿಮಾಕ್ಕೆ ಸೆನ್ಸಾರ್ ಮಂಡಳಿಯು ಯು/ಎ ಪ್ರಮಾಣಪತ್ರ ನೀಡಿದೆ.



ಬ್ರಿಟನ್‌ನ ಚಿತ್ರಮಂದಿರದ ಹೊರಗೆ ಹಾಕಲಾಗಿರುವ ‘ಓಪನ್‌ಹೈಮರ್’ ಬ್ಯಾನರ್ — ಎಎಫ್ ಚಿತ್ರ

ಕಾಳ್ಗಿಚ್ಚು: 19 ಸಾವಿರ ಜನರ ಸ್ಥಳಾಂತರ

ಅಥೆನ್ಸ್ (ಎಪಿ): ಗ್ರೀಕ್ ದ್ವೀಪ ರೋಡ್ಸ್‌ನಲ್ಲಿ ಕಾಳ್ಗಿಚ್ಚು ಆರು ದಿನ ಕಳೆದರೂ ತಹಬದಿಗೆ ಬಂದಿಲ್ಲ. ಈ ಮಧ್ಯೆ ದ್ವೀಪದಿಂದ 19 ಸಾವಿರ ಮಂದಿಯನ್ನು ಸ್ಥಳಾಂತರ ಮಾಡಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಇಷ್ಟು ಸಂಖ್ಯೆಯ ಜನರನ್ನು ಕಾಳ್ಗಿಚ್ಚಿನ ಕಾರಣಕ್ಕೆ ಸ್ಥಳಾಂತರ ಮಾಡಿದ್ದು, ದೇಶದಲ್ಲಿ ಇದೇ ಮೊದಲು ಎಂದು ಗ್ರೀಕ್‌ನ ‘ಹವಾಮಾನ ಬದಲಾವಣೆ ಮತ್ತು ನಾಗರಿಕ ಸುರಕ್ಷತೆ’ ಇಲಾಖೆ ತಿಳಿಸಿದೆ. ರಸ್ತೆ ಮಾರ್ಗವಾಗಿ 16 ಸಾವಿರ ಹಾಗೂ 3 ಸಾವಿರ ಜನರನ್ನು ಹಡಗುಗಳ ಮೂಲಕ ಸ್ಥಳಾಂತರಿಸಲಾಗಿದೆ. 12 ಹಳ್ಳಿಗಳು ಮತ್ತು ಹಲವು ಹೋಟೆಲ್‌ಗಳಿಂದ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಕರೆದೊಯ್ಯಲಾಗಿದೆ.

ಗ್ರೀಕ್‌ನ 266 ಅಗ್ನಿಶಾಮಕ ವಾಹನ, 10 ಹೆಲಿಕಾಪ್ಟರ್‌ಗಳನ್ನು ಬೆಂಕಿ ನಂದಿಸಲು ಬಳಸಿಕೊಳ್ಳಲಾಗಿದೆ. ನೂರಾರು ಸ್ವಯಂ ಸೇವಕರು ಕೈ ಜೋಡಿಸಿದ್ದಾರೆ ಎಂದು ಅಗ್ನಿಶಾಮಕ ಇಲಾಖೆ ವಕ್ತಾರ ಯಾನ್ನಿಸ್ ಆರ್ಟೋಪಿಸ್ ತಿಳಿಸಿದರು.

ಐರೋಪ್ಯ ಒಕ್ಕೂಟದ 450 ಅಗ್ನಿಶಾಮಕ ವಾಹನಗಳು, 6 ವಿಮಾನಗಳು ಕಾಳ್ಗಿಚ್ಚು ನಿಯಂತ್ರಣಕ್ಕಾಗಿ ನಿಯೋಜನೆಗೊಂಡಿವೆ ಎಂದು ‘ಮಾನವೀಯ ನೆರವು ಮತ್ತು ಬಿಕ್ಕಟ್ಟು ನಿರ್ವಹಣೆಗಾಗಿ ಐರೋಪ್ಯ ಒಕ್ಕೂಟ’ದ ಆಯುಕ್ತ ಜಾನೆಜ್ ಲೆನಾರ್ಸಿಕ್ ಭಾನುವಾರ ಮಧ್ಯಾಹ್ನ ಟ್ವೀಟ್ ಮಾಡಿದ್ದಾರೆ.

ಪ್ಯಾಕೇಜ್ ಪ್ರವಾಸ ಸಂಸ್ಥೆಗಳಾದ ‘ಟಿಯುಐ’ ಮತ್ತು ‘ಜೆಟ್2’ ವಿಮಾನ ಸೇವೆಗಳನ್ನು ಸ್ಥಗಿತಗೊಳಿಸಿವೆ. ಆದರೆ, ಪ್ರವಾಸಿಗರನ್ನು ಸುರಕ್ಷಿತವಾಗಿ ಕರೆತರಲು ವಿಮಾನ ಕಳುಹಿಸುವುದಾಗಿ ‘ಜೆಟ್2’ ಘೋಷಿಸಿದೆ. ದಾಖಲೆ ಪತ್ರಗಳನ್ನು ಕಳೆದುಕೊಂಡಿರುವ ಪ್ರವಾಸಿಗರ ನೆರವಿಗಾಗಿ ರೋಡ್ಸ್ ವಿಮಾನ ನಿಲ್ದಾಣದಲ್ಲಿ ನೆರವು ಕೇಂದ್ರ ಆರಂಭಿಸಲು ಸಿಬ್ಬಂದಿಯನ್ನು ಅಲ್ಲಿಗೆ ರವಾನಿಸಲಾಗುತ್ತಿದೆ ಎಂದು ಗ್ರೀಕ್‌ನ ವಿದೇಶಾಂಗ ಇಲಾಖೆ ತಿಳಿಸಿದೆ.

‘ಅಧಿಕಾರಿಗಳು ಅವಸರದಲ್ಲಿ ಜನರನ್ನು ಬೇರೆಡೆಗೆ ಸಾಗಿಸುತ್ತಿದ್ದಾರೆ. ಇದರಿಂದ ಗೊಂದಲ ಉಂಟಾಗಿದೆ’ ಎಂದು ಟ್ರಾವಲ್ ಏಜೆಂಟ್ ಸ್ಟೆಲಿಯೊಸ್ ಕೊಟ್ಯಡಿಸ್ ಹೇಳಿದ್ದಾರೆ.

ಗದ್ದಲವೇ ವಿಪಕ್ಷಗಳ ಬಂಡವಾಳ: ಧನಕರ್ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕಲಾಪದಲ್ಲಿ ಗದ್ದಲ ಸೃಷ್ಟಿಸುವುದನ್ನೇ ಪ್ರತಿಪಕ್ಷಗಳು ತಮ್ಮ ಬಂಡವಾಳ ಮಾಡಿಕೊಂಡಿವೆ’ ಎಂದು ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಕರ್ ಅವರು ಟೀಕಿಸಿದ್ದಾರೆ.



ಜಗದೀಪ್ ಧನಕರ್

ಭಾನುವಾರ ಇಲ್ಲಿ ನಡೆದ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ನೂರನೇ ವರ್ಷದ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿ ಸರ್ಕಾರದ ಸಾಧನೆಯನ್ನು ಪ್ರಶಂಸಿಸಿದರು.

ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಎರಡು ದಿನಗಳಿಂದಲೂ ವಿರೋಧ ಪಕ್ಷಗಳು ಅಧಿವೇಶನಕ್ಕೆ ಅಡ್ಡಿಪಡಿಸುತ್ತಿರುವ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದರು.

‘ಪ್ರಜಾಪ್ರಭುತ್ವದಲ್ಲಿ ಸಂವಾದ, ಚರ್ಚೆ ಹಾಗೂ ಸಮಾಲೋಚನೆ ನಡೆಯಬೇಕು. ಆದರೆ, ಸಂಸತ್‌ನಲ್ಲಿ ಇದಕ್ಕೆ ತದ್ವಿರುದ್ಧ ಸ್ಥಿತಿ ನಿರ್ಮಾಣವಾಗಿದೆ. ಜನತಂತ್ರದ ಮೌಲ್ಯಗಳಿಗೆ ಅಡ್ಡಿಪಡಿಸುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ’ ಎಂದು ಟೀಕಿಸಿದರು.

‘ದಿನದ 24 ಗಂಟೆಗಳ ಕಾಲ ಜನರಿಗೆ ನ್ಯಾಯ ಒದಗಿಸುವುದು ಪ್ರಜಾಪ್ರಭುತ್ವವೆಂಬ ದೇಗುಲದ ಕರ್ತವ್ಯ. ಆದರೆ, ಅಲ್ಲಿ ಗದ್ದಲ, ಕೋಲಾಹಲ ಸೃಷ್ಟಿಸಲಾಗುತ್ತಿದೆ. ವಿರೋಧ ಪಕ್ಷಗಳು ರಾಜಕೀಯ ಸೇಡು ತೀರಿಸಿಕೊಳ್ಳಲು ಇಳಿದಿವೆ. ಚರ್ಚೆ ಮೂಲಕ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು’ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರವು ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಹೊಣೆಗಾರಿಕೆಗೆ ಗಮನ ಕೇಂದ್ರೀಕರಿಸಿದೆ. ಮಧ್ಯವರ್ತಿಗಳ ಪ್ರವೇಶಕ್ಕೆ ಕಡಿವಾಣ ಹಾಕುವ ಮೂಲಕ ಭ್ರಷ್ಟಾಚಾರದ ನಿರ್ಮೂಲನೆಗೆ ಒತ್ತು ನೀಡಿದೆ ಎಂದು ಶ್ಲಾಘಿಸಿದರು.

ಖಾಲಿಸ್ತಾನಿ ಉಗ್ರ ಸಂಘಟನೆ ಜಾಲ ಬಯಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಖಾಲಿಸ್ತಾನಿ ಉಗ್ರ ಸಂಘಟನೆಗಳಾದ ‘ಬಬ್ಬರ್ ಖಾಲ್ಸ ಇಂಟರ್‌ನ್ಯಾಷನಲ್ (ಬಿಕೆಐ)’ ಮತ್ತು ‘ಖಾಲಿಸ್ತಾನ್ ಟೈಗರ್ ಫೋರ್ಸ್ (ಕೆಟಿಎಫ್)’ನೊಂದಿಗೆ ನಂಟು ಹೊಂದಿದ್ದ ಮೂವರು ಉಗ್ರರ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಿಶೇಷ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದೆ.

ಭಾರತದಲ್ಲಿ ಉಗ್ರ ಕೃತ್ಯಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ನೇಮಕಾತಿ, ನಿರ್ವಹಣೆಗೆ ಸಂಬಂಧಿಸಿದ ಜಾಲವನ್ನು ಈ ಚಾರ್ಜ್‌ಶೀಟ್ ಬಯಲು ಮಾಡಿದೆ ಎಂದು ಎನ್‌ಐಎ ತಿಳಿಸಿದೆ.

ಬಿಕೆಐ ಸಂಪರ್ಕ ಹೊಂದಿರುವ ಹರ್ವಿಂದರ್ ಸಿಂಗ್ ಸಂಧು ಅಲಿಯಾಸ್ ರಿಂದಾ, ಲಖ್ಬೀರ್ ಸಿಂಗ್ ಸಂಧು ಅಲಿಯಾಸ್ ಲಂಡಾ, ಕೆಟಿಎಫ್‌ನ ಅರ್ಷದೀಪ್ ಸಿಂಗ್ ಅಲಿಯಾಸ್ ಅರ್ಷ ದಾಲಾ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. ವಿದೇಶದಲ್ಲಿದ್ದೇ ತಮ್ಮ ಜಾಲದ ಮೂಲಕ ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ಇವರು ಭಾಗಿಯಾಗುತ್ತಿದ್ದರು ಎಂದು ಆರೋಪಿಸಲಾಗಿದೆ.

ಎನ್‌ಐಎ ಶೋಧ

ಚೆನ್ನೈ (ಪಿಟಿಐ): ತಂಜಾವೂರು ಜಿಲ್ಲೆಯ ತಿರುಭುವನಂನಲ್ಲಿ 2019ರಲ್ಲಿ ನಡೆದಿದ್ದ ಪಟ್ಟಾಲಿ ಮಕ್ಕಳ್ ಕಚ್ಚಿ (ಪಿಎಂಕೆ) ಪಕ್ಷದ ಪದಾಧಿಕಾರಿಯೊಬ್ಬರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಭಾನುವಾರ ತಮಿಳುನಾಡಿನ ವಿವಿಧೆಡೆ ಶೋಧ ನಡೆಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮದುರೈ, ತಂಜಾವೂರು, ತಿರುನಲ್ವೇಲಿ ಮತ್ತು ಮೈಲಾಡುತುರೈ ಜಿಲ್ಲೆ ಸೇರಿದಂತೆ ವಿವಿಧೆಡೆ ಎನ್‌ಐಎ ಶೋಧ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಪಟ್ಟಣದಲ್ಲಿ ಕೆಲವು ಆಪಾದಿತ ಮತಾಂತರ ಯತ್ನಗಳನ್ನು ಪ್ರಶ್ನಿಸಿದ ಕೆಲವು ಗಂಟೆಗಳ ನಂತರ ರಾಮಲಿಂಗಂ ಅವರನ್ನು ವ್ಯಕ್ತಿಗಳ ಗುಂಪೊಂದು ಕಡಿದು ಕೊಂದಿತು.

ಗುಜರಾತ್, ಮಹಾರಾಷ್ಟ್ರದಲ್ಲೂ ಭಾರಿ ಮಳೆ

ಒಂದನೇ ಪುಟದಿಂದ...

‘ಮಳೆ ಕಡಿಮೆಯಾದ ಕಾರಣ ನಗರದಲ್ಲಿ ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸಲಾಗಿದೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಅಗ್ನಿಶಾಮಕ ದಳದವರು ರಕ್ಷಣಾ ಕಾರ್ಯಾಚರಣೆ ನಡೆಸಿ ಸಂಕಷ್ಟಕ್ಕೆ ಸಿಲುಕಿದ್ದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ’ ಎಂದು ಜಿಲ್ಲಾಧಿಕಾರಿ ವಿವರಿಸಿದ್ದಾರೆ.

ಗುಜರಾತ್ ಸಿ.ಎಂ ಜೊತೆ ಶಾ ಮಾತುಕತೆ: ‘ಪ್ರವಾಹ ಪರಿಸ್ಥಿತಿ ಕುರಿತು ಮಾಹಿತಿ ಪಡೆಯಲು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಜೊತೆಗೆ ಮಾತನಾಡಿದ್ದೇನೆ. ದೆಹಲಿ ಲೆಫ್ಟಿನೆಂಟ್ ಗವರ್ನರ್ ಜೊತೆಗೂ ಮಾತನಾಡಿ ಯಮುನಾ ನದಿಯ ನೀರಿನ ಮಟ್ಟದ ಕುರಿತು ಮಾಹಿತಿ ಪಡೆದಿದ್ದೇನೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಟ್ವೀಟ್ ಮಾಡಿದ್ದಾರೆ.

ಕೊಚ್ಚಿಹೋದ ಉಪಾಹಾರಗೃಹ (ಶಿಮ್ಲಾ ವರದಿ): ಹಿಮಾಚಲ ಪ್ರದೇಶದ ಶಿಮ್ಲಾ ಜಿಲ್ಲೆಯಲ್ಲಿ ಭಾನುವಾರವೂ ಮಳೆ ಸುರಿದಿದ್ದರಿಂದ ಪಬ್ಬರ್ ನದಿಯಲ್ಲಿ ದಿಢೀರ್ ಪ್ರವಾಹ ಬಂದಿದ್ದು, ರಸ್ತೆ ಬದಿಯಲ್ಲಿದ್ದ ಉಪಾಹಾರಗೃಹ ಕೊಚ್ಚಿಕೊಂಡು ಹೋಗಿದೆ. ಇದರೊಳಗಿದ್ದ ಮೂವರ ಮೃತದೇಹ ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಸ್ಸೊಂದು ಜುಲೈ 10ರಂದು ಮನಾಲಿಯ ಬಿಯಾಸ್ ನದಿಯಲ್ಲಿ ಮುಳುಗಿದ್ದು, ಶನಿವಾರ ಅವಶೇಷ ಪತ್ತೆಯಾಗಿದೆ. ಆದರೆ ಇದೂವರೆಗೂ ಅದರೊಳಗಿದ್ದ 11 ಪ್ರಯಾಣಿಕರು ಪತ್ತೆಯಾಗಿಲ್ಲ.



ಉತ್ತರಪ್ರದೇಶದ ಗಾಜಿಯಾಬಾದ್‌ನ ಪ್ರವಾಹಪೀಡಿತ ಪ್ರದೇಶದಿಂದ ಜನರನ್ನು ಭಾನುವಾರ ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯಲಾಯಿತು —ಪಿಟಿಐ ಚಿತ್ರ

ಮತ್ತೆ ಅಪಾಯಮಟ್ಟ ಮೀರಿ ಹರಿದ ಯಮುನಾ

ಹತ್ನಿಕುಂಡ್ ಬ್ಯಾರೇಜ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹೊರಬಿಟ್ಟಿರುವುದರಿಂದ ದೆಹಲಿಯಲ್ಲಿ ಯಮುನಾ ನದಿಯ ನೀರಿನ ಮಟ್ಟ ಮತ್ತೆ ಅಪಾಯಮಟ್ಟ ದಾಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿರುವುದರಿಂದ ಪ್ರವಾಹಪೀಡಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಪುನರ್ವಸತಿ ಕಾರ್ಯಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಪ್ರವಾಹ ಮುನ್ನೆಚ್ಚರಿಕೆ: (ನೋಯ್ಡಾ ವರದಿ) ಹಿಂಡನ್ ನದಿಯಿಂದ ಹೊರಬಿಡುವ ನೀರಿನ ಪ್ರಮಾಣ ಏರಿಕೆಯಾಗಿದ್ದು, ನದಿ ದಡದ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಇದೆ ಎಂದು ಉತ್ತರ ಪ್ರದೇಶದ ಗೌತಮ್ ಬುದ್ಧ ನಗರದ ಅಧಿಕಾರಿಗಳು ಮುನ್ನೆಚ್ಚರಿಕೆ ನೀಡಿದ್ದಾರೆ. ಐದು ಗ್ರಾಮಗಳ 200 ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹತ್ತು ದಿನದಲ್ಲಿ 16 ಮಂದಿ ಸಾವು

ನಾಗ್ಪುರ: ಮಹಾರಾಷ್ಟ್ರದ ವಿದರ್ಭ ಪ್ರದೇಶದ ನಾಗ್ಪುರ ವಿಭಾಗದಲ್ಲಿ ಜುಲೈ 13ರಿಂದ ಇದುವರೆಗೆ ಮಳೆ ಸಂಬಂಧಿ ಅವಘಡಗಳಲ್ಲಿ 16 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

1,600 ಮನೆಗಳು ಹಾನಿಗೀಡಾಗಿದ್ದು, 875.84 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ನಾಶವಾಗಿದೆ. ಅಕೋಲದಲ್ಲಿ ಒಂದೇ ದಿನ 100ಮಿ.ಮೀ. ಮಳೆ ಸುರಿದಿದೆ ಎಂದು ಹೇಳಿದ್ದಾರೆ.

ಕಾರ್ಯಾಚರಣೆ ಸ್ಥಗಿತ: ‘ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಇರ್ಶಾಲವಾಡಿಯಲ್ಲಿ ಬುಧವಾರ ರಾತ್ರಿ ಸಂಭವಿಸಿದ್ದ ಭೂಕುಸಿತದಲ್ಲಿ ಸಿಲುಕಿದ್ದವರ ರಕ್ಷಣಾ ಕಾರ್ಯಾಚರಣೆಯನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸ್ಥಗಿತಗೊಳಿಸಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಉದಯ್ ಸಮಂತ್ ಭಾನುವಾರ ತಿಳಿಸಿದರು.

‘ಸ್ಥಳೀಯರು, ಜಿಲ್ಲಾಡಳಿತ ಹಾಗೂ ಇನ್ನಿತರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ರಕ್ಷಣಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಭೂಕುಸಿತದಲ್ಲಿ 57 ಜನ ನಾಪತ್ತೆಯಾಗಿದ್ದರು. ಎನ್‌ಡಿಆರ್‌ಎಫ್ ಕಾರ್ಯಾಚರಣೆಯಲ್ಲಿ 12 ಪುರುಷರು, 10 ಮಹಿಳೆಯರು, ನಾಲ್ವರು ಮಕ್ಕಳು ಹಾಗೂ ಒಂದು ಗುರುತು ಪತ್ತೆಯಾಗದ ಶವ ಸೇರಿದಂತೆ ಒಟ್ಟು 27 ಮೃತದೇಹ ದೊರೆತಿವೆ. ಭಾನುವಾರ ಅವಶೇಷಗಳಡಿ ಏನೂ ಸಿಕ್ಕಿಲ್ಲ. ಗ್ರಾಮದ 48 ಮನೆಗಳಲ್ಲಿ 17 ಮನೆಗಳಿಗೆ ತೀವ್ರ ಹಾನಿಯಾಗಿದೆ’ ಎಂದರು.

‘ಸರ್ಕಾರ ಸನ್ನದ್ಧ’: ‘ಅತಿವೃಷ್ಟಿಯಿಂದ ಉಂಟಾಗುವ ಸಮಸ್ಯೆಗಳನ್ನು ಎದುರಿಸಲು ರಾಜ್ಯ ಸರ್ಕಾರವು ಸನ್ನದ್ಧವಾಗಿದೆ’ ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತಿಳಿಸಿದ್ದಾರೆ. ನಾಗ್ಪುರ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಭಾರಿ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿರುವ ಪ್ರದೇಶಗಳಲ್ಲಿ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಫ್ಗನ್ ಪ್ರವಾಹ: 30 ಸಾವು, 40 ಮಂದಿ ನಾಪತ್ತೆ

ಕಾಬೂಲ್ (ರಾಯಿಟರ್ಸ್): ಅಫ್ಗಾನಿಸ್ತಾನದಲ್ಲಿ ಪ್ರವಾಹದಲ್ಲಿ ಸಿಲುಕಿ 30 ಜನರು ಮೃತಪಟ್ಟಿದ್ದು, ಅಂದಾಜು 40 ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ ಎಂದು ವಿಪತ್ತು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೂರ್ವ ಕಾಬೂಲ್‌ನ ಜಲ್ರೆಜ್ ಜಿಲ್ಲೆಯಲ್ಲಿಯೇ 26 ಜನರು ಸಾವಿಗೀಡಾಗಿದ್ದರೆ, ಕಾಬೂಲ್‌ನಲ್ಲಿ ನಾಲ್ವರು ಮೃತಪಟ್ಟಿದ್ದಾರೆ. 70ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ನೂರಾರು ಮನೆಗಳು ಕೊಚ್ಚಿಹೋಗಿವೆ ಎಂದು ಸಚಿವಾಲಯದ ವಕ್ತಾರ ಮೊಹಮ್ಮದ್ ಶಫಿ ರಹೀಂ ಹೇಳಿದ್ದಾರೆ.

ನೂರಾರು ಹೆಕ್ಟೇರ್ ಕೃಷಿ ಭೂಮಿ ಕೊಚ್ಚಿ ಹೋಗಿದೆ. ನೂರಾರು ಮನೆಗಳಿಗೆ ಹಾನಿಯಾಗಿದೆ. ನಾಪತ್ತೆ ಆಗಿರುವವರು ಅವಶೇಷಗಳ ಅಡಿ ಸಿಲುಕಿರುವ ಸಾಧ್ಯತೆ ಇದೆ ಎಂದು ಪ್ರಾಂತೀಯ ಗವರ್ನರ್ ಕಚೇರಿ ಹೇಳಿಕೆ ತಿಳಿಸಿದೆ. ಕಾಬೂಲ್ ಆಡಳಿತ ಸಂತ್ರಸ್ತ ಕುಟುಂಬಗಳಿಗೆ ನೆರವಿಗೆ ಧಾವಿಸಲಿದೆ ಎಂದು ತಾಲಿಬಾನ್ ಸರ್ಕಾರದ ವಕ್ತಾರ ಜಬಿಹುಲ್ಲಾ ಮುಜಾಹಿದ್ ತಿಳಿಸಿದ್ದಾರೆ.

ಗುಂಡಿಕ್ಕಿ ನಾಲ್ವರು ಪೊಲೀಸರ ಹತ್ಯೆ

ಟೆಹರಾನ್ (ಎಪಿ): ಆಗ್ನೇಯ ಇರಾನ್‌ನಲ್ಲಿ ನಾಲ್ವರು ಹೆದ್ದಾರಿ ಪೊಲೀಸರನ್ನು ಉಗ್ರರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಖಾಶ್ ಮತ್ತು ತಫ್ತಾನ್ ನಗರ ಸಂಪರ್ಕಿಸುವ ವಿವಾದಿತ ಸಿಸ್ತಾನ್ ಮತ್ತು ಬಲೂಚಿಸ್ತಾನ ಪ್ರಾಂತ್ಯದ ಹೆದ್ದಾರಿಯಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದರು.

ಕ್ಷಿಪಣಿ ದಾಳಿ: 22 ಮಂದಿಗೆ ಗಾಯ

ಒಡೆಸಾ (ಎಪಿ): ಉಕ್ರೇನಿನ ಕಪ್ಪು ಸಮುದ್ರದ ನಗರ ಒಡೆಸಾ ಮೇಲೆ ಭಾನುವಾರ ಮುಂಜಾನೆ ರಷ್ಯಾ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಒಬ್ಬರು ಮೃತಪಟ್ಟು, 22 ಮಂದಿ ಗಾಯಗೊಂಡಿದ್ದಾರೆ. ಬಂದರು ನಗರದ ಮೂಲ ಸೌಕರ್ಯಗಳು ಹಾನಿಗೊಳಗಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಕ್ಷಿಪಣಿ ದಾಳಿಯಲ್ಲಿ ಗಾಯಗೊಂಡವರಲ್ಲಿ ನಾಲ್ವರು ಮಕ್ಕಳಿದ್ದಾರೆ. ಐತಿಹಾಸಿಕ ಟ್ರಾನ್ಸ್‌ಫಿಗರೇಷನ್ ಕ್ಯಾಥೆಡ್ರಲ್ ಸೇರಿದಂತೆ ಹಲವು ಸ್ಮಾರಕಗಳು ಹಾನಿಗೊಳಗಾಗಿವೆ’ ಎಂದು ಪ್ರಾದೇಶಿಕ ಗವರ್ನರ್ ಒಲೇಹ್ ಕಿಪರ್ ತಿಳಿಸಿದ್ದಾರೆ.

‘ಆರು ವಸತಿ ಕಟ್ಟಡಗಳ ಮೇಲೆ ದಾಳಿ ನಡೆದಿದೆ. ಕೆಲವರು ಅಪಾರ್ಟ್‌ಮೆಂಟ್‌ಗಳಲ್ಲಿ ಸಿಲುಕಿದ್ದು, ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

‘ಒಡೆಸಾ ಪ್ರದೇಶದಲ್ಲಿ ರಷ್ಯಾ ವಿರೋಧಿ ಉಗ್ರ ಚಟುವಟಿಕೆಗೆ ಸಿದ್ಧತೆ ನಡೆಸುತ್ತಿದ್ದ ಕಾರಣ ನಮ್ಮ ಪಡೆಗಳು ದಾಳಿ ನಡೆಸಿವೆ’ ಎಂದು ರಷ್ಯಾ ಹೇಳಿಕೆಯಲ್ಲಿ ತಿಳಿಸಿದೆ.

ಬ್ಯಾಡ್ಮಿಂಟನ್: ಭಾರತದ ಜೋಡಿಗೆ ಕೊರಿಯಾ ಓಪನ್ ಪುರುಷರ ಡಬಲ್ಸ್ ಪ್ರಶಸ್ತಿ

ಚಿರಾಗ್–ಸಾತ್ವಿಕ್ ಜಯದ ಓಟ

ಯೋಸು, ಕೊರಿಯಾ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಕೊರಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ಜಯಿಸಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಸಾತ್ವಿಕ್ ಮತ್ತು ಚಿರಾಗ್ ಅವರು ಈ ವರ್ಷ ಗೆದ್ದ ನಾಲ್ಕನೇ ಪ್ರಶಸ್ತಿ ಇದಾಗಿದೆ. ಸ್ವಿಸ್ ಓಪನ್, ಏಷ್ಯನ್ ಚಾಂಪಿಯನ್‌ಷಿಪ್ ಮತ್ತು ಇಂಡೊನೇಷ್ಯಾ ಓಪನ್ ಪ್ರಶಸ್ತಿಗಳನ್ನು ಇದೇ ವರ್ಷ ಜಯಿಸಿದ್ದಾರೆ.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿಯು 17–21, 21–13, 21–14ರಿಂದ ವಿಶ್ವ ಬ್ಯಾಡ್ಮಿಂಟನ್ ಕಂಚಿನ ಪದಕವಿಜೇತ ಅಲ್ಫಿಯಾನ್ ಮತ್ತು ಆರ್ಡಿಯಾಂಟೊ ಅವರನ್ನು ಸೋಲಿಸಿದರು.

2022ರಲ್ಲಿ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಾಂಪಿಯನ್ ಆಗಿದ್ದ ಸಾತ್ವಿಕ್ ಮತ್ತು ಚಿರಾಗ್ ನಂತರದ ಟೂರ್ನಿಗಳಲ್ಲಿಯೂ ಉತ್ತಮ ಸಾಧನೆ ಮಾಡಿದ್ದಾರೆ. ತಾವು ಆಡಿರುವ ಕಳೆದ ಹತ್ತು ಪಂದ್ಯಗಳಲ್ಲಿ ಸೋತಿಲ್ಲವೆಂಬ ಹೆಗ್ಗಳಿಕೆಯೂ ಇವರದ್ದಾಗಿದೆ.

ಫೈನಲ್‌ನಲ್ಲಿ ಭಾರತದ ಜೋಡಿಗೆ ಎದುರಾದ ಇಂಡೊನೇಷ್ಯಾದ ಅಲ್ಫೆನ್ ಮತ್ತು ಅರ್ಡಿಯಾಂಟೊ ಅವರು ಕಠಿಣ ಪೈಪೋಟಿಯೊಡ್ಡಿದರು. ಈ ಪಂದ್ಯದಲ್ಲಿ ಕಣಕ್ಕಿಳಿಯುವ ಮುನ್ನ ಎರಡೂ ಜೋಡಿಗಳು 2–2ರ ಬಲಾಬಲ ಹೊಂದಿದ್ದವು.



ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ (ಬಲ) ಮತ್ತು ಚಿರಾಗ್ ಶೆಟ್ಟಿ

ಈ ಪಂದ್ಯದ ಮೊದಲ ಗೇಮ್‌ನಲ್ಲಿ ಭಾರತದ ಜೋಡಿಯು ಸೋಲನುಭವಿಸಿತು. ಈ ಗೇಮ್‌ನ ಒಂದು ಹಂತದಲ್ಲಿ ಸಾತ್ವಿಕ್ ಜೋಡಿಯು 10–19 ರಿಂದ ಹಿನ್ನಡೆ ಅನುಭವಿಸಿತ್ತು. ಆ ಸಂದರ್ಭದಲ್ಲಿ ಸತತ ಆರು ಪಾಯಿಂಟ್‌ಗಳನ್ನು ಕಲೆಹಾಕುವಲ್ಲಿ ಯಶಸ್ವಿಯಾದ ಸಾತ್ವಿಕ್–ಚಿರಾಗ್ ಜೋಡಿಯು ಮುನ್ನಡೆ ಸಾಧಿಸುವ ಭರವಸೆ ಮೂಡಿಸಿತ್ತು. ಆದರೆ ಅದಕ್ಕೆ ಎದುರಾಳಿಗಳು ಅವಕಾಶ ನೀಡಲಿಲ್ಲ.

ಮುಖ್ಯಾಂಶಗಳು

- ಮೊದಲ ಗೇಮ್‌ನಲ್ಲಿ ಸೋತು ಪುಟಿದೆದ್ದ ಭಾರತದ ಜೋಡಿ
- ಮುಂದಿನ ವಾರ ಜಪಾನ್ ಓಪನ್ ಬ್ಯಾಡ್ಮಿಂಟನ್‌ನಲ್ಲಿ ಆಡಲಿರುವ ಚಿರಾಗ್–ಸಾತ್ವಿಕ್

ಈ ವಾರವು ನಮಗೆ ಬಹಳ ವಿಶೇಷವಾಗಿದೆ. ಈ ಅವಧಿಯಲ್ಲಿ ಅದ್ಭುತವಾದ ಬ್ಯಾಡ್ಮಿಂಟನ್ ಆಡಿದ್ದೇವೆ. ಇದೇ ಲಯವನ್ನು ಮುಂದುವರಿಸುವತ್ತ ಗಮನ ನೆಟ್ಟಿದ್ದೇವೆ. ಮುಂದಿನ ವಾರ ಜಪಾನ್ ಓಪನ್‌ನಲ್ಲಿ ಇಂತಹದೇ ಆಟವಾಡುವ ವಿಶ್ವಾಸವಿದೆ.

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ

ಈ ಗೇಮ್‌ನಲ್ಲಿ ಆದ ಎಲ್ಲ ಲೋಪಗಳನ್ನು ಸುಧಾರಿಸಿಕೊಂಡು ಎರಡನೇ ಮತ್ತು ಮೂರನೇ ಗೇಮ್‌ಗಳಲ್ಲಿ ಭಾರತದ ಆಟಗಾರರು ಪಾರಮ್ಯ ಮೆರೆದರು.

ಸಾತ್ವಿಕ್ ಅವರ ಶರವೇಗದ ಸ್ಮ್ಯಾಷ್‌ಗಳಿಗೆ ಇಂಡೊನೇಷ್ಯಾ ಆಟಗಾರರ ಬಳಿ ಪ್ರತ್ಯುತ್ತರವಿರಲಿಲ್ಲ. ಚಿರಾಗ್ ಅವರ ಅಮೋಘವಾದ ಫುಟ್‌ವರ್ಕ್ ಮತ್ತು ನೆಟ್ ಬಳಿಯ ಆಟವೂ ಗೆಲುವಿಗೆ ಕಾರಣವಾದವು.

ಸಿರಾಜ್‌ಗೆ ಐದು ವಿಕೆಟ್

ಎರಡನೇ ಕ್ರಿಕೆಟ್ ಟೆಸ್ಟ್: ಮುನ್ನಡೆ ಹಿಗ್ಗಿಸಿದ ರೋಹಿತ್ ಬಳಗ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಐದು ವಿಕೆಟ್ ಗೊಂಚಲು ಗಳಿಸಿದ ಭಾರತದ ಮೊಹಮ್ಮದ್ ಸಿರಾಜ್ ಅವರ ದಾಳಿಗೆ, ವೆಸ್ಟ್ ಇಂಡೀಸ್ ತಂಡವು ಇಲ್ಲಿ ನಡೆಯುತ್ತಿರುವ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಕುಸಿಯಿತು.

ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು ಗಳಿಸಿದ್ದ 438 ರನ್‌ಗಳಿಗೆ ಉತ್ತರವಾಗಿ ವಿಂಡೀಸ್ ಬಳಗಕ್ಕೆ 115.4 ಓವರ್‌ಗಳಲ್ಲಿ 255 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಇದರೊಂದಿಗೆ ಭಾರತ ತಂಡವು 183 ರನ್‌ಗಳ ಮುನ್ನಡೆ ಸಾಧಿಸಿತು. ವೇಗಿ ಸಿರಾಜ್ 23.4 ಓವರ್‌ಗಳಲ್ಲಿ 60 ರನ್‌ಗಳಿಗೆ ಐದು ವಿಕೆಟ್ ಗಳಿಸಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ.

ಭಾನುವಾರ ಎರಡನೇ ಇನಿಂಗ್ಸ್ ಆರಂಭಿಸಿದ ಭಾರತ ತಂಡ, ಚಹಾ ವಿರಾಮದ ಬಳಿಕ 19 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 139 ರನ್ ಗಳಿಸಿತ್ತು. ಮಳೆಯ ಕಾರಣ ಎರಡನೇ ಅವಧಿಯಲ್ಲಿ ಆಟ ನಡೆಯಲಿಲ್ಲ. ತಂಡವು ಒಟ್ಟು 322 ರನ್ ಮುನ್ನಡೆ ಸಾಧಿಸಿದೆ.

ನಾಯಕ ರೋಹಿತ್ ಶರ್ಮಾ ಮತ್ತು ಯಶಸ್ವಿ ಜೈಸ್ವಾಲ್ ಅವರು ತಂಡಕ್ಕೆ ಅಮೋಘ ಆರಂಭ ನೀಡಿದರು.

ರೋಹಿತ್, ಟೆಸ್ಟ್‌ನಲ್ಲಿ ತಮ್ಮ ಅತಿವೇಗದ ಅರ್ಧಶತಕ (35 ಎಸೆತಗಳಲ್ಲಿ 50) ದಾಖಲಿಸಿದರು. ಎರಡು ಬಾರಿ ಜೀವದಾನ ಲಭಿಸಿದ್ದನ್ನು ಸಮರ್ಥವಾಗಿ ಬಳಸಿಕೊಂಡರು. ಒಟ್ಟು 57 ರನ್ ಗಳಿಸಿ ಔಟಾದರು. ಮೊದಲ ವಿಕೆಟ್‌ಗೆ 98 ರನ್ ಸೇರಿಸಿದರು. ಜೈಸ್ವಾಲ್ 30 ಎಸೆತಗಳಲ್ಲಿ 38 ರನ್ ಗಳಿಸಿ ಔಟಾದರು.

ಪಂದ್ಯದ ಮೂರನೇ ದಿನವಾದ ಶನಿವಾರ ವಿಂಡೀಸ್ ತಂಡವು 5 ವಿಕೆಟ್‌ಗಳಿಗೆ 229 ರನ್ ಗಳಿಸಿತ್ತು. ಆದರೆ ನಾಲ್ಕನೇ ದಿನದಾಟದಲ್ಲಿ ಕೇವಲ 26 ರನ್‌ಗಳ ಅಂತರದಲ್ಲಿ ಐದು ವಿಕೆಟ್ ಕಳೆದುಕೊಂಡಿತು. ನಂತರ ಭಾರತದ ಆರಂಭಿಕ ಜೋಡಿಯು ಟಿ20 ಮಾದರಿಯಲ್ಲಿ ಬ್ಯಾಟಿಂಗ್ ಮಾಡಿತು.



ಬೌಲರ್ ಮೊಹಮ್ಮದ್ ಸಿರಾಜ್ ಸಂಭ್ರಮ —ಎಎಫ್‌ಪಿ ಚಿತ್ರ

ಶುಭಮನ್ ಗಿಲ್ (ಬ್ಯಾಟಿಂಗ್ 21) ಮತ್ತು ಇಶಾನ್ ಕಿಶನ್ (ಬ್ಯಾಟಿಂಗ್ 18) ಮುನ್ನಡೆಯನ್ನು ಹಿಗ್ಗಿಸಿದರು. ವೇಗವಾಗಿ ರನ್ ಪೇರಿಸಿ ಎದುರಾಳಿಗೆ ಸವಾಲಿನ ಗುರಿ ನೀಡಿ, ಅಂತಿಮ ದಿನ ಗೆಲುವಿಗೆ ಪ್ರಯತ್ನಿಸುವ ಲೆಕ್ಕಾಚಾರ ಭಾರತ ತಂಡದ್ದು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 438, ವೆಸ್ಟ್ ಇಂಡೀಸ್: 115.4 ಓವರ್‌ಗಳಲ್ಲಿ 255 (ಅಲಿಕ್ ಅಥನೇಜ್ 37, ಮೊಹಮ್ಮದ್ ಸಿರಾಜ್ 60ಕ್ಕೆ5, ಮುಕೇಶ್ ಕುಮಾರ್ 48ಕ್ಕೆ2, ರವೀಂದ್ರ ಜಡೇಜ 37ಕ್ಕೆ2, ಅಶ್ವಿನ್ 61ಕ್ಕೆ1) ಎರಡನೇ ಇನಿಂಗ್ಸ್: ಭಾರತ: 19 ಓವರ್‌ಗಳಲ್ಲಿ 2 ವಿಕೆಟ್‌ಗೆ 139 (ಯಶಸ್ವಿ ಜೈಸ್ವಾಲ್ 38, ರೋಹಿತ್ ಶರ್ಮಾ 57, ಗಿಲ್ ಬ್ಯಾಟಿಂಗ್ 21, ಇಶಾನ್ ಬ್ಯಾಟಿಂಗ್ 18)

ಫೈನಲ್‌ನಲ್ಲಿ ಎಡವಿದ ಭಾರತ ‘ಎ’

ಕ್ರಿಕೆಟ್: ಎಮರ್ಜಿಂಗ್ ಏಷ್ಯಾ ಕಪ್ ಗೆದ್ದ ಪಾಕಿಸ್ತಾನ ‘ಎ’

ಕೊಲಂಬೊ (ಪಿಟಿಐ): ಎಮರ್ಜಿಂಗ್ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿ ಗೆಲ್ಲಬೇಕೆಂಬ ಭಾರತ ‘ಎ’ ತಂಡದ ಕನಸನ್ನು ಪಾಕಿಸ್ತಾನ ‘ಎ’ ತಂಡ ಭಗ್ನಗೊಳಿಸಿತು.

ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯವನ್ನು ಪಾಕ್, 128 ರನ್‌ಗಳಿಂದ ಗೆದ್ದುಕೊಂಡು ಕಿರೀಟ ಮುಡಿಗೇರಿಸಿಕೊಂಡಿತು.

ಮೊದಲು ಬ್ಯಾಟ್ ಮಾಡಿದ ಪಾಕ್ ತಂಡ ತಯ್ಯಬ್ ತಾಹಿರ್ (108 ರನ್, 71 ಎ., 4X12, 4X6) ಅವರ ಅಬ್ಬರದ ಶತಕದ ನೆರವಿನಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 352 ರನ್ ಪೇರಿಸಿದರೆ, ಯಶ್ ಧುಲ್ ಬಳಗ 40 ಓವರ್‌ಗಳಲ್ಲಿ 224 ರನ್‌ಗಳಿಗೆ ಆಲೌಟಾಯಿತು.

ಟಾಸ್ ಗೆದ್ದ ಭಾರತ, ಎದುರಾಳಿ ತಂಡವನ್ನು ಬ್ಯಾಟಿಂಗ್ ಕಳುಹಿಸಿದ್ದು ಮುಳುವಾಗಿ ಪರಿಣಮಿಸಿತು. ಭಾರತದ ಈ ನಿರ್ಧಾರ ಅಚ್ಚರಿಗೆ ಕಾರಣವಾಯಿತು. ಏಕೆಂದರೆ ಈ ಟೂರ್ನಿಯ ಎಂಟು ಪಂದ್ಯಗಳಲ್ಲಿ ಮೊದಲು ಬ್ಯಾಟ್ ಮಾಡಿದ ತಂಡವೇ ಜಯಿಸಿತ್ತು.

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ ಅನುಭವ ಹೊಂದಿರುವ ಎಂಟು ಆಟಗಾರರನ್ನು ಒಳಗೊಂಡಿದ್ದ ಪಾಕ್ ತಂಡ, ಮೊದಲು ಬ್ಯಾಟ್ ಮಾಡುವ ಅವಕಾಶವನ್ನು ಚೆನ್ನಾಗಿಯೇ ಬಳಸಿಕೊಂಡಿತು. ಭಾರತ ತಂಡವು ಈ ಟೂರ್ನಿಯಲ್ಲಿ 23 ವರ್ಷದ ಒಳಗಿನ ಆಟಗಾರರನ್ನು ಮಾತ್ರ ಕಣಕ್ಕಿಳಿಸಿತ್ತು.



ತಯ್ಯಬ್ ತಾಹಿರ್ ಬ್ಯಾಟಿಂಗ್ —ಪಿಟಿಐ ಚಿತ್ರ

ಸಯಿಮ್ ಅಯೂಬ್ (59) ಮತ್ತು ಸಾಹಿಬ್‌ಝಾದಾ ಫರ್ಹಾನ್ (65) ಅವರು ಮೊದಲ ವಿಕೆಟ್‌ಗೆ 17.2 ಓವರ್‌ಗಳಲ್ಲಿ 121 ರನ್ ಸೇರಿಸಿ ಪಾಕ್ ತಂಡಕ್ಕೆ ಉತ್ತಮ ಆರಂಭ ನೀಡಿದರು. ಅಯೂಬ್ ವಿಕೆಟ್ ಪಡೆದ ಮಾನವ್ ಸುಥಾರ್ ಈ ಜತೆಯಾಟ ಮುರಿದರು. ಮುಂದಿನ 11 ಓವರ್‌ಗಳಲ್ಲಿ ಪಾಕ್ ತಂಡ 66 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು. 29ನೇ ಓವರ್‌ನಲ್ಲಿ 5 ವಿಕೆಟ್‌ಗಳಿಗೆ 187 ರನ್ ಗಳಿಸಿತ್ತು.

ಆದರೆ ತಾಹಿರ್ ಅವರು ಬಿರುಸಿನ ಹೊಡೆತಗಳ ಮೂಲಕ ಭಾರತದ ಬೌಲಿಂಗ್‌ನ ದಿಕ್ಕುತಪ್ಪಿಸಿದರು. ಮುಬಶಿರ್ ಖಾನ್ (35) ಜತೆ ಆರನೇ ವಿಕೆಟ್‌ಗೆ 16 ಓವರ್‌ಗಳಲ್ಲಿ 126 ರನ್ ಸೇರಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು.

ಸವಾಲಿನ ಮೊತ್ತ ಬೆನ್ನಟ್ಟಿದ ಭಾರತ ತಂಡಕ್ಕೆ ಅಭಿಷೇಕ್ ಶರ್ಮಾ (61 ರನ್, 51 ಎ.) ಮತ್ತು ಸಾಯಿ ಸುದರ್ಶನ್ (29 ರನ್) ಮೊದಲ ವಿಕೆಟ್‌ಗೆ 8.3 ಓವರ್‌ಗಳಲ್ಲಿ 64 ರನ್ ಸೇರಿಸಿ ಉತ್ತಮ ಆರಂಭ ನೀಡಿದ್ದರು. ಆ ಬಳಿಕ ಆಗಿಂದಾಗ್ಗೆ ವಿಕೆಟ್‌ಗಳನ್ನು ಕಳೆದುಕೊಂಡು ಸೋಲಿನ ಹಾದಿ ಹಿಡಿಯಿತು.


ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ ‘ಎ’ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 352 (ಸಯಿಮ್ ಅಯೂಬ್ 59, ಸಾಹಿಬ್‌ಝಾದಾ ಫರ್ಹಾನ್ 65, ಒಮರ್ ಯೂಸುಫ್ 35, ತಯ್ಯಬ್ ತಾಹಿರ್ 108, ಮುಬಶಿರ್ ಖಾನ್ 35, ರಾಜವರ್ಧನ್ ಹಂಗರ್ಗೇಕರ್ 48ಕ್ಕೆ 2, ರಿಯಾನ್ ಪರಾಗ್ 24ಕ್ಕೆ 2) ಭಾರತ ‘ಎ’ 40 ಓವರ್‌ಗಳಲ್ಲಿ 224 (ಸಾಯಿ ಸುದರ್ಶನ್ 29, ಅಭಿಷೇಕ್ ಶರ್ಮಾ 61, ಯಶ್ ಧುಲ್ 39, ರಿಯಾನ್ ಪರಾಗ್ 14, ಸುಫಿಯಾನ್ ಮುಖೀಮ್ 66ಕ್ಕೆ 3, ಅರ್ಷದ್ ಇಕ್ಬಾಲ್ 34ಕ್ಕೆ 2, ಮೆಹ್ರನ್ ಮಮ್ತಾಜ್ 30ಕ್ಕೆ 2) **ಫಲಿತಾಂಶ:** ಪಾಕಿಸ್ತಾನ ‘ಎ’ ತಂಡಕ್ಕೆ 128 ರನ್‌ಗಳ ಗೆಲುವು

ಟೆನಿಸ್: ನಗಾಲ್‌ಗೆ ಕಿರೀಟ

ಟಂಪೆರೆ, ಫಿನ್ಲೆಂಡ್ (ಪಿಟಿಐ): ಭಾರತದ ಸುಮಿತ್ ನಗಾಲ್ ಅವರು ಟಂಪೆರೆ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಜೆಕ್ ರಿಪಬ್ಲಿಕ್‌ನ ದಲಿಬೋರ್ ಸ್ವಿರ್ಸಿನ ಅವರನ್ನು ಮಣಿಸಿ ಚಾಂಪಿಯನ್ ಆದರಲ್ಲದೆ, ವೃತ್ತಿಜೀವನದ ನಾಲ್ಕನೇ ಚಾಲೆಂಜರ್ ಟ್ರೋಫಿಯನ್ನು ಮುಡಿಗೇರಿಸಿಕೊಂಡರು.

ಏಳನೇ ಶ್ರೇಯಾಂಕದ ಸುಮಿತ್ ಐದನೇ ಶ್ರೇಯಾಂಕದ ದಲಿಬೋರ್ ವಿರುದ್ಧ 6–4, 7–5ರಿಂದ ಗೆದ್ದರು. 25 ವರ್ಷದ ಅವರು ಎಟಿಪಿ ಚಾಲೆಂಜರ್ ಮಟ್ಟದ ಐದು ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿ, ನಾಲ್ಕನ್ನು ಗೆದ್ದಂತಾಗಿದೆ.

ಫೈನಲ್ ಪಂದ್ಯದ ಮೊದಲ ಸೆಟ್‌ನ ಆರಂಭದಲ್ಲಿ 0–3 ರಿಂದ ಹಿನ್ನಡೆ ಅನುಭವಿಸಿದ್ದ ಸುಮಿತ್, ನಂತರ ಪುಟಿದೆದ್ದು ಬೇಸ್‌ಲೈನ್‌ನಲ್ಲಿ ಉತ್ತಮ ಪ್ರದರ್ಶನ ತೋರಿ ಮೇಲುಗೈ ಸಾಧಿಸಿದರು. ಎರಡನೇ ಸೆಟ್‌ನಲ್ಲೂ ಜೆಕ್ ಆಟಗಾರ ಪ್ರಬಲ ಸವಾಲು ಒಡ್ಡಿದರು. ಒಂದು ಹಂತದಲ್ಲಿ 5–5ರಿಂದ ಸಮಬಲ ಸಾಧಿಸಿದರೂ, ಭಾರತೀಯ ಆಟಗಾರ ಸತತ ಎರಡು ಗೇಮ್ ಗೆದ್ದುಕೊಂಡರು. ಪ್ರಶಸ್ತಿ ಸುತ್ತಿನ ಸ್ಪರ್ಧೆ 1 ಗಂಟೆ 44 ನಿಮಿಷ ನಡೆಯಿತು.



ಸುಮಿತ್ ನಗಾಲ್

ಸ್ವೀಡನ್‌ಗೆ ಪ್ರಯಾಸದ ಗೆಲುವು

ಮಹಿಳಾ ವಿಶ್ವಕಪ್ ಫುಟ್‌ಬಾಲ್: ನೆದರ್ಲೆಂಡ್ಸ್ ಶುಭಾರಂಭ

ವೆಲಿಂಗ್ಟನ್ (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡದವರು ಒಡ್ಡಿದ ಅನಿರೀಕ್ಷಿತ ಪ್ರತಿರೋಧವನ್ನು ಬದಿಗೊತ್ತಿದ ಸ್ವೀಡನ್ ತಂಡ, ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ವೆಲಿಂಗ್ಟನ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಒಂದು ಗೋಲಿನ ಹಿನ್ನಡೆ ಅನುಭವಿಸಿದರೂ ಮರುಹೋರಾಟ ನಡೆಸಿದ ಸ್ವೀಡನ್, 2–1 ರಿಂದ ಗೆದ್ದಿತು.

ಹಿಲ್ಡಾ ಮಗಾಯ ಅವರು 48ನೇ ನಿಮಿಷದಲ್ಲಿ ಗೋಲು ಗಳಿಸಿ ದಕ್ಷಿಣ ಆಫ್ರಿಕಾಕ್ಕೆ ಮುನ್ನಡೆ ತಂದಿತ್ತರು. ಫ್ರಿಡೊಲಿನಾ ರೊಲ್ಫೊ (65ನೇ ನಿ.) ಮತ್ತು ಅಮಂಡಾ ಇಲೆಸ್ಟೆಡ್ (90 ನೇ ನಿ.) ಅವರು ಗೋಲು ಗಳಿಸಿ ಸ್ವೀಡನ್ ಗೆಲುವಿಗೆ ಕಾರಣರಾದರು.

ನ್ಯೂಜಿಲೆಂಡ್‌ನ ಡನೇಡಿನ್‌ನಲ್ಲಿ ನಡೆದ ಪಂದ್ಯದಲ್ಲಿ 2019ರ ಟೂರ್ನಿಯ ‘ರನ್ನರ್ ಅಪ್’ ನೆದರ್ಲೆಂಡ್ಸ್ 1–0 ಗೋಲಿನಿಂದ ಪೋರ್ಚುಗಲ್ ವಿರುದ್ಧ ಗೆದ್ದಿತು. ಡಿಫೆಂಡರ್ ಸ್ಟೆಫಾನಿ ವಾನ್ ಡೆರ್ ಗ್ರಾಟ್ ಅವರು 13ನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು. ಕಾರ್ನರ್ ಕಿಕ್‌ನಲ್ಲಿ ಲಭಿಸಿದ ಚೆಂಡನ್ನು ಹೆಡ್ ಮಾಡಿ ಅವರು ಗುರಿ ಸೇರಿಸಿದರು.



ಪೋರ್ಚುಗಲ್ ವಿರುದ್ಧ ಗೋಲು ಗಳಿಸಿದ ನೆದರ್ಲೆಂಡ್ಸ್ ತಂಡದ ಸ್ಟೆಫಾನಿ ವಾನ್ ಡೆರ್ ಗ್ರಾಟ್ (ಪೋಷಾಕು ಸಂಖ್ಯೆ 3) ಅವರು ಸಹ ಆಟಗಾರ್ತಿಯರೊಂದಿಗೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ಜಮೈಕಾ–ಫ್ರಾನ್ಸ್ ಪಂದ್ಯ ಡ್ರಾ (ಸಿಡ್ನಿ ವರದಿ): ಛಲದ ಆಟವಾಡಿದ ಜಮೈಕಾ, ರ‍್ಯಾಂಕಿಂಗ್‌ನಲ್ಲಿ 5ನೇ ಸ್ಥಾನದಲ್ಲಿರುವ ಫ್ರಾನ್ಸ್ ತಂಡವನ್ನು ಗೋಲುರಹಿತ ಡ್ರಾದಲ್ಲಿ ಕಟ್ಟಿಹಾಕಿತು. ರ‍್ಯಾಂಕಿಂಗ್‌ನಲ್ಲಿ ತನಗಿಂತ 38 ಸ್ಥಾನಗಳಷ್ಟು ಕೆಳಗಿರುವ ಎದುರಾಳಿಗಳ ವಿರುದ್ಧ ಗೋಲು ಗಳಿಸಲು ಲಭಿಸಿದ ಅವಕಾಶಗಳನ್ನು ಸದುಪಯೋಗಪಡಿಸುವಲ್ಲಿ ಫ್ರಾನ್ಸ್ ತಂಡ ಎಡವಿತು.

ಫೆಲ್ಪ್ಸ್ ದಾಖಲೆ ಮುರಿದ ಲಿಯೊನ್

ಫುಕುವೋಕಾ, ಜಪಾನ್ (ಎಎಫ್‌ಪಿ/ಎಪಿ): ಫ್ರಾನ್ಸ್‌ನ ಲಿಯೊನ್ ಮರ್ಶಾಂಡ್ ಅವರು ಅಮೆರಿಕದ ದಿಗ್ಗಜ ಈಜುಪಟು ಮೈಕಲ್ ಫೆಲ್ಪ್ಸ್ ಅವರ ಹೆಸರಿನಲ್ಲಿದ್ದ ಕೊನೆಯ ವಿಶ್ವದಾಖಲೆಯನ್ನು ಮುರಿದರು.

ಇಲ್ಲಿ ನಡೆಯುತ್ತಿರುವ ವಿಶ್ವ ಈಜು ಚಾಂಪಿಯನ್‌ಷಿಪ್‌ನಲ್ಲಿ 21 ವರ್ಷದ ಲಿಯೊನ್, ಭಾನುವಾರ ಪುರುಷರ 400 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ 4 ನಿ. 02.50 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು.

ಫೆಲ್ಪ್ಸ್ 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ 4 ನಿ.03.84 ಸೆ.ಗಳಲ್ಲಿ ಗುರಿ ತಲುಪಿದ್ದು ಇದುವರೆಗಿನ ದಾಖಲೆಯಾಗಿತ್ತು. ಈಜು ಸ್ಪರ್ಧೆಯಲ್ಲಿ ಸುದೀರ್ಘ ಅವಧಿಯವರೆಗೆ ಮುರಿಯದೇ ಇದ್ದ ದಾಖಲೆ ಇದಾಗಿತ್ತು.

ಟಿಟ್ಮಸ್ ದಾಖಲೆ: ಆಸ್ಟ್ರೇಲಿಯಾದ ಆರಿಯಾರ್ನ್ ಟಿಟ್ಮಸ್, ಮಹಿಳೆಯರ 400 ಮೀಟರ್ಸ್ ಫ್ರೀಸ್ಟೈಲ್ ಈಜಿನಲ್ಲಿ ನೂತನ ವಿಶ್ವದಾಖಲೆ ನಿರ್ಮಿಸಿದರು.

400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಅವರು ಗುರಿ ಮುಟ್ಟಲು 3ನಿಮಿಷ, 55.38 ಸೆಕೆಂಡುಗಳನ್ನು ತೆಗೆದುಕೊಂಡರು. 4 ತಿಂಗಳುಗಳ ಹಿಂದಷ್ಟೇ ಕೆನಡಾದ ಸಮ್ಮರ್ ಮೆಕ್ಲಂಟೋಷ್ (3ನಿ, 56.08ಸೆ) ನಿರ್ಮಿಸಿದ್ದ ದಾಖಲೆಯನ್ನು ಟಿಟ್ಮಸ್ ಮೀರಿ ನಿಂತರು. ಮೆಕ್ಲಂಟೋಷ್ ನಾಲ್ಕನೇ ಸ್ಥಾನ (3ನಿ,59.94ಸೆ) ಪಡೆದರು. ಅಮೆರಿಕದ ಕೇಟಿ ಲೆಡೆಕಿ (3ನಿ,58.73ಸೆ) ಮತ್ತು ನ್ಯೂಜಿಲೆಂಡ್‌ನ ಎರಿಕಾ ಫೇರ್‌ವೆದರ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಕುಸ್ತಿ: ದಹಿಯಾಗೆ ಏಷ್ಯನ್ ಗೇಮ್ಸ್ ದ್ವಾರ ಬಂದ್


ನವದೆಹಲಿ (ಪಿಟಿಐ): ಉದಯೋನ್ಮುಖ ಕುಸ್ತಿಪಟು ಅತೀಶ್ ತೋಡ್ಕರ್ ಅವರು ಭಾನುವಾರ ನಡೆದ ಟ್ರಯಲ್ಸ್‌ನಲ್ಲಿ ಒಲಿಂಪಿಕ್ ಪದಕ ವಿಜೇತ ರವಿ ದಹಿಯಾ ಅವರನ್ನು ಸೋಲಿಸಿದರು.

ಇದರಿಂದಾಗಿ ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸುವ ಅವಕಾಶವನ್ನು ರವಿ ಕಳೆದುಕೊಂಡರು. ಪುರುಷರ 57 ಕೆ.ಜಿ ವಿಭಾಗದಿಂದ ಅಮನ್ ಸೆಹ್ರಾವತ್ ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಗಿಟ್ಟಿಸಿದರು.

ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟ್ರಯಲ್ಸ್‌ನಲ್ಲಿ ಮಹಾರಾಷ್ಟ್ರದ ತೋಡ್ಕರ್ ಚುರುಕಿನ ಪಟ್ಟುಗಳನ್ನು ಹಾಕಿ ರವಿ ದಹಿಯಾಗೆ ಆಘಾತ ನೀಡಿದರು. ತೋಡ್ಕರ್ 20–8ರ ಅಂತರ ಮತ್ತು ವಿನ್ ಬೈ ಫಾಲ್‌ನಿಂದ ರವಿಯನ್ನು ಸೋಲಿಸಿದರು. ಬೌಟ್ ವೀಕ್ಷಿಸಲು ಸೇರಿದ್ದ ಕುಸ್ತಿಪ್ರೇಮಿಗಳು, ಪೈಲ್ವಾನರು ಮತ್ತು ತರಬೇತುದಾರರು ತೋಡ್ಕರ್ ವೇಗದ ಆಟಕ್ಕೆ ಅಚ್ಚರಿಗೊಂಡರು.

ಬೌಟ್‌ನ ಎರಡನೇ ಅವಧಿಯಲ್ಲಿ ದಹಿಯಾ 6–4ರ ಅಲ್ಪ ಮುನ್ನಡೆ ಗಳಿಸಿದ್ದರು. ಆದರೆ ಇದರ ನಂತರ ತೋಡ್ಕರ್ ಪಾರಮ್ಯ ಮೆರೆದರು. ಸತತ ಎರಡು ಬಾರಿ ರವಿ ದಹಿಯಾ ಅವರನ್ನು ಮಣಿಸಿದ ನಾಲ್ಕು ಅಂಕಗಳನ್ನು ಗಳಿಸಿದರು. ನಂತರವೂ ತಮ್ಮ ಪಟ್ಟುಗಳನ್ನು ಸಡಿಲಿಸಲಿಲ್ಲ.

‘ರವಿ ಫೆಬ್ರುವರಿಯಲ್ಲಿ ಬಲಗಾಲಿನ ಮಂಡಿಗಾಯದಿಂದ ಬಳಲಿದ್ದರು. ಅಸ್ಥಿಮಜ್ಜೆಯ ಗಾಯವೂ ಆಗಿತ್ತು. ಇದರಿಂದಾಗಿ ಬಹುಕಾಲ ತಾಲೀಮು ಮಾಡಿರಲಿಲ್ಲ.



ರವಿ ದಹಿಯಾ

ಲಾಹಿರು ವಿದಾಯ

ಚೆನ್ನೈ (ಪಿಟಿಐ): ಶ್ರೀಲಂಕಾ ತಂಡದ ಬ್ಯಾಟರ್ ಲಾಹಿರು ತಿರಿಮನ್ನೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದರು.

33 ವರ್ಷದ ಲಾಹಿರು 2010ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಅವರು 44 ಟೆಸ್ಟ್, 127 ಏಕದಿನ ಮತ್ತು 26 ಟಿ20 ಪಂದ್ಯಗಳನ್ನು ಆಡಿದ್ದಾರೆ. ಒಟ್ಟು 197 ಪಂದ್ಯಗಳಲ್ಲಿ 7 ಶತಕ ಮತ್ತು 31 ಅರ್ಧಶತಕಗಳೊಂದಿಗೆ 5,573 ರನ್ ಗಳಿಸಿದ್ದಾರೆ. ಏಕದಿನ ಪಂದ್ಯಗಳಲ್ಲಿ 34.71 ಸರಾಸರಿ ಹೊಂದಿದ್ದಾರೆ.

ನಿವೃತ್ತಿಯ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ‘ಈ ಕಠಿಣ ನಿರ್ಧಾರವನ್ನು ಸ್ವಇಚ್ಛೆಯಿಂದ ಅಥವಾ ಇಷ್ಟವಿಲ್ಲದೆ ತೆಗೆದುಕೊಳ್ಳಲು ನನ್ನ ಮೇಲೆ ಪ್ರಭಾವ ಬೀರಿದ ಕಾರಣಗಳನ್ನು ಬಹಿರಂಗ ಪಡಿಸಲು ಇಚ್ಛಿಸುವುದಿಲ್ಲ. ಒಬ್ಬ ಆಟಗಾರನಾಗಿ ತಂಡಕ್ಕಾಗಿ ಅತ್ಯುತ್ತಮ ಕೊಡುಗೆ ನೀಡಲು ನಿರಂತರ ಪ್ರಯತ್ನ ಮಾಡಿದ್ದೇನೆ. 13 ವರ್ಷ ದೇಶವನ್ನು ಪ್ರತಿನಿಧಿಸಲು ಅವಕಾಶ ಸಿಕ್ಕಿದಕ್ಕೆ ತುಂಬಾ ಸಂತೋಷವಾಗಿದೆ. ಬೆಂಬಲ ನೀಡಿದ ಎಲ್ಲರಿಗೂ ಧನ್ಯವಾದ’ ಎಂದು ಬರೆದುಕೊಂಡಿದ್ದಾರೆ.

ನಾಲ್ಕನೇ ಕ್ರಿಕೆಟ್ ಟೆಸ್ಟ್ ಡ್ರಾ: ಆಸ್ಟ್ರೇಲಿಯಾಕ್ಕೆ ಆ್ಯಷಸ್ ಟ್ರೋಫಿ

ಮ್ಯಾಂಚೆಸ್ಟರ್ (ರಾಯಿಟರ್ಸ್): ಆ್ಯಷಸ್ ಟೆಸ್ಟ್ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯದ ಅಂತಿಮ ದಿನದಾಟ ಮಳೆಯಿಂದಾಗಿ ರದ್ದುಗೊಂಡಿತು. ಪಂದ್ಯ ಡ್ರಾದಲ್ಲಿ ಕೊನೆಗೊಂಡ ಕಾರಣ ಆಸ್ಟ್ರೇಲಿಯಾ, ಆ್ಯಷಸ್ ಟ್ರೋಫಿಯನ್ನು ತನ್ನಲ್ಲೇ ಉಳಿಸಿಕೊಂಡಿತು.

ನಾಲ್ಕು ಪಂದ್ಯಗಳ ಬಳಿಕ ಆಸ್ಟ್ರೇಲಿಯಾ 2–1 ರಲ್ಲಿ ಮುನ್ನಡೆ ಸಾಧಿಸಿದೆ. ಈ ಪಂದ್ಯವನ್ನು ಗೆದ್ದು ಸರಣಿಯಲ್ಲಿ 2–2 ಸಮಬಲ ಸಾಧಿಸುವ ಇಂಗ್ಲೆಂಡ್‌ನ ಕನಸಿಗೆ ಮಳೆ ಅಡ್ಡಿಯಾಯಿತು. ಇದರಿಂದ ಬೆನ್ ಸ್ಟೋಕ್ಸ್ ಬಳಗವು ಐದು ಪಂದ್ಯಗಳ ಸರಣಿ ಗೆಲ್ಲುವ ಅವಕಾಶ ಕಳೆದುಕೊಂಡಿತು.

ದಿ ಓವಲ್‌ನಲ್ಲಿ ಮುಂದಿನ ವಾರ ನಡೆಯಲಿರುವ ಅಂತಿಮ ಟೆಸ್ಟ್‌ಅನ್ನು ಇಂಗ್ಲೆಂಡ್ ಗೆದ್ದರೂ ಸರಣಿ 2–2 ರಲ್ಲಿ ಸಮಬಲ ಆಗಲಿದೆ. ಕಳೆದ ಬಾರಿಯ ಸರಣಿ ಆಸ್ಟ್ರೇಲಿಯಾ ಗೆದ್ದಿರುವ ಕಾರಣ, ಆ್ಯಷಸ್ ಟ್ರೋಫಿಯನ್ನು ಪ್ಯಾಟ್ ಕಮಿನ್ಸ್ ಬಳಗ ತನ್ನಲ್ಲೇ ಉಳಿಸಿಕೊಳ್ಳಲಿದೆ.

ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 317 ರನ್ ಗಳಿಸಿದ್ದರೆ, ಇಂಗ್ಲೆಂಡ್ 592 ರನ್ ಪೇರಿಸಿತ್ತು. ನಾಲ್ಕನೇ ದಿನದಾಟದ ಅಂತ್ಯಕ್ಕೆ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗಳಿಗೆ 214 ರನ್ ಗಳಿಸಿತ್ತು. ಭಾನುವಾರ ಒಂದೂ ಎಸೆತದ ಆಟ ನಡೆಯಲಿಲ್ಲ.

ಸಂಕ್ಷಿಪ್ತ ಸುದ್ದಿ

ಏಷ್ಯನ್ ಜೂಡೊ: ಭಾರತಕ್ಕೆ 5 ಪದಕ

ಮಕಾವ್ (ಪಿಟಿಐ): ಭಾರತದ ಸ್ಪರ್ಧಿಗಳು ಮಕಾವ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಜೂನಿಯರ್ ಜೂಡೊ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನ ಸೇರಿದಂತೆ ಐದು ಪದಕಗಳನ್ನು ಗೆದ್ದುಕೊಂಡರು.

ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಅಸ್ಮಿತಾ ಡೆ, 63 ಕೆ.ಜಿ. ವಿಭಾಗದಲ್ಲಿ ಉನ್ನತಿ ಶರ್ಮಾ ಮತ್ತು ಪುರುಷರ 73 ಕೆ.ಜಿ. ವಿಭಾಗದಲ್ಲಿ ಅರುಣ್ ಕುಮಾರ್ ಅವರು ಚಿನ್ನ ಜಯಿಸಿದರು.

ಪುರುಷರ 100 ಪ್ಲಸ್ ಕೆ.ಜಿ. ವಿಭಾಗದಲ್ಲಿ ಯಶ್ ಗಂಗಾಸ್ ಬೆಳ್ಳಿ ಗೆದ್ದರು. ಅವರು ಫೈನಲ್‌ನಲ್ಲಿ ಮಂಗೋಲಿಯದ ಖಾಂಗರಿಡ್ ಗಾಂಟಲ್ಗಾ ಎದುರು ಪರಾಭವಗೊಂಡರು. ಮಹಿಳೆಯರ 52 ಕೆ.ಜಿ. ವಿಭಾಗದಲ್ಲಿ ಶ್ರದ್ಧಾ ಅವರು ಕಂಚು ತಮ್ಮದಾಗಿಸಿಕೊಂಡರು.

ಶೂಟಿಂಗ್: ಭಾರತಕ್ಕೆ ಬೆಳ್ಳಿ

ನವದೆಹಲಿ (ಪಿಟಿಐ): ಬಖ್ತ್ಯಾರುದ್ದೀನ್ ಮಾಲೆಕ್, ಶಾರ್ದೂಲ್ ವಿಹಾನ್ ಮತ್ತು ಆರ್ಯವಂಶ್ ತ್ಯಾಗಿ ಅವರನ್ನೊಳಗೊಂಡ ಭಾರತ ತಂಡವು ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಷಿಪ್ ಟ್ರ್ಯಾಪ್ ವಿಭಾಗದಲ್ಲಿ ಬೆಳ್ಳಿ ಜಯಿಸಿತು.

ಇದು ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ದೊರೆದ 15ನೇ ಪದಕ. ಭಾರತದ ತಂಡ 346 ಪಾಯಿಂಟ್ಸ್ ಗಳಿಸಿತು. ಇಟಲಿಯ ತಂಡ (356) ಚಿನ್ನದ ಪದಕ ಗಳಿಸಿತು.

ಜೊನರೇವಾ ಪೋಲೆಂಡ್ ಪ್ರವೇಶಕ್ಕೆ ನಿಷೇಧ

ವಾರ್ಸಾ, ಪೋಲೆಂಡ್ (ಪಿಟಿಐ): ರಷ್ಯಾದ ಟೆನಿಸ್ ಆಟಗಾರ್ತಿ ವೆರಾ ಜೊನರೇವಾ ಅವರು ಪೋಲೆಂಡ್ ಪ್ರವೇಶಿಸುವುದಕ್ಕೆ ನಿಷೇಧ ಹೇರಲಾಗಿದೆ ಎಂದು ಅಲ್ಲಿನ ಒಳಾಡಳಿತ ಸಚಿವಾಲಯ ತಿಳಿಸಿದೆ.

ಜೊನರೇವಾ ಅವರು ವಾರ್ಸಾದಲ್ಲಿ ಸೋಮವಾರ ಆರಂಭವಾಗಲಿರುವ ಡಬ್ಲ್ಯುಟಿಎ ಟೂರ್ನಿಯಲ್ಲಿ ಪಾಲ್ಗೊಳ್ಳಬೇಕಿತ್ತು. ಫ್ರಾನ್ಸ್ ವೀಸಾ ಹೊಂದಿರುವ ಅವರು ಬೆಲ್‌ಗ್ರೇಡ್‌ನಿಂದ ಶುಕ್ರವಾರ ವಾರ್ಸಾಕ್ಕೆ ಬಂದಿಳಿದಿದ್ದರು. ಆದರೆ ವಿಮಾನ ನಿಲ್ದಾಣದಿಂದ ಹೊರಗೆ ಹೋಗಲು ಅವಕಾಶ ನಿರಾಕರಿಸಲಾಯಿತು. ಅವರು ವಾರ್ಸಾದಿಂದ ಶನಿವಾರ ಮಾಂಟೆನೆಗ್ರೊಗೆ ಪ್ರಯಾಣಿಸಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧದಲ್ಲಿ ಪೋಲೆಂಡ್ ಸರ್ಕಾರವು ಉಕ್ರೇನ್‌ಗೆ ಬೆಂಬಲ ನೀಡಿದೆ. ‘ರಷ್ಯಾ ಮತ್ತು ಬೆಲಾರಸ್ ನಡೆಸುತ್ತಿರುವ ಯುದ್ಧವನ್ನು ಬೆಂಬಲಿಸುವವರು ನಮ್ಮ ದೇಶಕ್ಕೆ ಪ್ರವೇಶಿಸಲು ಅವಕಾಶವಿಲ್ಲ’ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ. 38 ವರ್ಷದ ಜೊನರೇವಾ ಅವರ ಹೆಸರು ನಿಷೇಧಿತರ ಪಟ್ಟಿಯಲ್ಲಿ ಇದೆ ಎಂದಿದೆ.

ಚೆಸ್: ವೆನ್‌ಜುನ್‌ಗೆ ವಿಶ್ವ ಕಿರೀಟ

ಶಾಂಘೈ: ಚೀನಾದ ಜು ವೆನ್‌ಜುನ್ ಅವರು ಮಹಿಳೆಯರ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಕಿರೀಟವನ್ನು ತಮ್ಮಲ್ಲೇ ಉಳಿಸಿಕೊಂಡಿದ್ದಾರೆ.

ಮಹಿಳೆಯರ ವಿಭಾಗದ ವಿಶ್ವಚಾಂಪಿಯನ್‌ಅನ್ನು ನಿರ್ಧರಿಸಲು ಶಾಂಘೈನಲ್ಲಿ ನಡೆದ ಪೈಪೋಟಿಯಲ್ಲಿ ವೆನ್‌ಜುನ್ ತಮ್ಮದೇ ದೇಶದ ಲೀ ತಿಂಗ್‌ಜೀ ಅವರನ್ನು ಮಣಿಸಿದರು. 12 ಪಂದ್ಯಗಳ ಹಣಾಹಣಿಯನ್ನು ವೆನ್‌ಜುನ್ 6.5–5.5 ಪಾಯಿಂಟ್ಸ್‌ಗಳಿಂದ ಗೆದ್ದುಕೊಂಡರು.

11 ಸುತ್ತುಗಳ ಬಳಿಕ ಇಬ್ಬರೂ 5.5–5.5 ಪಾಯಿಂಟ್ಸ್‌ಗಳಿಂದ ಸಮಬಲ ಸಾಧಿಸಿದ್ದರು. 12ನೇ ಹಾಗೂ ಕೊನೆಯ ಪಂದ್ಯವನ್ನು 40 ನಡೆಗಳಲ್ಲಿ ಗೆದ್ದುಕೊಂಡ ವೆನ್‌ಜುನ್ ಚಾಂಪಿಯನ್ ಆದರು. 32 ವರ್ಷದ ವೆನ್‌ಜುನ್ 12 ಪಂದ್ಯಗಳಲ್ಲಿ ಎರಡನ್ನು ಗೆದ್ದು, ಒಂದರಲ್ಲಿ ಸೋತರು. ಇತರ ಒಂಬತ್ತು ಪಂದ್ಯಗಳನ್ನು ಡ್ರಾ ಮಾಡಿಕೊಂಡರು.

ದೇವಧರ್ ಟ್ರೋಫಿ ಕ್ರಿಕೆಟ್ ಇಂದಿನಿಂದ

ಕಣದಲ್ಲಿ ಕಾವೇರಪ್ಪ, ವೈಶಾಖ

ಪುದುಚೇರಿ (ಪಿಟಿಐ): ನಾಲ್ಕು ವರ್ಷಗಳ ನಂತರ ಮತ್ತೆ ದೇವಧರ್ ಟ್ರೋಫಿ ಕ್ರಿಕೆಟ್ ಟೂರ್ನಿ ಆರಂಭವಾಗಲಿದೆ. ಕರ್ನಾಟಕದ ಉದಯೋನ್ಮುಖ ವೇಗಿಗಳಾದ ವಿದ್ವತ್ ಕಾವೇರಪ್ಪ ಮತ್ತು ವೈಶಾಖ ವಿಜಯಕುಮಾರ್ ಕಣಕ್ಕಿಳಿಯಲಿದ್ದಾರೆ.

ಸೋಮವಾರದಿಂದ 11 ದಿನಗಳ ಕಾಲ ನಿಗದಿಯ ಓವರ್‌ಗಳ ಪಂದ್ಯಗಳು ನಡೆಯಲಿವೆ. ಲಿಸ್ಟ್ ಎ ದರ್ಜೆಯ (ಫಿಫ್ಟಿ–50)ಈ ಟೂರ್ನಿಯಲ್ಲಿ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ, ಕೇಂದ್ರ ಮತ್ತು ಈಶಾನ್ಯ ವಲಯದ ತಂಡಗಳು ಪೈಪೋಟಿ ನಡೆಸಲಿವೆ.

ಇದೇ ವರ್ಷ ಭಾರತದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ನಡೆಯಲಿದೆ. ಅದರಿಂದಾಗಿ ಭಾರತ ತಂಡದ ಕೆಲವು ಅನುಭವಿ ಆಟಗಾರರಿಗೆ ವಿಶ್ವಕಪ್ ಮುನ್ನ ನಡೆಯುವ ಕೆಲವು ಸರಣಿಗಳಲ್ಲಿ ಕಾರ್ಯಭಾರ ಒತ್ತಡದ ನಿವಾರಣೆಗಾಗಿ ವಿಶ್ರಾಂತಿ ಕೊಡುವ ಸಾಧ್ಯತೆಗಳಿವೆ. ಆದ್ದರಿಂದ ಅವರ ಬದಲಿಗೆ ಯುವ ಆಟಗಾರರಿಗೆ ಆಡಲು ಅವಕಾಶ ಸಿಗುವ ನಿರೀಕ್ಷೆ ಇರುವುದರಿಂದ ಈ ಟೂರ್ನಿ ಬಹಳಷ್ಟು ಮಹತ್ವ ಪಡೆದುಕೊಂಡಿದೆ.

ಇಂದಿನ ಪಂದ್ಯಗಳು
ಪೂರ್ವ ವಲಯ–ಕೇಂದ್ರ ವಲಯ
ಪಶ್ಚಿಮ ವಲಯ–ಈಶಾನ್ಯ ವಲಯ
ಆರಂಭ: ಬೆಳಿಗ್ಗೆ 9
ಉತ್ತರ ವಲಯ–ದಕ್ಷಿಣ ವಲಯ
ಆರಂಭ: ಮಧ್ಯಾಹ್ನ 1.30

ಅದರಲ್ಲೂ ವೇಗದ ಬೌಲರ್‌ಗಳ ಮೇಲೆ ವಿಶೇಷ ನಿಗಾ ಇದೆ. ಭಾರತ ತಂಡದ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ ಮತ್ತು ಮೊಹಮ್ಮದ್ ಸಿರಾಜ್ ಅವರಿಗೆ ವಿಶ್ರಾಂತಿ ಕೊಟ್ಟಾಗ ಸಮರ್ಥ ಯುವ ಬೌಲರ್‌ಗಳನ್ನು ಸಿದ್ಧಗೊಳಿಸಲು ಈ ಟೂರ್ನಿ ವೇದಿಕೆಯಾಗಿದೆ.

ಈಚೆಗೆ ಮುಕ್ತಾಯವಾದ ದುಲೀಪ್ ಟ್ರೋಫಿಯಲ್ಲಿ ದಕ್ಷಿಣ ವಲಯ ಚಾಂಪಿಯನ್ ಆಗಲು ವಿದ್ವತ್ ಮತ್ತು ವೈಶಾಖ ಪ್ರಮುಖ ಪಾತ್ರ ವಹಿಸಿದ್ದರು. ಇಬ್ಬರೂ ಜಂಟಿಯಾಗಿ ಒಟ್ಟು 24 ವಿಕೆಟ್ ಗಳಿಸಿದ್ದರು. ವಿದ್ವತ್ ಸರಣಿಶ್ರೇಷ್ಠ ಗೌರವಕ್ಕೆ ಪಾತ್ರರಾಗಿದ್ದರು. ದಕ್ಷಿಣ ತಂಡವನ್ನು ಕರ್ನಾಟಕದ ಮಯಂಕ್ ಅಗರವಾಲ್ ಮುನ್ನಡೆಸುವರು. ಬ್ಯಾಟರ್ ದೇವದತ್ತ ಪಡಿಕ್ಕಲ್, ಮಧ್ಯಮವೇಗಿ ವಿ. ಕೌಶಿಕ್ ಕೂಡ ತಂಡದಲ್ಲಿದ್ದಾರೆ.

ರಣಜಿ ಋತುವಿನಲ್ಲಿ ಗೋವಾ ತಂಡವನ್ನು ಪ್ರತಿನಿಧಿಸುತ್ತಿರುವ ಅರ್ಜುನ್ ತೆಂಡೂಲ್ಕರ್ ಕೂಡ ದಕ್ಷಿಣ ವಲಯದಲ್ಲಿದ್ದಾರೆ. ದಿಗ್ಗಜ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ಎಡಗೈ ಮಧ್ಯಮವೇಗದ ಆಲ್‌ರೌಂಡರ್ ಆಗಿದ್ದಾರೆ.

ಉತ್ತರಾಖಂಡದ ಮಧ್ಯಮವೇಗಿ ಆಕಾಶ್ ಮಧ್ವಾಲ್ ಕೂಡ ಈ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಐಪಿಎಲ್‌ನಲ್ಲಿ ಅವರು ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸಿದ್ದರು. ಕರ್ನಾಟಕದ ಯುವ ಬ್ಯಾಟರ್ ನಿಕಿನ್ ಜೋಸ್, ಆಲ್‌ರೌಂಡರ್ ಹರ್ಷಿತ್ ರಾಣಾ, ನಿಶಾಂತ್ ಸಿಂಧು ಮತ್ತು ಬಿ ಸಾಯಿ ಸುದರ್ಶನ್ ಕೂಡ ಕಣಕ್ಕಿಳಿಯಲಿದ್ದಾರೆ. ಅವರು ಕೊಲಂಬೊದಲ್ಲಿ ನಡೆದ ಎಮರ್ಜಿಂಗ್ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ ಎ ತಂಡದಲ್ಲಿ ಆಡಲು ತೆರಳಿದ್ದರು.